ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪಥಮಾಪ್ತ ಪತ್ರಿಕೆ



₹ 14

ಸೆಪ್ಟೆಂಬರ್ 2017

ರಾಮಕೃಷ್ಣ ಮಹಾಸಂಘದ ೧೬ನೇ ಪರಮಾಧ್ಯಕ್ಷರು




ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್

ರಾಮಕೃಷ್ಣ ಮಹಾಸಂಘದ ಹೊಸ ಪರಮಾಧ್ಯಕ್ಷರು

೨೦೧೭ರ ಜುಲೈ ೧೭ರಂದು ನಡೆದ ರಾಮಕೃಷ್ಣ ಮಠದ ವಿಶ್ವಸ್ತಮಂಡಳಿ ಹಾಗೂ ರಾಮಕೃಷ್ಣ ಮಿಷನ್ನಿನ ಆಡಳಿತ ಸಮಿತಿಯ ಸಭೆಯಲ್ಲಿ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರನ್ನು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರನ್ನಾಗಿ ಆರಿಸಲಾಯಿತು. ಅವರು ಮಹಾಸಂಘದ ೧೬ನೇ ಪರಮಾಧ್ಯಕ್ಷರಾಗಿದ್ದಾರೆ.

ಪರಮಪೂಜ್ಯ ಸ್ವಾಮೀಜಿಯವರು ೧೯೨೯ರಲ್ಲಿ ತಮಿಳುನಾಡಿನ ತಂಜಾವೂರು ಜಿಲ್ಲೆಯ ಅಂದಾಮಿ ಎಂಬ ಹಳ್ಳಿಯಲ್ಲಿ ಜನಿಸಿದರು. ತೀರ ಎಳೆಯ ವಯಸ್ಸಿನಲ್ಲಿಯೇ ಅವರ ತಾಯಿ ತೀರಿಕೊಂಡರು. ಅವರ ಅತ್ತೆಯೇ ಅವರನ್ನು ಬೆಳೆಸಿದರು. ೧೯೪೬ರಲ್ಲಿ ಅವರು ಚೆನ್ನೈನಲ್ಲಿ ಉತ್ತಮ ಫಲಿತಾಂಶದೊಂದಿಗೆ ತಮ್ಮ ಸೆಕೆಂಡರಿ ತರಗತಿಯನ್ನು ಪೂರೈಸಿದರು. ಅವರ ತಂದೆ ನಾಸಿಕ್‌ನಲ್ಲಿ ಉದ್ಯೋಗದಲ್ಲಿದ್ದುದರಿಂದ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ಅಲ್ಲಿಗೆ ತೆರಳಿದರು. ಕಾಮರ್ಸ್‌ನಲ್ಲಿ ಡಿಪ್ಲೊಮಾ ಪದವಿಯನ್ನು ಪಡೆದ ಅವರು ಮುಂದೆ ೧೯೪೯ರಲ್ಲಿ ಮುಂಬೈಗೆ ಹೋಗಿ, ಅಲ್ಲಿ ಉದ್ಯೋಗ ಮಾಡುತ್ತ ತಮ್ಮ ಅಧ್ಯಯನವನ್ನು ಮುಂದುವರೆಸಿದರು.



ಸ್ವಾಮೀಜಿಯವರು ವ್ಯಾಪಕವಾಗಿ ಓದುವ ಹವ್ಯಾಸವುಳ್ಳವರಾಗಿದ್ದರು. ಅವರು ಅನೇಕ ಇಂಗ್ಲಿಷ್ ಸಾಹಿತ್ಯ ಕೃತಿಗಳನ್ನು ಹಾಗೂ ನೆಪೋಲಿಯನ್ ಹಿಲ್ ಬರೆದ 'ಸ್ವ-ಸಹಾಯ' (self-help) ವಿಷಯಕವಾದ ಗ್ರಂಥಗಳನ್ನು ಓದಿದರು. ಮಹಾತ್ಮಾ ಗಾಂಧೀಜಿಯವರ ಚಿಂತನೆಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಗಾಂಧೀಜಿಯವರು ನಿರ್ದೇಶಿಸಿದಂತೆ 'ಶ್ರೀರಾಮ' ಎಂದು ನಾಮಜಪ ಮಾಡುವುದನ್ನು ರೂಢಿಸಿಕೊಂಡರು. ಇದು ಅವರ ಜೀವನದಲ್ಲೇ ಒಂದು ಹೊಸ ತಿರುವನ್ನು ನೀಡಿತು ಹಾಗೂ ಅವರ ಮುಂದಿನ ಜೀವನವನ್ನು ರೂಪಿಸುವುದರಲ್ಲಿ ಮಹತ್ತರ ಪಾತ್ರವನ್ನು ವಹಿಸಿತು. ಕೆಲವೊಮ್ಮೆ ಅವರು ಮುಂಬೈನಲ್ಲಿರುವ ವೋರ್ಲಿ ಸಮುದ್ರತೀರಕ್ಕೆ ಹೋಗಿ ಏಕಾಂತವಾಗಿ ನಡೆದಾಡಿ, ಅಲ್ಲಿನ ದೊಡ್ಡ ಬಂಡೆಗಳ ಮೇಲೆ ಕುಳಿತು ಸೂರ್ಯಾಸ್ತವನ್ನು ನೋಡುತ್ತ ಮೌನವಾಗಿ ಕಾಲ ಕಳೆಯುತ್ತಿದ್ದರು. ಒಂದು ದಿನ ಹೀಗೆ ಕುಳಿತಿದ್ದಾಗ ಅವರ ಮನಸ್ಸಿನಲ್ಲೊಂದು ಆಲೋಚನೆ ಮೂಡಿ ಬಂತು: 'ನಿಜ, ಈ ಬಂಡೆಗಳು ದೊಡ್ಡ ಗಾತ್ರದವು; ಸಮುದ್ರ ವಿಶಾಲವಾಗಿದೆ, ಆಕಾಶ ಅನಂತವಾಗಿದೆ. ಹಾಗಿದ್ದರೆ ನಾನು ಏನಾಗಿದ್ದೇನೆ? ವಿಶಾಲವಾದ ಭೂಮಿಯ ಮೇಲ್ಮೈಯಲ್ಲಿ ಒಂದು ಕಣ ಮಾತ್ರ. ಆದ ಕಾರಣ, ಇದಕ್ಕೆ ಅಷ್ಟೊಂದು ಮಹತ್ವವನ್ನೇಕೆ ನೀಡಬೇಕು?' ಕೂಡಲೇ ಉತ್ತರ ಮಿಂಚಿತು: 'ಈ ವಿಶಾಲ ಭೂಮಿಯ ಮೇಲ್ಮೈಯಲ್ಲಿ ನೀನೇನೋ ಕಣದಂತೆ ಕಾಣಿಸುತ್ತೀಯ, ನಿಜ. ಆದರೆ ನಿನ್ನೊಳಗಿರುವ ಮಹಾನ್ ಅಸ್ತಿತ್ವ ಮಾತ್ರ ಈ ಜಗತ್ತಿಗಿಂತಲೂ ದೊಡ್ಡದು.' ಈ ಆಲೋಚನೆ ತುಂಬ ಶಕ್ತಿಪೂರ್ಣವಾಗಿತ್ತು – ಯಾರೋ ಈ ಮಾತುಗಳನ್ನು ತಮ್ಮ ಕಿವಿಗಳ ಸಮೀಪ ಉಲಿಯುತ್ತಿರುವಂತೆ ಅವರಿಗೆ ಭಾಸವಾಗಿತ್ತು. ಅವರ ಮನಸ್ಸಿನಲ್ಲಿ ಈ ಆಲೋಚನೆ ಸ್ಥಿರವಾಗಿ ನಿಂತುಬಿಟ್ಟಿತು. ಆಗಿನ್ನೂ ಅವರು ಗೀತೆ, ಉಪನಿಷತ್ತುಗಳನ್ನು ಓದಿರಲಿಲ್ಲ.



ಆಗ ಅವರು ವಿದ್ಯಾರ್ಥಿನಿಲಯದಲ್ಲಿದ್ದರು. ಒಂದು ದಿನ ಒಬ್ಬ ಸ್ನೇಹಿತನೊಂದಿಗೆ ನಡೆದಾಡುತ್ತಿದ್ದಾಗ, ಅವನು ಮುಂಬೈನ ರಾಮಕೃಷ್ಣ ಮಿಷನ್ ಶಾಖೆಯ ವಿಚಾರವಾಗಿ ಅವರಿಗೆ ತಿಳಿಸಿದ. ಅದಕ್ಕೆ ಅವರು, ''ಮುಂಬೈಯಲ್ಲೂ ಅಂಥಾ ಒಂದು ಸ್ಥಳವಿದೆಯೆ? ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೀಯಾ?'' ಎಂದು ಕೇಳಿದರು. ಅದಕ್ಕೆ ಸ್ನೇಹಿತ, ''ಖಂಡಿತ. ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಆದರೆ ಈ ವಿಷಯವನ್ನು ಬೇರೆ ಯಾರಿಗೂ ಹೇಳಬೇಡ'' ಎಂದ. ಹೀಗೆ ಅವರು ವಾರದ ಕೊನೆಯ ದಿನಗಳಲ್ಲಿ ಮುಂಬೈ ಆಶ್ರಮಕ್ಕೆ ಹೋಗಲಾರಂಭಿಸಿದರು. Gospel of Sri Ramakrishna, Jnana Yoga, ಮತ್ತು Thoughts of Power ಇವುಗಳನ್ನು ಪ್ರಧಾನವಾಗಿ ಓದುತ್ತಿದ್ದರು; ಅವುಗಳಿಂದ ಅವರು ತುಂಬ ಒಳನೋಟ, ಸ್ಫೂರ್ತಿ ಪಡೆಯುತ್ತಿದ್ದರು. 'ಈ ಜೀವನಕ್ಕೆ ಆಧಾರವೇನು?' 'ಜೀವನದಲ್ಲಿ ನನ್ನ ಆದರ್ಶವೇನು?' ಎಂಬ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕಂಡುಕೊಳ್ಳುವ ತುಡಿತ ಅವರ ಮನಸ್ಸನ್ನು ಒಂದೇ ಸಮನೆ ಕಾಡುತ್ತಿತ್ತು.



೪೩ನೇ ಪುಟಕ್ಕೆ...

ವಿವೇಕಪ್ರಭ

ಸೆಪ್ಟೆಂಬರ್-2017

ಸಂಪುಟ 18 ಸಂಚಿಕೆ 09



ವಿಶೇಷ ಲೇಖನ



ಧಾರಾವಾಹಿ

ವ್ಯವಸ್ಥಾಪಕ ಸಂಪಾದಕರು

ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು

ಸ್ವಾಮಿ ಜ್ಞಾನಯೋಗಾನಂದ

ನೆರವು:

ಆರ್. ಎಸ್. ಪೂರ್ಣಾನಂದ

ಡಾ. ಕೆ. ಎಲ್. ಪ್ರಸನ್ನಾಕ್ಷೀ

ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ

ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ:

ಶ್ರೀದುರ್ಗೆ-ಮೈಸೂರು ಶೈಲಿಯ ಚಿತ್ರ

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

E-mail: mysuru.vivekaprabha@rkmm.org

Website: www.vivekaprabha.net

ಫೋನ್ : 9481533505

ಚಂದಾ ವಿವರ

ಬಿಡಿ ಪ್ರತಿ : ₹ 14

ವಾರ್ಷಿಕ : ₹ 140

ಮೂರು ವರ್ಷ : ₹ 375

ಆಜೀವ (25 ವರ್ಷ) : ₹ 3,000

ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್)

ವಾರ್ಷಿಕ : $ 20; ಮೂರು ವರ್ಷ : $ 60

ಆಜೀವ (25ವರ್ಷ) : $ 300

ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಾರ್ಥನೆ

ಶ್ರೀದುರ್ಗಾಚಂದ್ರಕಲಾ ಸ್ತುತಿಯಿಂದ



ಅಭ್ಯರ್ಥನೇನ ಸರಸೀರುಹಸಂಭವಸ್ಯ
ತ್ಯಕ್ತ್ವೋದಿತಾ ಭಗವದಕ್ಷಿಪಿಧಾನಲೀಲಾಂ ।
ವಿಶ್ವೇಶ್ವರೀ ವಿಪದಪಾಗಮನೇ ಪುರಸ್ತಾ-
ನ್ಮಾತಾ ಮಮಾಸ್ತು ಮಧುಕೈಟಭಯೋರ್ನಿಹಂತ್ರೀ ॥ ೧ ॥

ಬ್ರಹ್ಮದೇವನ ಪ್ರಾರ್ಥನೆಯಿಂದ ಮಹಾವಿಷ್ಣುವಿನ ಕಣ್ಣನ್ನು ಮುಚ್ಚಿಕೊಂಡಿರುವ ಲೀಲೆಯನ್ನು ಬಿಟ್ಟು ಪ್ರತ್ಯಕ್ಷಳಾದ, ಮಧು ಮತ್ತು ಕೈಟಭ ಎಂಬ ಇಬ್ಬರು ಮಹಾದೈತ್ಯರನ್ನು ಸಂಹರಿಸಿದ, ಜಗದೀಶ್ವರಿಯಾಗಿ ಜಗನ್ಮಾತೆಯಾದ ಶ್ರೀ ಮಹಾಕಾಳಿಯು ನನ್ನ ವಿಪತ್ತುಗಳನ್ನು ಪರಿಹರಿಸಲು ಮುಂದೆ ಬರಲಿ.



ಪ್ರಾಙ್ನಿರ್ಜರೇಷು ನಿಹಿತೈರ್ನಿಜಶಕ್ತಿಲೇಶೈಃ
ಏಕೀಭವದ್ಭಿರುದಿತಾಖಿಲಲೋಕಗುಪ್ತ್ಯೈ ।
ಸಂಪನ್ನಶಸ್ತ್ರನಿಕರಾ ಚ ತದಾಯುಧಸ್ಥೈಃ
ಮಾತಾ ಮಮಾಸ್ತು ಮಹಿಷಾಂತಕರೀ ಪುರಸ್ತಾತ್ ॥ ೨ ॥

ಮೊದಲು ದೇವತೆಗಳಲ್ಲಿ ಇಟ್ಟಿದ್ದ ತನ್ನ ಅಲ್ಪ ಶಕ್ತಿಗಳೆಲ್ಲ ಒಂದಾಗಿ ಸೇರಿ ಇಡೀ ಜಗತ್ತಿನ ರಕ್ಷಣೆಗಾಗಿ ಅವತರಿಸಿ, ಅವುಗಳ ಶಕ್ತಿಗಳಿಂದ ತನ್ನ ಆಯುಧಗಳ ಸಂಪತ್ತನ್ನು ವರ್ಧಿಸಿಕೊಂಡು, ಮಹಿಷಾಸುರನನ್ನು ಸಂಹರಿಸಿದ ಜಗನ್ಮಾತೆ ಶ್ರೀಮಹಾಲಕ್ಷ್ಮಿಯು ನನಗೆ ಪ್ರತ್ಯಕ್ಷಳಾಗಿ ಅನುಗ್ರಹಿಸಲಿ.



ಪ್ರಾಲೇಯಶೈಲತನಯಾ ತನುಕಾಂತಿ ಸಂಪ-
ತ್ಕೋಶೋದಿತಾ ಕುವಲಯಚ್ಛವಿಚಾರು ದೇಹಾ ।
ನಾರಾಯಣೀ ನಮದಭೀಪ್ಸಿತ ಕಲ್ಪವಲ್ಲೀ
ಸುಪ್ರೀತಮಾವಹತು ಶುಂಭನಿಶುಂಭ ಹಂತ್ರೀ ॥ ೩ ॥

ಪರ್ವತರಾಜನ ಮಗಳಾದ ಪಾರ್ವತಿಯ ದೇಹದಿಂದ ದಿವ್ಯತೇಜಸ್ಸಿನಿಂದ ವ್ಯಕ್ತಳಾಗಿ, ಕೆನ್ನೈದಿಲೆಯ ಕಾಂತಿಯಿಂದ ಬೆಳಗುವ ಮನೋಹರ ದೇಹವನ್ನುಳ್ಳ, ನಮಸ್ಕರಿಸಿ ಶರಣು ಬಂದವರ ಇಷ್ಟಾರ್ಥಗಳೆಲ್ಲವನ್ನೂ ಕರುಣಿಸುವ ಕಲ್ಪಲತೆಯಾಗಿರುವ, ಶುಂಭ ನಿಶುಂಭರೆಂಬ ರಾಕ್ಷಸರನ್ನು ನಾಶ ಮಾಡಿದ ನಾರಾಯಣೀ ಸ್ವರೂಪಳಾದ ಶ್ರೀ ಸರಸ್ವತೀದೇವಿಯು ನನ್ನಲ್ಲಿ ವಿಶೇಷವಾದ ಪ್ರೀತಿಯನ್ನು ಇಡಲಿ.

– ಅಪ್ಪಯ್ಯ ದೀಕ್ಷಿತರು

ಸೂಕ್ತಿಪ್ರಭ

ಬೆಳಕನ್ನು ನಾವು ಹೊರಗೆಲ್ಲೂ ಕಾಣಲಾರೆವು. ಅದೆಲ್ಲ ನಮ್ಮೊಳಗೇ ಇರುವುದು. ಬೆಳಕಿನ ವ್ಯಕ್ತರೂಪವಾದ ಜಗನ್ಮಾತೆ ಪ್ರತಿಯೊಂದು ಜೀವಿಯ ಹೃದಯದಲ್ಲೂ ನೆಲೆಸಿದ್ದಾಳೆ.

–ಸ್ವಾಮಿ ಶಿವಾನಂದ

ಜಗನ್ಮಾತೆಯನ್ನು ಅರಿತಾಗ ಎಲ್ಲ ಮೋಹಗಳೂ ಮಾಯವಾಗುವುವು. ಆಗ ಜಗತ್ತು ತುಂಬ ಚಿಕ್ಕದಾಗುವುದು, ತೀರ ಕ್ಷುಲ್ಲಕವಾಗುವುದು — ಮಣ್ಣಿನ ಮುದ್ದೆಯಂತೆ.

–ಸ್ವಾಮಿ ತುರೀಯಾನಂದ

ನಾವು ಜಗನ್ಮಾತೆಯ ಸೇವಕರು ಎಂದು ಹೇಳುವುದು ಆಕೆಗೆ ಇಷ್ಟವಾಗದು. ನಾವು ಅವಳ ಮಕ್ಕಳು, ಸೇವಕರಲ್ಲ. ನೀನು ಅವಳ ಮಗುವೆಂದೇ ಯಾವಾಗಲೂ ಭಾವಿಸು.

–ಸ್ವಾಮಿ ರಾಮಕೃಷ್ಣಾನಂದ

ಎಲ್ಲದರಲ್ಲೂ ಜಗನ್ಮಾತೆ ನೆಲೆಸಿದ್ದಾಳೆ ಹಾಗೂ ವ್ಯಾಪಿಸಿಕೊಂಡಿದ್ದಾಳೆ ಎಂದೇ ನಿಶ್ಚಯವಾಗಿಯೂ ತಿಳಿದುಕೋ. ಸುಖವಾಗಲಿ, ದುಃಖವಾಗಲಿ – ಎಲ್ಲದರಲ್ಲೂ ಅವಳಿದ್ದಾಳೆ.

–ಸ್ವಾಮಿ ಸುಬೋಧಾನಂದ

ಶ್ರೀರಾಮಕೃಷ್ಣ ಶಾರದಾಶ್ರಮ

ಪೊನ್ನಂಪೇಟೆ –571 216, ಕೊಡಗು ಜಿಲ್ಲೆ ಫೋನ್: 9448413233
srksevaponnampet@gmail.com
Web: www.rkmponnampet.org

ಆಧ್ಯಾತ್ಮಿಕ ಶಿಬಿರ

6–10–2017 ರಿಂದ 8–10–2017

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ **8ನೇ** ವಾರ್ಷಿಕೋತ್ಸವದ ಪ್ರಯುಕ್ತ, **2017 ಅಕ್ಟೋಬರ್ 6 ರಿಂದ 8 ರವರೆಗೆ,** 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಅಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ರಾಘವೇಶಾನಂದಜಿ, ನಿತ್ಯಸ್ಥಾನಂದಜಿ, ಜಿತಕಾಮಾನಂದಜಿ, ಆತ್ಮಜ್ಞಾನಂದಜಿ ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

ನೋಂದಣಿ ಶುಲ್ಕ : *ವಸತಿ ರಹಿತ :* **ರೂ. 800/–** *ವಸತಿ ಸಹಿತ :* **ರೂ. 1200/–**

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 1.10.2017

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಗಾಗಿ ಆಶ್ರಮದ ವೆಬ್‌ಸೈಟ್ ನೋಡಿ.)

ವಿ.ಸೂ: ಬೆಂಗಳೂರಿನ ಶಿಬಿರಾರ್ಥಿಗಳಿಗೆ ಬರಲು ಮತ್ತು ಹಿಂದಿರುಗಲು ಬಸ್ ವ್ಯವಸ್ಥೆ ಮಾಡಲಾಗಿದೆ.

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

RTGSಗಾಗಿ ಬ್ಯಾಂಕ್ ವಿವರಗಳು:
Sri Ramakrishna Sharadashrama, Ponnampet.
Corporation Bank, SB. A/c.no.520101041841472.
IFSC Code : CORP0000032 (ಪತ್ರ, ಅಥವಾ ಇ-ಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಬೋಧಸ್ವರೂಪಾನಂದ
ಅಧ್ಯಕ್ಷರು



ಸಂಪಾದಕೀಯ

ಬೆಳಕ ಬೀರುವ ಹಾದಿ

ಭಾಗ ೪

ಕಳೆದ ಸಂಚಿಕೆಗಳಲ್ಲಿ ಧರ್ಮಗಳ ಉಗಮ-ಬೆಳವಣಿಗೆ, ಅದಕ್ಕೆ ಮೂಲವಾದ ಆಧ್ಯಾತ್ಮಿಕ ಅನುಭವ, ಮಾನವನ ಜೀವನದಲ್ಲಿ ಅವು ಹೊಸ ಮಾರ್ಗವಾಗಿ ರೂಪುಗೊಂಡ ಬಗೆ — ಈ ಕೆಲವು ಸಂಗತಿಗಳನ್ನು ಚರ್ಚಿಸಿದ್ದೇವೆ. ಪ್ರಪಂಚದ ಧಾರ್ಮಿಕ, ಆಧ್ಯಾತ್ಮಿಕ ಇತಿಹಾಸದಲ್ಲಿ ಅಚ್ಚಳಿಯದ ಮುದ್ರೆಯನ್ನು ಒತ್ತಿದ, ಹಾಗೂ ಮಾನವನ ವಿಕಾಸದಲ್ಲಿ ಒಂದು ಹೊಸ ಪ್ರವಾಹವನ್ನೇ ಮೂಡಿಸಿದ ಅವತಾರ ಪುರುಷರ ವಿಷಯವಾಗಿ ಈಗ ಅವಲೋಕಿಸೋಣ.

ಅವತಾರವೆಂದರೇನು?

ಸಾಧು-ಸಂತರು, ಋಷಿಮುನಿಗಳು, ದಿವ್ಯಪುರುಷರು, ಯೋಗಿಗಳು, ಅವತಾರ ಪುರುಷರು ಇವರೆಲ್ಲ ಧರ್ಮ ಅಥವಾ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪೂಜ್ಯರಾದ ಮಹಾತ್ಮರು ಎಂದು ನಾವು ಈ ಬಗೆಯ ವ್ಯಕ್ತಿಗಳನ್ನೆಲ್ಲ ಸರಳವಾಗಿ ತಿಳಿದುಕೊಂಡು ಬಿಡುತ್ತೇವೆ. ಇವರೆಲ್ಲರ ಜೀವನ, ಸ್ವಭಾವ, ಶಕ್ತಿಸಾಮರ್ಥ್ಯ ಹಾಗೂ ದಿವ್ಯತೆಗಳಲ್ಲಿ ಅಗಾಧ ವ್ಯತ್ಯಾಸವಿದೆ; ಅದರಲ್ಲೂ, ಉಳಿದವರಿಗಿಂತ ಅವತಾರಿಗಳು ಸಂಪೂರ್ಣ ಬೇರೆ ನಿಲ್ಲುತ್ತಾರೆ. ಅವತಾರಿಗಳಿಗೂ ಉಳಿದ ಮಹಾತ್ಮರಿಗೂ ಇರುವ ಒಂದು ಪ್ರಧಾನ ವ್ಯತ್ಯಾಸವಿದು: ಉಳಿದವರೆಲ್ಲ ಜೀವನವಿಡೀ ಸಾಧನೆ ಮಾಡಿ, ನಾನಾ ಬಗೆಯ ಪ್ರಯತ್ನಗಳ ಮೂಲಕ ಭಗವಂತನ ಸಾಕ್ಷಾತ್ಕಾರ ಪಡೆಯುತ್ತಾರೆ. ಆದರೆ ಅವತಾರಪುರುಷರು ಜನ್ಮತಃ ದಿವ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಅವರ ಬಾಲ್ಯದಿಂದಲೂ ಅಪ್ರಯತ್ನವಾಗಿ ದೈವೀ ಘಟನೆಗಳು ಘಟಿಸುತ್ತವೆ. ಅವರ ಸಾಧನೆಯೇನಿದ್ದರೂ ಜಗತ್ತಿಗೆ ಶಿಕ್ಷಣ ನೀಡುವುದಕ್ಕಾಗಿ. 'ಹೀಗೆ ಸಾಧನೆ ಮಾಡಿ ದೇವರನ್ನು ಕಂಡುಕೊಳ್ಳಬಹುದು' ಎಂದು ದಾರಿ ತೋರಿಸಿಕೊಡುವುದಕ್ಕಾಗಿ. ಉಳಿದ ಮಹಾಪುರುಷರೆಲ್ಲ ಸಾಧನೆ ಮಾಡಿ ಮಾನವತ್ವದಿಂದ ದೈವತ್ವದ ಕಡೆಗೆ ಸಾಗುತ್ತಾರೆ. ಅವತಾರಪುರುಷರೆಂದರೆ, ಸ್ವತಃ ಭಗವಂತನೇ ಇಚ್ಛಾಪೂರ್ವಕವಾಗಿ ಮಾನವರ ಉದ್ಧಾರಕ್ಕಾಗಿ ಮನುಷ್ಯ ಜನ್ಮವೆತ್ತಿ ಬಂದಿರುತ್ತಾನೆ. ಈ ಕಾರಣದಿಂದಲೇ ಅವತಾರಗಳ ಶಕ್ತಿ, ಸಾಮರ್ಥ್ಯ, ದಿವ್ಯತೆಗಳು ಉಳಿದ ಮಹಾತ್ಮರುಗಳಿಗಿಂತ ನೂರು ಪಟ್ಟು, ಸಾವಿರ ಪಟ್ಟು ಇಲ್ಲ, ಅಗಣಿತ ಸಂಖ್ಯೆಯಷ್ಟು ಹೆಚ್ಚು. ಆದ ಕಾರಣವೇ ಅವತಾರ ಪುರುಷನು ಒಂದೊಂದು ಯುಗದಲ್ಲೂ ಕಾಲದ ಆವಶ್ಯಕತೆಗೆ ಅನುಗುಣವಾಗಿ ಯೋಗ್ಯವಾದ ಪ್ರದೇಶದಲ್ಲಿ ಜನಿಸುತ್ತಾನೆ; ಅಲ್ಲಿನ ಜನತೆಯ ಮೇಲೆ ಗಾಢ ಪ್ರಭಾವ ಬೀರುತ್ತಾನೆ. ಉಳಿದ ಮಹಾತ್ಮರ ಪ್ರಭಾವ ಸೀಮಿತ ಪ್ರದೇಶದ, ಸೀಮಿತ ವ್ಯಕ್ತಿಗಳ ಮೇಲಾಗುವುದು; ಅವತಾರಗಳ ಪ್ರಭಾವ ಎಲ್ಲ ಎಲ್ಲೆಗಳನ್ನೂ ಮೀರಿ ವ್ಯಾಪಿಸುವುದು.

ಅವತಾರ ಪುರುಷರ ಸಂಖ್ಯೆ

ಆಧ್ಯಾತ್ಮಿಕ ಕ್ಷೇತ್ರದಲ್ಲಿ ತುಂಬ ಚರ್ಚೆಗೊಳಗಾದ, ಸಾಕಷ್ಟು ವಿವಾದಗಳಿಗೆ ಎಡೆಮಾಡಿಕೊಟ್ಟ ಅಂಶವೆಂದರೆ, ಅವತಾರಗಳು ಎಷ್ಟು ಎಂಬುದು. ಕೆಲವೊಂದು ಧರ್ಮಗಳ ಪ್ರಕಾರ, ಅವರ ಧರ್ಮದ ಮೂಲ ಪುರುಷನೊಬ್ಬನೇ ಅವತಾರ (ಅಥವಾ ಪ್ರವಾದಿ). ಅವರು ಇತರ ಧರ್ಮಗಳಲ್ಲೂ ಅವತಾರಗಳಿರಬಹುದು ಎಂಬ ಸಾಧ್ಯತೆಯನ್ನೇ ಒಪ್ಪುವುದಿಲ್ಲ. ಇನ್ನು ಕೆಲವು ಧರ್ಮಗಳಲ್ಲಿ, ವಿಶೇಷವಾಗಿ ಭಾರತದಲ್ಲಿ ಜನಿಸಿದ ಧರ್ಮಗಳಲ್ಲಿ (ಜೈನ, ಬೌದ್ಧವೂ ಸೇರಿದಂತೆ) ಹಲವು ಅವತಾರಗಳು ಇರಬಹುದು; ಆದರೆ ಎಷ್ಟು ಮಂದಿ ಅವತಾರ ಪುರುಷರು, ಯಾರೆಲ್ಲ ಅವತಾರಗಳು ಎಂಬುದು ಇಲ್ಲೂ ವಿವಾದದ ಸಂಗತಿ. ಹಲವು ಪಂಥಗಳಿರುವ, ವಿವಿಧ ತತ್ತ್ವಗಳಿರುವ ಹಿಂದೂಧರ್ಮದಲ್ಲಿ ಈ ಕುರಿತು ಸಾಕಷ್ಟು ಚರ್ಚೆಯಾಗಿದೆ. ಈ ವಾದ ವಿವಾದಗಳಿಂದಾಗಿ ಯಾವ ಖಚಿತ ಅಭಿಪ್ರಾಯವೂ ಮೂಡಿ ಬರುವುದಿಲ್ಲ. ಉದಾಹರಣೆಗೆ, ವೈಷ್ಣವ ಪಂಥದವರು 'ದಶಾವತಾರ'ವೆಂದು ಅವತಾರಗಳ ಸಂಖ್ಯೆ ಹತ್ತು ಎನ್ನುತ್ತಾರೆ; ಭಾಗವತದಂಥ ಗ್ರಂಥಗಳಲ್ಲಿ ಇದು ಮೂವತ್ತೈದಕ್ಕೂ ಹೆಚ್ಚು ಎನ್ನಲಾಗಿದೆ. ಇನ್ನು ಭಗವದ್ಗೀತೆಯಂತೂ, **'ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ'** (ಅರ್ಜುನ, ನನಗೂ ನಿನಗೂ ಅನೇಕ ಜನ್ಮಗಳು ಕಳೆದು ಹೋದವು) ಎಂಬುದಾಗಿಯೂ, **'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾऽತ್ಮಾನಂ ಸೃಜಾಮ್ಯಹಮ್'**

—‘ಅರ್ಜುನ, ಯಾವಾಗ ಧರ್ಮದ ಅವನತಿ ಹಾಗೂ ಅಧರ್ಮದ ಉನ್ನತಿಯಾಗುತ್ತದೋ ಆಗೆಲ್ಲ ನಾನು ಅವತಾರ ಮಾಡುತ್ತೇನೆ’ ಎಂದೂ ಹೇಳುತ್ತದೆ *(ಗೀತೆ, ೪.೪-೮)*. ಇಲ್ಲಿ ಅವತಾರಗಳು ಅಸಂಖ್ಯವೆಂಬ ಸಂಗತಿ ಸೂಚಿಸಲ್ಪಟ್ಟಿದೆ. ಇನ್ನು ಯಾರನ್ನು ಅವತಾರವೆನ್ನಬೇಕು ಎಂಬ ವಿಚಾರದಲ್ಲೂ ಗೊಂದಲ ವಿದ್ದಂತಿದೆ. ದಶಾವತಾರವೆಂದಾಗ, ಕೆಲವರು ಅಲ್ಲಿ ಬಲರಾಮ ನನ್ನು ಸೇರಿಸುತ್ತಾರೆ; ಇನ್ನು ಕೆಲವರು ಪರಶುರಾಮನನ್ನು ಸೇರಿಸುತ್ತಾರೆ. ಎಲ್ಲ ಹತ್ತು ಅವತಾರಗಳಿಗೂ ಮೂಲಪುರುಷ ನಾದ ಶ್ರೀಕೃಷ್ಣನನ್ನು ಪೂರ್ಣಾವತಾರವೆಂದು ಕರೆದು, ಅವನನ್ನು ಆ ಹತ್ತರಲ್ಲಿ ಒಂದಾಗಿ ಸೇರಿಸುವುದಿಲ್ಲ. ಇಂಥ ಗೊಂದಲಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ: ಅವತಾರಗಳು ಇಷ್ಟೇ ಎಂದಾ ಗಲೀ, ಇಂತಿಂಥವರು ಎಂದಾಗಲೀ ಖಚಿತವಾಗಿ ಹೇಳಲು ಯಾವುದೇ ಮಾನದಂಡವನ್ನು ನಮ್ಮ ಶಾಸ್ತ್ರಗ್ರಂಥಗಳು ನೀಡುವು ದಿಲ್ಲ. ಅವತಾರ ತತ್ತ್ವವನ್ನು ಹೆಚ್ಚು ಪ್ರಚಾರಪಡಿಸಿದ ಪುರಾಣ ಗ್ರಂಥಗಳಲ್ಲೂ ವಿವಿಧ ಸಂದರ್ಭಗಳಿಗೆ ಅನುಸಾರವಾಗಿ ಭಗ ವಂತನ ಅವತಾರವೆಂದೋ, ಶಿವನ ಅಥವಾ ವಿಷ್ಣುವಿನ ಅಂಶ ವೆಂದೋ ಹಲವು ಮಂದಿ ಮಹಿಮಾನ್ವಿತರ ಚರಿತ್ರೆಯನ್ನು ಹೇಳ ಲಾಗಿದೆ. ಈ ಕಾರಣದಿಂದ ಅವತಾರಗಳ ಸಂಖ್ಯೆಯನ್ನು ಕುರಿತು ಹಾಗೂ ಯಾರು ಅವತಾರವೆಂಬುದನ್ನು ಕುರಿತು ಗೊಂದಲ ವುಂಟಾಗಿದೆ.

ಅವತಾರ ತತ್ತ್ವ

ಅವತಾರವೆಂದರೆ ಹೀಗೆ, ಈ ರೀತಿಯಲ್ಲಿ ಹಾಗೂ ಇವು ಅವ ತಾರಗಳ ಲಕ್ಷಣ ಎಂದು ಶಾಸ್ತ್ರಗ್ರಂಥಗಳಲ್ಲಿ ಒಮ್ಮತದಿಂದ ತತ್ತ್ವ ನಿರೂಪಣೆಯಾಗಿಲ್ಲದಿದ್ದರೂ, ಹಲವು ಮಂದಿ ಅವತಾರಪುರುಷರ ಜೀವನ, ಮಹತ್ಕಾರ್ಯ ಹಾಗೂ ಅವರುಗಳ ಸ್ವಭಾವಗಳನ್ನು ಅವಲಂಬಿಸಿ ಕೆಲವೊಂದು ವಿಶೇಷ ಸಂಗತಿಗಳನ್ನು ನಾವು ಕಂಡು ಕೊಳ್ಳಬಹುದು. ಸ್ವಾಮಿ ಶಾರದಾನಂದರು ಈ ವಿಚಾರವಾಗಿ ಬರೆಯುತ್ತಾರೆ: ‘‘ಅವತಾರ ಪುರುಷನು ಈಶ್ವರನಂತೆಯೇ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದವನು ಜೀವಿಯಂತೆ ಅವನು ಎಂದೂ ಕರ್ಮಬಂಧನಕ್ಕೆ ಒಳಗಾಗುವುದಿಲ್ಲ. ಏಕೆಂದರೆ ಸಾಮಾನ್ಯ ಜೀವಿಗಳಂತೆ ಭೋಗಸುಖ ಪ್ರಾಪ್ತಿಗಾಗಿ ಸ್ವಾರ್ಥಕ್ರಿಯೆಯಲ್ಲಿ ಅವನು ತೊಡಗುವುದೇ ಇಲ್ಲ. ಶರೀರಧಾರಣೆಯಿಂದ ಹಿಡಿದು ಅವನ ಪ್ರತಿಯೊಂದು ಕ್ರಿಯೆಯೂ ಪರಹಿತಕ್ಕಾಗಿಯೇ ಮೀಸಲು. ಮಾಯೆಯ ಅಜ್ಞಾನದ ಬಂಧನಕ್ಕೆ ಅವನು ಎಂದೂ ಒಳಗಾಗದೆ ಇರುವುದರಿಂದ ಹಿಂದೆ ಅವನು ಪಡೆದ ಜನ್ಮಗಳ ಸ್ಮೃತಿ ಅವನಿಗೆ ಸ್ಪಷ್ಟವಾಗಿರುತ್ತದೆ.’’ *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ. ೧, ಪು.೫)* ಈ ಗ್ರಂಥದಲ್ಲಿ ಲೇಖಕರು ಅವತಾರ ಪುರುಷರ ವಿಶೇಷ ಗುಣಲಕ್ಷಣಗಳನ್ನು ಹಲವು ದೃಷ್ಟಾಂತಗಳೊಡನೆ ವಿವರಿಸಿದ್ದಾರೆ.

ಅವರು ಗುರುತಿಸುವಂತೆ ಅವತಾರ ಪುರುಷರಲ್ಲೆಲ್ಲ ಕಂಡು ಬರುವ ಸಮಾನ ಅಂಶಗಳನ್ನು ಹೀಗೆ ಗುರುತಿಸಬಹುದು: ೧) ಧರ್ಮಸಂಸ್ಥಾಪನೆಯೇ ಅವತಾರಗಳ ಉದ್ದೇಶ. ೨) ಭಗ ವಂತನು ಸ್ವ-ಇಚ್ಛೆಯಿಂದ ಮಾನವ ಜನ್ಮವೆತ್ತಿ ಬರುವುದೇ ಅವ ತರಣ (ಅವ-ತರಣ = ‘ಕೆಳಗೆ ಇಳಿದು ಬರುವುದು.’) ೩) ಬಾಲ್ಯ ದಿಂದಲೇ ಅವರ ದೈವೀಸ್ವಭಾವ ವ್ಯಕ್ತಗೊಳ್ಳುವುದು. ೪) ಅವರಿಗೆ ಕರ್ಮಬಂಧನವಿಲ್ಲ; ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದವರು. ೫) ಅವರಲ್ಲಿ ಅದ್ಭುತ ಸ್ಮೃತಿಶಕ್ತಿ ಕಂಡುಬರುವುದು. ೬) ಮಾನ ವರ ಹಾಗೂ ಜೀವಿಗಳ ಮೇಲೆ ಅವರಿಗೆ ಅಪಾರ ಕರುಣೆ, ಅನು ಕಂಪ. ೭) ಹಾಗಿದ್ದರೂ ಮಾನವರಿಗೆ ದಾರಿ ತೋರುವುದಕ್ಕಾಗಿ ಮಾನವರಂತೆಯೇ ಎಲ್ಲ ಸುಖ, ದುಃಖಾದಿ ಅನುಭವಗಳನ್ನು ಹೊಂದುತ್ತಾರೆ. ೮) ನಿರ್ವಿಕಲ್ಪ ಸಮಾಧಿಯಂತಹ ಅತ್ಯುನ್ನತ ಆಧ್ಯಾತ್ಮಿಕ ಅನುಭವಗಳು ಅವತಾರ ಪುರುಷರಿಗೆ ಮಾತ್ರ ಸಾಧ್ಯ. ೯) ಕೆಲವೊಮ್ಮೆ ಅಮಾನುಷ, ಅತ್ಯದ್ಭುತ ಕಾರ್ಯಗಳನ್ನು ಮಾಡಿ ತೋರಿಸುತ್ತಾರೆ.

ಧರ್ಮದ ಚೌಕಟ್ಟಿನಾಚೆಗೆ

ಭಗವದಿಚ್ಛೆಯ ಮೇರೆಗೆ ಜನ್ಮತಳೆಯುವುದಾದರೂ, ಒಂದು ಕಾಲದ ಹಾಗೂ ಒಂದು ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಅವ ತಾರಪುರುಷನ ಜನನವುಂಟಾಗುತ್ತದೆ. ಅವನು ಅವತಾರವೆತ್ತಿ ಬರುವುದು ಜಗತ್ತಿನ ಉದ್ಧಾರಕ್ಕೆ; ಆದ್ದರಿಂದ ಆಯಾ ಕಾಲ ಹಾಗೂ ಸಮಾಜದಲ್ಲಿ ಕಂಡುಬರುವ ವಿಶೇಷ ಗುಣ, ಸ್ವಭಾವಗಳು ಅವತಾರ ಪುರುಷನಲ್ಲಿ ಕಂಡುಬರುವುದು ಸ್ವಾಭಾವಿಕ. ಆದರೆ ಅವನ ಮಹಿಮೆ ವಿಸ್ತಾರಗೊಂಡಂತೆಲ್ಲಾ, ಅವನ ದೃಷ್ಟಿಕೋನವು ವಿಶಾಲಗೊಂಡು, ಅವನ ಪ್ರಭಾವ ಹಾಗೂ ಕಾರ್ಯವ್ಯಾಪ್ತಿ ಎಲ್ಲ ಮಿತಿಯನ್ನೂ ಮೀರಿ ಸಾಗುತ್ತದೆ. ಕೇವಲ ನಂದಗೋಕುಲದ ಕೃಷ್ಣ, ಅಯೋಧ್ಯೆಯ ರಾಮ ಅಲ್ಲಿನವರಾಗಿಯೇ ಉಳಿಯಲಿಲ್ಲ. ಇನ್ನೂ ವಿಶಾಲವಾದ ರಾಜ್ಯಗಳ, ಜನಸಮುದಾಯಗಳ ಮಾರ್ಗ ದರ್ಶಕರಾಗಿ ಮಾರ್ಪಟ್ಟರು. ಕೊನೆಗೆ ಈ ಭಾವನೆ ಜನರ ನಡುವೆ ಆರಾಧನೆಯ ರೂಪು ತಾಳಿ, ಅವರು ‘ಜಗದ್ರಕ್ಷಕ’ರೂ ‘ಜಗ ತ್ಪಾಲಕ’ರೂ ಆದರು; ಅವರ ಕಾರ್ಯಗಳೆಲ್ಲ ಧರ್ಮಸಂರ ಕ್ಷಣೆಯ, ಸತ್ಯಧರ್ಮಗಳನ್ನು ಎತ್ತಿ ಹಿಡಿಯುವ ಕೆಲಸವಾಯಿತು. ಎಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ, ಅವತಾರಪುರುಷರ ಅನುಕಂಪ, ಪ್ರೇಮ, ದಯೆ ಕೇವಲ ಒಂದು ಧರ್ಮಕ್ಕೋ, ಒಂದು ಸಮಾಜಕ್ಕೋ ಸೀಮಿತವಾಗದೆ, ವಿಶ್ವವ್ಯಾಪಕವಾದ, ಮಾನವರೆಲ್ಲರನ್ನೂ ಒಳಗೊಳ್ಳುವ, ಅದನ್ನೂ ಮೀರಿ ಪಶು-ಪಕ್ಷಿ ಪ್ರಾಣಿ, ಸಸ್ಯ, ಮನುಷ್ಯ, ಗಂಧರ್ವ, ಯಕ್ಷಕಿನ್ನರಾದಿ ಜೀವಕೋಟಿ ಗಳನ್ನೆಲ್ಲ ಉದ್ಧರಿಸುವ ಒಂದು ಮಹಾಶಕ್ತಿಯಾಗಿ ಅವು ಕಾಣಿಸಿ ಕೊಳ್ಳುತ್ತವೆ. ಕೃಷ್ಣ, ರಾಮ, ಬುದ್ಧ, ಏಸು, ಚೈತನ್ಯರೆಲ್ಲ ಈ ವಿಶಿಷ್ಟ ಗುಣವನ್ನು ಹೊಂದಿದ್ದರು. ಅವರ ದೈವೀ ವ್ಯಕ್ತಿತ್ವಕ್ಕೆ ಇಡೀ ಜಗತ್ತೇ ಮಾರುಹೋಗುವುದು; ಅಂಥವರನ್ನು ಅರಿತುಕೊಂಡಷ್ಟೂ ಆ ವ್ಯಕ್ತಿತ್ವ ಇನ್ನಷ್ಟು ಉನ್ನತಿಗೇರುವುದು. ಈ ಪ್ರಪಂಚವನ್ನು ಮೀರಿದ, ಎಲ್ಲ ಸತ್ಯಗಳಿಗೂ ಸತ್ಯವಾದ ಅವ್ಯಕ್ತ ತತ್ತ್ವದಲ್ಲೇ ಅವರು ಒಂದಾಗಿರುವುದು ಅರ್ಥವಾಗುವುದು.

ಹಲವು ಮಂದಿ ಸಂತರಿಗೆ ಸ್ಫೂರ್ತಿ

ಪ್ರಪಂಚದಲ್ಲಿ ಅವತಾರ ಪುರುಷರ ಜನನವೆಂದರೆ ಅದೊಂದು ದೊಡ್ಡ ಆಧ್ಯಾತ್ಮಿಕ ಪ್ರವಾಹವೇ ಬಂದಂತೆ. ಬೃಹತ್ತಾದ ನದೀ ಪ್ರವಾಹದಲ್ಲಿ ಮರಗಿಡಬಳ್ಳಿಗಳೆನ್ನದೆ, ಮಣ್ಣು, ಕಲ್ಲು ಮನೆ-ಮಠ ವೆನ್ನದೆ, ಹಳ್ಳ, ತಗ್ಗು, ಕಣಿವೆ, ಪರ್ವತವೆನ್ನದೆ ಸಮಸ್ತವೂ ಕೊಚ್ಚಿ ಕೊಂಡು ಹೋಗುವಂತೆ, ಅವತಾರ ಪುರುಷನ ದಿವ್ಯೋನ್ಮಾದದ ಸ್ಫೂರ್ತಿಗೆ ಜನಸಾಮಾನ್ಯರಿಂದ ಹಿಡಿದು ಈಶ್ವರಕೋಟಿಗಳೆಂದು ಭಾವಿಸಲ್ಪಡುವ ಆಧ್ಯಾತ್ಮಿಕ ಜ್ಯೋತಿಗಳೂ ಒಳಗಾಗುತ್ತಾರೆ; ಎಲ್ಲರೂ ಆ ಮಹಾಪುರುಷನ ಪ್ರಭಾವದಿಂದ ಪುನೀತರಾಗುತ್ತಾರೆ. ಅವತಾರ ಪುರುಷರೊಂದಿಗೆ ಒಂದು ವಿಶಿಷ್ಟ ಸಮುದಾಯವೇ ಜನ್ಮತಳೆಯುತ್ತದೆ; ಅವರ ಲೀಲಾಕಾರ್ಯಗಳಲ್ಲಿ ಸಹಾಯಕ ವಾಗುತ್ತದೆ. ಆ ಸಮುದಾಯದಲ್ಲಿ ಪ್ರಮುಖವಾಗಿ ಅವತಾರ ಪುರುಷನ ಶಿಷ್ಯವರ್ಗ, ಇತರ ಪ್ರಮುಖ ಅನುಯಾಯಿಗಳು, ಬಂಧುವರ್ಗ ಬರುತ್ತಾರೆ. ಇವರಲ್ಲಿ ಕೆಲವೇ ಮಂದಿ ಸೀಮಿತ ವ್ಯಕ್ತಿಗಳನ್ನು ಅವತಾರ ಪುರುಷ ತನ್ನ ಅಂತರಂಗ ಅಥವಾ, ತನ್ನ ಆಪ್ತ ಅನುಯಾಯಿಗಳೆಂದು ಭಾವಿಸುತ್ತಾನೆ. ಅವರೇ ಆತನ ಮಹಿಮೆ, ಆದರ್ಶ, ಧ್ಯೇಯ ಹಾಗೂ ಉಪದೇಶಗಳನ್ನು ಮುಂದಿನ ತಲೆಮಾರುಗಳಿಗೆ ದಾಟಿಸುವವರು. ಕೃಷ್ಣನ ಜೀವನದಲ್ಲಿ ಗೋಪಿಕೆ ಯರು, ಯಶೋದೆ, ಅರ್ಜುನ, ವಿದುರ ಇವರೆಲ್ಲ ಈ ರೀತಿ ಬಂದವರು. ಅಂತೆಯೇ ಬುದ್ಧನ ಶಿಷ್ಯ ಆನಂದ, ಕ್ರಿಸ್ತನ ಹನ್ನೆ ರಡು ಮಂದಿ ಶಿಷ್ಯಂದಿರು, ಚೈತನ್ಯನಿಗೆ ನಿತ್ಯಾನಂದ ಹಾಗೂ ಇತರರು, ಶ್ರೀರಾಮಕೃಷ್ಣರಿಗೆ ಶ್ರೀಮಾತೆ, ಸ್ವಾಮಿ ವಿವೇಕಾ ನಂದರು ಹಾಗೂ ಇನ್ನಿತರ ಹದಿನಾರು ಮಂದಿ ಶಿಷ್ಯಂದಿರು – ಲೀಲಾಸಹಾಯಕರಾಗಿ ಬರುತ್ತಾರೆ. ಹಲವು ವೇಳೆ ಅವರನ್ನು 'ಪಾರ್ಷದರು' ಎಂದೂ 'ಅಂಶಾವತಾರ' ಎಂದೂ ಕರೆಯಲಾಗು ತ್ತದೆ. ಇವರೆಲ್ಲ ದೈವಾಂಶ ಸಂಭೂತರು; ಒಂದೊಂದು ರೀತಿಯಲ್ಲಿ ಹಿಂದಿನ ಅವತಾರಗಳ ಅಂಶವನ್ನು ತಳೆದು ಜನ್ಮವೆತ್ತಿದವರು. ಅವತಾರಪುರುಷನ ದೈವೀ ಮಹಿಮೆಯನ್ನು ಸಮರ್ಥವಾಗಿ ಅರಿತುಕೊಳ್ಳುವಲ್ಲಿ ಹಾಗೂ ಅದನ್ನು ಇತರರಿಗೆ ತಿಳಿಯಪಡಿಸುವಲ್ಲಿ ಅವರ ಪಾತ್ರ ಹಿರಿದು. ಅವರೂ ಅವತಾರಪುರುಷನ ಮಾರ್ಗ ದರ್ಶನದಲ್ಲಿ ಸಾಧನೆ ಮಾಡಿ ಸಾಕ್ಷಾತ್ಕಾರವನ್ನು ಹೊಂದುತ್ತಾರೆ; ಈ ಮೂಲಕ ಜನಸಾಮಾನ್ಯರಿಗೆ ಅವರು ಆಧ್ಯಾತ್ಮಿಕತೆಯ ಜೀವಂತ ನಿದರ್ಶನವಾಗುತ್ತಾರೆ.

ಆಧುನಿಕ ಅವತಾರಪುರುಷ

ಶ್ರೀರಾಮಕೃಷ್ಣರ ಜೀವನ, ಆದರ್ಶ ಹಾಗೂ ಅವರ ಆಧ್ಯಾ ತ್ಮಿಕ ಶಕ್ತಿ ರಾಮಕೃಷ್ಣ ಮಹಾಸಂಘದ ಮೂಲಕ ತಲೆಮಾರಿನಿಂದ ತಲೆಮಾರಿಗೆ ಬೆಳೆದುಬಂದ ಬಗೆಯನ್ನು ಗಮನಿಸುವ ಮೂಲಕ ಅವತಾರ ಪುರುಷನ ಅಸಾಧಾರಣ ಲೀಲೆಯನ್ನು ಸ್ಪಷ್ಟವಾಗಿ ಮನ ಗಾಣಬಹುದು. ಶ್ರೀರಾಮಕೃಷ್ಣರೇ ಸ್ವಾಮಿ ವಿವೇಕಾನಂದರಿಗೆ ಹೇಳಿದ್ದರು, ''ಯಾರು ಹಿಂದೆ ರಾಮನಾಗಿ, ಕೃಷ್ಣನಾಗಿ ಬಂದಿ ದ್ದನೋ ಅವನೇ ಈಗ **ರಾಮಕೃಷ್ಣ**ನಾಗಿ ಬಂದಿದ್ದಾನೆ.'' ಅವ ರೊಂದಿಗೆ ಲೀಲಾಸಹಾಯಕರಾಗಿ ಸಾಕ್ಷಾತ್ ಜಗನ್ಮಾತೆಯೇ ಶ್ರೀಶಾರದಾದೇವಿಯವರ ಮೂಲಕ ಧರೆಗೆ ಇಳಿದು ಬಂದರು. ಪರಶಿವನ ಅವತಾರವಾಗಿ (ಅಥವಾ, ಶ್ರೀರಾಮಕೃಷ್ಣರು ದಿವ್ಯ ದರ್ಶನದಲ್ಲಿ ಕಂಡಂತೆ ಸಪ್ತರ್ಷಿಗಳೊಬ್ಬರ ಅವತಾರವಾಗಿ) ಸ್ವಾಮಿ ವಿವೇಕಾನಂದರು ಮೂಡಿಬಂದರು. ಇನ್ನು ಉಳಿದ ಅಂತ ರಂಗ ಶಿಷ್ಯರೆಲ್ಲ ಸಂನ್ಯಾಸಿಗಳಾದರು; ಅವರೆಲ್ಲರೂ ಒಂದಲ್ಲ ಒಂದೊಂದು ವಿಧದಲ್ಲಿ ದೈವಾಂಶಸಂಭೂತರೇ. (ಉದಾಹರಣೆಗೆ, ಸ್ವಾಮಿ ಶಾರದಾನಂದರು ಹಾಗೂ ಸ್ವಾಮಿ ರಾಮಕೃಷ್ಣಾನಂದರು ಇಬ್ಬರೂ ಕ್ರಿಸ್ತನ ಅನುಯಾಯಿಗಳು; ಸ್ವಾಮಿ ಪ್ರೇಮಾನಂದರು ರಾಧೆಯ ಅಂಶ.) ಶ್ರೀರಾಮಕೃಷ್ಣರ ಅವತಾರದಿಂದ ಚಾಲನೆ ಗೊಂಡ ದಿವ್ಯಕಾರ್ಯವನ್ನು ಪೂರೈಸಲು ಇವರೆಲ್ಲ ತಮ್ಮದೇ ಆದ ರೀತಿಯಲ್ಲಿ ದುಡಿದರು; ರಾಮಕೃಷ್ಣ ಮಹಾಸಂಘದ ಮೂಲಕ ಈ ಕಾರ್ಯ ಇಂದಿಗೂ ಮುನ್ನಡೆಯುತ್ತಿದೆ.

ಸಮಾಜದಲ್ಲಿ ಆಧ್ಯಾತ್ಮಿಕ ಜಾಗೃತಿ, ನವೀನ ಸ್ಫೂರ್ತಿ

ಹೀಗೆ ಅವತಾರ ಪುರುಷನ ಆಗಮನದಿಂದ ಸಮಾಜದ ಮೇಲೆ ಉಂಟಾಗುವ ಪ್ರಭಾವವೆಂಥದು? ಧಾರ್ಮಿಕ ಜಾಗೃತಿ ಎಷ್ಟೇ ಉಂಟಾಗಿರಲಿ, ಸಮಾಜ ಕೆಲವು ವರ್ಷಗಳ ನಂತರ ಜಡ ವಾಗುತ್ತದೆ; ಜನರ ನೈತಿಕ, ಧಾರ್ಮಿಕ ಮೌಲ್ಯ ಕುಸಿಯುತ್ತದೆ. ಭೌತಿಕತೆ, ನಾಸ್ತಿಕತೆ, ಅಧರ್ಮ ಕ್ರಮೇಣ ಮೆರೆದಾಡಲಾರಂಭಿ ಸುತ್ತದೆ. ಇದೇ 'ಧರ್ಮಗ್ಲಾನಿ.' ಅಂತಹ ಕಾಲದಲ್ಲಿ ಅವತಾರ ಪುರುಷನ ಆವಿರ್ಭಾವ ಅನಿವಾರ್ಯವಾಗುತ್ತದೆ. ಒಬ್ಬೊಬ್ಬ ಅವತಾರಪುರುಷನ ಪ್ರಭಾವ ಅನೇಕ ಶತಮಾನಗಳ ಕಾಲ ಜನಮನದಲ್ಲಿ ಜೀವಂತವಾಗಿರುತ್ತದೆ; ಅಲ್ಲಿಯವರೆಗೂ ಜನರಲ್ಲಿ ಧರ್ಮ, ಅಧ್ಯಾತ್ಮ, ನೀತಿಗಳನ್ನು ಹಿಡಿದಿಡುವಲ್ಲಿ ಅವತಾರ ಪುರು ಷರ ಪ್ರಭಾವ ಬಹಳ ಪ್ರಮುಖ ಶಕ್ತಿಯಾಗಿರುತ್ತದೆ. ಅಂಥ ಅವತಾರ ಪುರುಷರ ಜೀವಿತಕಾಲದಲ್ಲಿ ಅವರ ಆಧ್ಯಾತ್ಮಿಕ ಪ್ರಭೆ ಅತ್ಯಂತ ಶಕ್ತಿಶಾಲಿಯಾಗಿಯೂ, ಅಯಸ್ಕಾಂತದಂತೆ ಸೆಳೆತದಿಂದ ಕೂಡಿದ್ದೂ ಅಲ್ಲದೆ, ಅತ್ಯಂತ ಪ್ರಭಾವಶಾಲಿಯೂ ಆಗಿರುತ್ತದೆ. ಅದರಿಂದಾಗಿ ಸಾಮಾನ್ಯ ಜನರೂ ಶ್ರದ್ಧೆ, ಪ್ರಾಮಾಣಿಕತೆ, ಭಕ್ತಿ, ಸಾಧನೆಗಳಿಂದ ಸಾಕ್ಷಾತ್ಕಾರದ ಕಡೆಗೆ ಮುನ್ನಡೆಯುವಂತಾಗು ವುದು. ಆಗಿನ ಒಂದೊಂದು ಘಟನೆಯೂ ಮುಂದೆ ಚಾರಿತ್ರಿಕ ದಾಖಲೆಯೆನಿಸುವುದು. ಜನರೆಲ್ಲ ಆಶ್ಚರ್ಯಚಕಿತರಾಗಿ, 'ಇದೇನೀ ವಿಚಿತ್ರ!' ಎಂದು ದಿವ್ಯತೆಯ ಮುಂದೆ ಬೆರಗಾಗುವರು. ಆದರೆ ಮುಂದೆ ತಲೆಮಾರುಗಳು ಸಾಗಿದಂತೆ ಈ ಶ್ರದ್ಧೆ ವಿಶ್ವಾಸಗಳು ಸಡಿಲವಾಗುತ್ತ ಸಾಗುವುದು, ಕ್ರಮೇಣ ವಿರಳವಾಗುವುದು. ಆದರೆ ಎಲ್ಲ ಕಾಲಕ್ಕೂ ಶ್ರದ್ಧಾಳುಗಳು, ಸಾಧುಸಂತರು ಹುಟ್ಟುತ್ತಿರು ತ್ತಾರೆ; ಅವತಾರ ಪುರುಷರ ಜೀವನದಿಂದ ನಿರಂತರ ಸ್ಫೂರ್ತಿ ಪಡೆದು ಆಧ್ಯಾತ್ಮಿಕ ಪಥದಲ್ಲಿ ಮುನ್ನಡೆಯುತ್ತಿರುತ್ತಾರೆ. 'ಇಂಥ ಅವತಾರಗಳಲ್ಲೆಲ್ಲ ವರಿಷ್ಠರು (ಅಂದರೆ ಶ್ರೇಷ್ಠರು, ಹೆಚ್ಚಿನವರು) ಶ್ರೀರಾಮಕೃಷ್ಣರು' ಎಂದು ಸ್ವಾಮಿ ವಿವೇಕಾನಂದರು ತಮ್ಮ ಗುರು ಗಳನ್ನು ಸ್ತುತಿಸಿದ್ದಾರೆ. ಹಾಗೆ ಅವರು ಕರೆಯಲು ಕಾರಣವಿದೆಯೆ? ಮುಂದೆ ಅದನ್ನು ಗಮನಿಸಬೇಕಾಗಿದೆ. *(ಮುಂದಿನ ಸಂಚಿಕೆಗೆ)*

ಪ್ರಕೃತಿ



❁ ಆಕೆ ಎಲ್ಲವನ್ನೂ ನನಗೆ ತೋರಿಸಿಕೊಟ್ಟು ಬಿಟ್ಟಿದ್ದಾಳೆ. ಓ, ಆಕೆ ನನಗೆ ಎಷ್ಟೊಂದು ಅನುಭವಗಳನ್ನು ಮಾಡಿಕೊಟ್ಟಿದ್ದಾಳೆ! ಒಂದು ದಿನ ತೋರಿಸಿದಳು, ಎಲ್ಲೆಲ್ಲೂ ಶಿವ ಶಕ್ತಿಯರಿರುವುದನ್ನು. ಎಲ್ಲೆಲ್ಲೂ ಶಿವಶಕ್ತಿಯರ ಕ್ರೀಡೆಯೇ ನಡೆಯುತ್ತಿರುವುದನ್ನು ನೋಡಿದೆ. ಮನುಷ್ಯರಲ್ಲಿ, ಪ್ರಾಣಿಗಳಲ್ಲಿ, ತರುಗಳಲ್ಲಿ, ಲತೆಗಳಲ್ಲಿ ಎಲ್ಲದರಲ್ಲೂ ಶಿವಶಕ್ತಿಯಿರುವುದನ್ನು ನೋಡಿದೆ. ಪ್ರತಿಯೊಂದರಲ್ಲೂ ಪುರುಷ ಪ್ರಕೃತಿಯರ ಕ್ರೀಡೆಯನ್ನು ನೋಡಿದೆ.

❁ ಭಗವಂತ ಈ ಮೂರು ಕೆಲಸ ಮಾಡುತ್ತಿದ್ದಾನೆ: ಸೃಷ್ಟಿ, ಸ್ಥಿತಿ, ಪ್ರಳಯ. ಮೃತ್ಯು ತಪ್ಪಿದ್ದಲ್ಲ. ಪ್ರಳಯವಾದಾಗ ಎಲ್ಲಾ ಧ್ವಂಸವಾಗಿ ಹೋಗುತ್ತವೆ. ಯಾವುದೂ ಉಳಿಯುವುದಿಲ್ಲ. ಭಗವತಿ ಆಗ ಸೃಷ್ಟಿಗೆ ಬೇಕಾಗುವ ಬೀಜಗಳನ್ನು ಮಾತ್ರ ಶೇಖರಿಸಿ ಇಟ್ಟುಕೊಳ್ಳುತ್ತಾಳೆ. ಆಕೆ ಹೊಸದಾಗಿ ಸೃಷ್ಟಿ ಆರಂಭಿಸುವಾಗ ಅವುಗಳನ್ನೆಲ್ಲಾ ಹೊರಕ್ಕೆ ತೆಗೆಯುತ್ತಾಳೆ. ಗೃಹಿಣಿಯರು ಸೌತೆಕಾಯಿ ಬೀಜ, ಸಮುದ್ರದ ನೊರೆ, ನೀಲಿ ಗುಳಿಗೆ ಇನ್ನೂ ಏನೇನೋ ಚಿಕ್ಕಚಿಕ್ಕ ಪೊಟ್ಟಣಗಳನ್ನು ಒಂದು ಗುಡಾಣದಲ್ಲಿ ತುಂಬಿಟ್ಟುಕೊಂಡು ಬೇಕಾದಾಗ ಹೊರಕ್ಕೆ ತೆಗೆಯುವುದಿಲ್ಲವೇ ಹಾಗೆ.

❁ ಭಗವಂತನ ಕೃಪೆ ದೊರಕಿಸಿಕೊಳ್ಳಬೇಕಾದರೆ ಆದ್ಯಾಶಕ್ತಿ ರೂಪಿಣಿಯನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಬೇಕು. ಭಗವಂತನೇ ಒಂದು ರೂಪದಲ್ಲಿ ಮಹಾಮಾಯೆಯಾಗಿದ್ದಾನೆ. ಆಕೆ ಈ ಜಗತ್ತನ್ನು ಮುಗ್ಧಮಾಡಿ ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಿದ್ದಾಳೆ. ಆಕೆ ನಮ್ಮ ಕಣ್ಣಿಗೆ ಅಜ್ಞಾನವೆಂಬ ಮುಸುಕು ಹಾಕಿದ್ದಾಳೆ. ಆ ಮಹಾಮಾಯೆ ಬಾಗಿಲು ಬಿಟ್ಟುಕೊಟ್ಟರೆ ಮಾತ್ರ ಒಳಕ್ಕೆ ಪ್ರವೇಶ. ಹೊರಗಡೆಯೇ ಇದ್ದರೆ ಹೊರಗಿನ ವಸ್ತುಗಳನ್ನು ಮಾತ್ರ ನೋಡಬಹುದೇ ಹೊರತು, ಒಳಗಿರುವ ಆ ಸಚ್ಚಿದಾನಂದ ಪುರುಷನನ್ನು ನೋಡಲಾಗುವುದಿಲ್ಲ.

❁ ಆದ್ಯಾಶಕ್ತಿ ಲೀಲಾಮಯಿ; ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಾಳೆ. ಆಕೆಗೆ ಕಾಳೀ ಅಂತ ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ. ವಸ್ತು ಒಂದೇ. ನಿಷ್ಕ್ರಿಯವಾಗಿರುವಾಗ, ಸೃಷ್ಟಿ ಸ್ಥಿತಿ ಪ್ರಳಯ ಮಾಡದಿರುವಾಗ ಅದೇ ವಸ್ತುವಿಗೆ ಬ್ರಹ್ಮ ಅಂತ ಹೆಸರು. ಆದರೆ ಆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿರುವಾಗ ಅದೇ ವಸ್ತುವಿಗೆ 'ಕಾಳಿ' ಅಂತ ಹೆಸರು. ಶಕ್ತಿ ಅಂತ ಹೆಸರು. ವಸ್ತುವೇನೋ ಒಂದೇ; ಹೆಸರು ರೂಪ ಮಾತ್ರ ಬೇರೆ ಬೇರೆ.

❁ ಬ್ರಹ್ಮ ಶಕ್ತಿ ಅಭೇದ. ಶಕ್ತಿಯನ್ನು ಒಪ್ಪದೆ ಇದ್ದರೆ ಈ ಜಗತ್ತು ಮಿಥ್ಯೆಯಾಗಿ ಬಿಡುತ್ತದೆ. ನಾನು, ನೀನು, ಮಠ, ಹೆಂಡತಿ, ಮಕ್ಕಳು ಎಲ್ಲಾ ಮಿಥ್ಯೆಯಾಗಿ ಬಿಡುತ್ತವೆ. ಆದ್ಯಾಶಕ್ತಿ ಆಧಾರವಾಗಿರುವುದರಿಂದ ಈ ಜಗತ್ತು ನಿಂತುಕೊಂಡಿದೆ. ಆಸರೆ ಕೋಲು ಇಲ್ಲದೆ ಇತ್ತು ಎಂದರೆ, ಆಧಾರಕಟ್ಟು ಆಗುವ ಹಾಗಿಲ್ಲ. ಆಧಾರಕಟ್ಟು ಇಲ್ಲದೆ ಇತ್ತು ಎಂದರೆ ಸುಂದರ ದುರ್ಗಾಪ್ರತಿಮೆ ಆಗುವ ಹಾಗೆಯೇ ಇಲ್ಲ.

❁ ಯೋಗಮಾಯೆ ಎಂದರೆ ಪ್ರಕೃತಿ-ಪುರುಷರ ಸಂಯೋಗ. ಈ ಜಗತ್ತಿನಲ್ಲಿ ಏನೇನು ಕಣ್ಣಿಗೆ ಬೀಳುವುವೋ ಅವೆಲ್ಲವೂ ಈ ಸಂಯೋಗದಿಂದ ಉದ್ಭವವಾದುವು. ಉದಾಹರಣೆಗೆ ಶಿವ, ಕಾಳಿಯರ ಮೂರ್ತಿ ತೆಗೆದುಕೊ. ಕಾಳಿ ಶಿವನ ಮೇಲೆ ನಿಂತುಕೊಂಡಿದ್ದಾಳೆ. ಶಿವ ಶವದ ಹಾಗೆ ಆಕೆಯ ಪಾದದ ಕೆಳಗೆ ಬಿದ್ದುಕೊಂಡಿದ್ದಾನೆ. ಕಾಳಿ ಆತನ ಕಡೆಗೆ ದೃಷ್ಟಿಸಿ ನೋಡುತ್ತಿದ್ದಾಳೆ. ಇವೆಲ್ಲವೂ ಪುರುಷ ಪ್ರಕೃತಿಯರ ಸಂಯೋಗವನ್ನು ಸೂಚಿಸುತ್ತದೆ. ಪುರುಷ ನಿಷ್ಕ್ರಿಯ; ಅದಕ್ಕಾಗಿಯೇ ಶಿವ ಶವದ ಹಾಗೆ ನೆಲದ ಮೇಲೆ ಬಿದ್ದಿದ್ದಾನೆ. ಪುರುಷನ ಸಂಯೋಗದಿಂದ ಪ್ರಕೃತಿ ತನ್ನ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡುತ್ತಾಳೆ, ಸೃಷ್ಟಿ-ಸ್ಥಿತಿ-ಪ್ರಳಯ ಕಾರ್ಯಗಳನ್ನು ಮಾಡುತ್ತಾಳೆ. ರಾಧಾಕೃಷ್ಣರ ಯುಗಳ ಮೂರ್ತಿಗಳ ಸಂಕೇತವೂ ಇದೇನೆ. ಈ ಸಂಯೋಗಕ್ಕಾಗಿಯೇ ಆ ಪ್ರತಿಮೆಗಳು ಒಂದರ ಕಡೆ ಇನ್ನೊಂದು ಬಾಗಿರುವುದು.

❁ ಯಾರು ಬ್ರಹ್ಮನೋ, ಆತನೇ ಶಕ್ತಿ. ಆತನನ್ನೇ ನಾನು 'ಭಗವತಿ' ಎಂಬುದಾಗಿ ಕರೆಯುತ್ತಿರುವುದು. ಯಾವಾಗ ಆತ ನಿಷ್ಕ್ರಿಯನೋ, ಆಗ ಆತನನ್ನು 'ಬ್ರಹ್ಮ' ಅಂತ ಕರೆಯುತ್ತೇನೆ. ಸೃಷ್ಟಿ- ಸ್ಥಿತಿ-ಪ್ರಳಯ ಕಾರ್ಯ ಮಾಡುವಾಗ ಆತನನ್ನೇ 'ಶಕ್ತಿ' ಅಂತ ಕರೆಯುತ್ತೇನೆ. ನೀರು ಕೆಲವು ವೇಳೆ ಸ್ಥಿರವಾಗಿ; ಇನ್ನೂ ಕೆಲವು ವೇಳೆ ಅಲೆಗಳಿಂದ ಕೂಡಿ ಇರುವುದಿಲ್ಲವೇ ಅದೂ ಹಾಗೆ. ಶಕ್ತಿಯ ಲೀಲೆಯಿಂದಲೇ ಅವತಾರದ ಉತ್ಪನ್ನ, ಅವತಾರಪುರುಷ ಪ್ರೇಮ, ಭಕ್ತಿಯನ್ನು ಕಲಿಸಿಕೊಡಲು ಬರುತ್ತಾನೆ. ಆತನನ್ನು ಹಸುವಿನ ಕೆಚ್ಚಲಿಗೆ ಹೋಲಿಸಬಹುದು. ಹಾಲು ಬೇಕಾಗಿದ್ದರೆ, ಇದು ಕೆಚ್ಚಲಿನ ಮೂಲಕವೇ ಬರಬೇಕು. ಭಗವಂತನು ಮನುಷ್ಯನಾಗಿ ಅವತೀರ್ಣನಾಗುತ್ತಾನೆ. ಸರೋವರದ ಗುಂಡಿಗಳಲ್ಲಿ ಅನೇಕ ಮೀನುಗಳು ಬಂದು ಸೇರಿಕೊಳ್ಳುವ ಹಾಗೆ, ಅವತಾರ ಪುರುಷನಲ್ಲಿ ಭಗವಂತನ ಶಕ್ತಿ ವಿಶೇಷವಾಗಿ ತುಂಬಿಕೊಂಡಿರುತ್ತದೆ.

❁ ಯಾರು ಸಾಕಾರನೋ ಆತನೇ ನಿರಾಕಾರ. ಯಾರು ಸಗುಣನೋ ಆತನೇ ನಿರ್ಗುಣ. ಬ್ರಹ್ಮನೇ ಶಕ್ತಿ; ಶಕ್ತಿಯೇ ಬ್ರಹ್ಮ. ಇಬ್ಬರಿಗೂ ಭೇದವಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ

ಸಮಾಜದ ಬೆಳವಣಿಗೆಗೆ ಸಾಮೂಹಿಕ ಭಾವನೆಯ ಅಗತ್ಯ

ಸ್ವಾಮಿ ನಿತ್ಯಸ್ಥಾನಂದ

ಮಾನವ ಸಮಾಜಜೀವಿ; ಆದರೆ ಸಮಾಜದ ಅಂಗವಾಗಿ ಬದುಕುವ ವ್ಯಕ್ತಿಗಳ ನಡುವೆ ಇರುವ, ಇರಬೇಕಾದ ಸಂಬಂಧ, ಒಟ್ಟು ಸಮಾಜವನ್ನು ಕುರಿತು ಪ್ರತಿಯೊಬ್ಬನಿಗೂ ಇರಬೇಕಾದ ಮನೋಭಾವ ನಮ್ಮ ಬದುಕನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಲೇಖಕರು '**ವಿವೇಕಪ್ರಭ**'ದ ಮೊದಲ ಸಂಪಾದಕರು ಹಾಗೂ ಮೈಸೂರು ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಅವರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.



ಮನುಷ್ಯನಲ್ಲಿ ಎರಡು ಶಕ್ತಿಗಳು ಕೆಲಸ ಮಾಡುತ್ತಿವೆ – ಒಂದು ಶಕ್ತಿ ಅವನನ್ನು, ತನ್ನಲ್ಲಿ ತಾನಿರುವಂತೆ ಪ್ರೇರೇಪಿಸುವುದು, ಮತ್ತೊಂದು ಅವನನ್ನು ಸಮಾಜದೊಡನೆ ಒಂದಾಗುವಂತೆ ಪ್ರೇರೇಪಿಸುವುದು. ಒಂದು ವ್ಯಕ್ತಿನಿಷ್ಠವಾದುದು, ಮತ್ತೊಂದು ಸಮಾಜನಿಷ್ಠವಾದುದು. ಒಂದರಲ್ಲಿ ತಾನು ತನ್ನದು, ತನ್ನ ಸುಖದುಃಖ, ತನ್ನ ಹಿತಾಸಕ್ತಿ, ತನ್ನ ವಿಕಾಸ ಇವು ಪ್ರಧಾನ. ಆದರೆ ಮನುಷ್ಯ ಸಮಾಜಜೀವಿಯಾಗಿರುವುದರಿಂದ ಅವನನ್ನು ತನ್ನಲ್ಲಿ ತಾನಿರಲು ಬಿಡದೆ, ಸಮಾಜ ಮತ್ತು ಪ್ರಕೃತಿ ಅವನನ್ನು ಹೊರ ಗೆಳೆಯುವುದು, ಅವನು ಇತರರೊಡನೆ ಬೆರೆಯುವಂತೆ ಇತರ ರೊಡನೆ ವ್ಯವಹರಿಸುವಂತೆ ಮಾಡುವುವು. ಎರಡೂ ಶಕ್ತಿಗಳ ತಿಕ್ಕಾಟದಿಂದ ವ್ಯಕ್ತಿ ನುಚ್ಚುನೂರಾಗುವನು, ತನ್ನ ನೆಲೆಯನ್ನು ತಾನು ಕಳೆದುಕೊಳ್ಳುವನು. ಸ್ವಹಿತ ಪರಹಿತ — ಎರಡನ್ನೂ ಸಾಧಿಸಲಾಗದೆ ಗೊಂದಲಕ್ಕೀಡಾಗುವನು.

ಪ್ರತಿಯೊಬ್ಬನಲ್ಲೂ ಒಂದು ತನ್ನತನವಿರುತ್ತದೆ, ತನ್ನದೇ ಆದ ಒಂದು ವ್ಯಕ್ತಿತ್ವವಿರುತ್ತದೆ. ಅವನು ಅದನ್ನು ಎಂದಿಗೂ ಬಿಟ್ಟು ಕೊಡಲು ಸಿದ್ಧನಿರುವುದಿಲ್ಲ. ಮತ್ತು ಆ ರೀತಿ ಬಿಟ್ಟುಕೊಡುವವನು ಸ್ವಾಭಿಮಾನಶೂನ್ಯ ವ್ಯಕ್ತಿ. ಅವನು ಸತ್ವಹೀನ, ಮತ್ತು ದಾಸ್ಯ ಮನೋಭಾವದವನು. ಅವನಿಂದ ಸ್ವಹಿತವೂ ಆಗದು, ಪರ ಹಿತವೂ ಆಗದು. ತನ್ನತನದಲ್ಲಿ ಅಭಿಮಾನವುಳ್ಳವನೇ ಪುರುಷ. ಆದರೆ ಅವನು ಸಮಾಜದ ಒಂದು ಅಂಗ. ಅವನ ವ್ಯಕ್ತಿತ್ವಕ್ಕೆ ಒಂದು ಅರ್ಥವುಂಟಾಗುವುದು ಅವನು ಸಮಾಜದೊಡನೆ ಹೊಂದಿಕೊಂಡಾಗ. ಅವನು ಸಮಾಜದಿಂದ ಸಂಪೂರ್ಣ ಬೇರೆಯೇ ಆಗಿದ್ದರೆ ಸಾಮಾಜಿಕ ದೃಷ್ಟಿಯಿಂದ ಅವನ ವ್ಯಕ್ತಿತ್ವಕ್ಕೆ ಯಾವುದೇ ಅರ್ಥವಿರುವುದಿಲ್ಲ. ಆದ್ದರಿಂದ ಅವನು ತನ್ನ ವ್ಯಕ್ತಿತ್ವ ವನ್ನು ಬಿಟ್ಟುಕೊಡದೆ ಸಮಾಜದೊಡನೆ ಹೊಂದಿಕೊಳ್ಳಬೇಕು. ಸಾಮಾಜಿಕ ಪ್ರವಾಹದಲ್ಲಿ ಅವನು ತನ್ನತನವನ್ನು ಕಳೆದುಕೊಂಡರೆ ಪೌರುಷಹೀನನಾಗುವನು. ಅವನಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಆಗದು.

ಮನುಷ್ಯ ನಿಜವಾಗಿಯೂ ಒಂಟಿತನವನ್ನು ಸಹಿಸಲಾರ. ಅವನು ಇತರರೊಡನೆ, ಪರಿಸರದೊಡನೆ, ಒಂದು ದೇಶ ಅಥವಾ

ಭಾಷೆಯೊಡನೆ, ಇಲ್ಲವೇ ಭಗವಂತನೊಡನೆ ಒಂದಾಗಲು ಪ್ರಯತ್ನಿಸುತ್ತಾನೆ. ಈ ಪ್ರವೃತ್ತಿ ಅವನ ಸ್ವಭಾವದಲ್ಲಿಯೇ ಇದೆ. ಇದರಲ್ಲಿ ಅವನು ವಿಫಲನಾದಾಗ ಕಷ್ಟಕ್ಕೀಡಾಗುತ್ತಾನೆ. ಕಾರ್ಲ್ ಜುಂಗ್ ಹೇಳುವಂತೆ, ಮನುಷ್ಯನು ಪೂರ್ಣದಿಂದ ಪ್ರತ್ಯೇಕವಾಗಿರುವುದರಿಂದ, ಮಾನವಕುಲ ಮತ್ತು ಚೈತನ್ಯದೊಡನೆ ಸಂಪರ್ಕವನ್ನು ಕಳೆದುಕೊಂಡು ವ್ಯಥೆಗೀಡಾಗಿದ್ದಾನೆ. ಮನುಷ್ಯ ಭೌತಿಕವಾಗಿ ಮಾನವ ಕುಲದೊಡನೆ, ಪ್ರಕೃತಿಯೊಡನೆ ಮತ್ತು ಸಮಾಜದೊಡನೆ ಒಂದಾಗಿರುವಂತೆ ಆಧ್ಯಾತ್ಮಿಕವಾಗಿ ವಿಶ್ವಚೈತನ್ಯದೊಡನೆ ಒಂದಾಗಿರುವನು. ಈ ಏಕತೆಯ ವಿಸ್ಮರಣೆಯೇ ಮನುಷ್ಯನ ಅಧಃಪತನಕ್ಕೆ ಕಾರಣ.

ಮನುಷ್ಯ ತನ್ನ ಒಂಟಿತನವನ್ನು ಹೋಗಲಾಡಿಸಿಕೊಳ್ಳಲು ಇತರರೊಡನೆ ಸಮಾಜದೊಡನೆ ಅನೇಕ ಬಗೆಯ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಇವುಗಳಲ್ಲಿ ಕೆಲವು ಯೋಗ್ಯವಾದವು, ಮತ್ತೆ ಕೆಲವು ಅಯೋಗ್ಯವಾದವು. ಕೆಲವರು ತಮ್ಮನ್ನು ಇತರರ ಅಧಿಕಾರಕ್ಕೆ ಒಳಪಡಿಸಿಕೊಳ್ಳುವುದರಿಂದ ತಮ್ಮ ಒಂಟಿತನವನ್ನು ಕಳೆದುಕೊಳ್ಳುತ್ತಾರೆ. ಇವರಿಬ್ಬರೂ ತಮ್ಮ ಅಸ್ತಿತ್ವಕ್ಕೆ ಇತರರನ್ನು ಅವಲಂಬಿಸಿರುತ್ತಾರೆ. ಈ ದೃಷ್ಟಿಯಿಂದ ಇಬ್ಬರೂ ಅಧೀನರೇ.

ಕೆಲವರು ಯಾವುದೇ ಸಂಘ ಸಂಸ್ಥೆ ಇಲ್ಲವೇ ಪಕ್ಷ ಅಥವಾ ಧಾರ್ಮಿಕ ಪಂಗಡ — ಇವುಗಳಿಗೆ ಸೇರಿಕೊಂಡು ತಮ್ಮ ಒಂಟಿತನವನ್ನು ದೂರವಾಗಿಸಲು ಪ್ರಯತ್ನಿಸುತ್ತಾರೆ. ಭಾಷೆಯ ಹೆಸರಿನಲ್ಲೋ, ರಾಷ್ಟ್ರದ ಹೆಸರಿನಲ್ಲೋ, ಧರ್ಮದ ಹೆಸರಿನಲ್ಲೋ, ಜಾತಿಯ ಹೆಸರಿನಲ್ಲೋ, ಅಥವಾ ಜನಾಂಗದ ಹೆಸರಿನಲ್ಲೋ ಮನುಷ್ಯ ಒಂದು ಪಂಗಡವನ್ನು ಕಟ್ಟಿಕೊಂಡು ತನ್ನ ಒಂಟಿತನದಿಂದ ಪಾರಾಗುತ್ತಾನೆ. ಇಂದು ಇಂಥ ಪಂಗಡಗಳ ಸಂಖ್ಯೆ ಹಲವಾರು. ವಿದ್ಯಾರ್ಥಿಗಳದೇ ಒಂದು ಪಂಗಡ, ರೈತರದೇ ಒಂದು ಪಂಗಡ, ರಿಕ್ಷಾ ಡ್ರೈವರ್‌ಗಳದೇ ಒಂದು ಪಂಗಡ, ಕಾರ್ಮಿಕರದೇ ಒಂದು ಪಂಗಡ, ಬ್ಯಾಂಕ್ ಅಧಿಕಾರಿಗಳದೇ ಒಂದು ಪಂಗಡ, ದಲಿತರದೇ ಒಂದು ಪಂಗಡ, ವಿವಿಧ ಜಾತಿಯವರ, ವಿವಿಧ ಭಾಷೆಯವರ ಮತ್ತು ಧರ್ಮಪಂಥದವರ ಒಂದೊಂದು ಪಂಗಡ – ಹೀಗೆ ಅಸಂಖ್ಯಾತ ಪಂಗಡಗಳಿವೆ.

ಮನುಷ್ಯನ ಭಾವನೆ ಸಂಕುಚಿತವಾದಂತೆಲ್ಲ ಪಂಗಡಗಳ ಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತದೆ. ಇಷ್ಟೇ ಅಲ್ಲದೆ ಎಷ್ಟೋ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಈ ಪಂಗಡಗಳ ಸಂಖ್ಯಾವೃದ್ಧಿಗೆ ಕಾರಣವಾಗುತ್ತವೆ. ಮತ್ತೆ ಪ್ರತಿಯೊಂದು ಪಂಗಡದವರೂ ತಮ್ಮ ತಮ್ಮ ತಮ್ಮ ಹಿತಾಸಕ್ತಿಗೆ ಹೋರಾಡುತ್ತ ಸಮಾಜದ ಅಸ್ಥಿರತೆಗೆ, ಅರಾಜಕತೆಗೆ ಕಾರಣರಾಗುತ್ತಾರೆ. ಹೀಗೆ ಒಂಟಿತನವನ್ನು ಹೋಗಲಾಡಿಸುವ ಭರದಲ್ಲಿ ಮನುಷ್ಯ ಸಮಾಜದ ಹಿತವನ್ನು ಕಡೆಗಣಿಸುತ್ತಾನೆ. ಸಾಮೂಹಿಕ ಭಾವನೆ ಸಮಾಜದ ಒಳಿತಿಗೆ ಕಾರಣವಾಗುವುದರ ಬದಲು ಕೆಡುಕಿಗೆ ಕಾರಣವಾಗುತ್ತವೆ. ವ್ಯಕ್ತಿಯ ಸಂಕುಚಿತ ಭಾವನೆ ಗುಂಪಿನ ಮೂಲಕ ವ್ಯಕ್ತವಾಗುತ್ತದೆ. ತಾನೊಬ್ಬನೇ ಸಾಧಿಸಲಾಗದ ಸ್ವಾರ್ಥತೆಯನ್ನು ಗುಂಪಿನ ಮೂಲಕ ಸಾಧಿಸಲು ಪ್ರಯತ್ನಿಸುತ್ತಾನೆ. ಕೊನೆಗೆ ಗುಂಪಿನೊಳಗೇ ಒಡಕು ಉಂಟಾಗಿ ಅವನು ಯಾವುದಕ್ಕಾಗಿ ಗುಂಪು ಸೇರಿದ್ದನೋ ಆ ಉದ್ದೇಶಕ್ಕೇ ಸೋಲಾಗುತ್ತದೆ – ಮತ್ತೆ ಒಂಟಿಯಾಗಿಯೇ ಉಳಿಯುತ್ತಾನೆ.

ಇದನ್ನು ಹೋಗಲಾಡಿಸಲು ಸಾಮೂಹಿಕ ಭಾವನೆಯ ಸ್ವರೂಪ ಬದಲಾಗಬೇಕು. ಯಾವುದೋ ಸಂಕುಚಿತ ಆದರ್ಶದ ಹಿನ್ನೆಲೆಯಲ್ಲಿ ಗುಂಪುಗೂಡುವ ಬದಲು ವಿಶ್ವಭ್ರಾತೃತ್ವದ ಭಾವನೆ ಪ್ರಬಲವಾಗಬೇಕು. ಅಂದರೆ ಮನುಷ್ಯ ಯಾವ ಗುಂಪಿಗೂ ಸೇರಬಾರದೆಂದಲ್ಲ. ಗುಂಪಿನಲ್ಲಿದ್ದುಕೊಂಡೂ ಅವನು ವಿಶ್ವಭ್ರಾತೃತ್ವವನ್ನು ಬೆಳೆಸಿಕೊಳ್ಳಬಹುದು. ಒಬ್ಬ ವ್ಯಕ್ತಿ ಯಾವ ಗುಂಪಿಗೂ ಸೇರದೆಯೇ ವಿಶ್ವಭ್ರಾತೃತ್ವದಿಂದ ತನ್ನ ಒಂಟಿತನವನ್ನು ಹೋಗಲಾಡಿಸಿಕೊಳ್ಳಬಹುದು. ಇಲ್ಲಿ ಆಧ್ಯಾತ್ಮಿಕ ಹಿನ್ನೆಲೆಯ ಆವಶ್ಯಕತೆ ಬರುತ್ತದೆ.

ಭೌತಿಕವಾಗಿ ಮತ್ತು ಮಾನಸಿಕವಾಗಿ ಮನುಷ್ಯ ಮನುಷ್ಯನಲ್ಲಿ ಎಷ್ಟೇ ವ್ಯತ್ಯಾಸವಿದ್ದರೂ ಆಧ್ಯಾತ್ಮಿಕವಾಗಿ ಎಲ್ಲರೂ ಒಂದೇ. ಉಪನಿಷತ್ತಿನ ಮಾತಿನಲ್ಲಿ ಹೇಳಬೇಕೆಂದರೆ ಎಲ್ಲರೂ ಅಮೃತ ಪುತ್ರರೇ — '**ಅಮೃತಸ್ಯ ಪುತ್ರಾಃ**' ಎಲ್ಲರೂ ದೈವಾಂಶ ಸಂಭೂತರು, ಎಲ್ಲರಲ್ಲಿಯೂ ಒಂದೇ ಆತ್ಮ ಅಡಗಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ''Each soul is potentially divine.'' ಭಗವದ್ಗೀತೆ ಹೇಳುವುದು:

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥

(ಗೀತೆ, ೬.೨೯)

ಯೋಗದಿಂದ ಸಮತ್ವವನ್ನು ಪಡೆದವನು ಎಲ್ಲದರಲ್ಲಿಯೂ ಆತ್ಮನನ್ನು ಮತ್ತು ಆತ್ಮನಲ್ಲಿ ಎಲ್ಲವನ್ನೂ ನೋಡುತ್ತ ಎಲ್ಲೆಲ್ಲಿಯೂ ಸಮದರ್ಶಿಯಾಗಿರುತ್ತಾನೆ. ಇಂಥ ಸಮದರ್ಶಿತ್ವವುಳ್ಳವನು ಯಾರನ್ನೂ ದ್ವೇಷಿಸುವುದಿಲ್ಲ. 'ಆತ್ಮವತ್ ಸರ್ವಭೂತೇಷು' ಎಂಬ ಭಾವದಿಂದ ಎಲ್ಲರನ್ನೂ ಪ್ರೀತಿಸುತ್ತಾನೆ. ಇಂಥ ಪ್ರೀತಿಯ ಹಿನ್ನೆಲೆಯಿಂದ ಉಂಟಾದ ಸಾಮೂಹಿಕ ಭಾವನೆ ಸಮಾಜದ ಒಳಿತಿಗೆ ಕಾರಣವಾಗುತ್ತದೆ. ಯಾವುದೋ ಜಾತಿಯನ್ನೋ, ಭಾಷೆಯನ್ನೋ, ರಾಜಕೀಯ ಪಕ್ಷವನ್ನೋ ಅಥವಾ ಮತೀಯ ಪಂಥವನ್ನೋ ಆಧರಿಸಿದ ಸಾಮೂಹಿಕ ಭಾವನೆ ವಿದ್ವೇಷಕ್ಕೆ, ಸಮಾಜದ ಒಡಕಿಗೆ ಕಾರಣವಾಗುತ್ತದೆ.

ಆದ್ದರಿಂದ ಒಂದು ಆರೋಗ್ಯಕರ ಸಾಮೂಹಿಕ ಭಾವನೆ ಉಂಟಾಗಬೇಕಾದರೆ ಮನುಷ್ಯ ಇತರರೊಡನೆ ಪ್ರೀತಿಯ ಸಂಬಂಧವನ್ನು ಬೆಳೆಸಬೇಕು. ಖ್ಯಾತ ಮನಶ್ಶಾಸ್ತ್ರಜ್ಞ ಎರಿಕ್ ಫ್ರಾಂ ಪ್ರೀತಿಯನ್ನು ಈ ರೀತಿ ನಿರ್ವಚಿಸುತ್ತಾನೆ: ತನ್ನ ಪ್ರತ್ಯೇಕತೆಯನ್ನು, ತನ್ನತನವನ್ನು ಉಳಿಸಿಕೊಂಡು ತನ್ನ ಹೊರಗಿನ ಇತರ

ರೊಡನೆ ಅಥವಾ ಇತರ ವಸ್ತುವಿನೊಡನೆ ಒಂದಾಗುವುದು ಪ್ರೀತಿ. (Love is union with somebody or something, out - side oneself, under the condition of retaining the seperateness and integrity of one's own self.) ಇಲ್ಲಿ ಪರಸ್ಪರ ಭಾವವಿನಿಮಯವಿರುತ್ತದೆ, ಮತ್ತು ವ್ಯಕ್ತಿಯ ಅಂತಃ ಶಕ್ತಿಯ ಅಭಿವ್ಯಕ್ತಿಗೆ ಯಾವ ತಡೆಯೂ ಇರುವುದಿಲ್ಲ. ಇಲ್ಲಿ ಒಬ್ಬ ವ್ಯಕ್ತಿಯ ಸ್ವಾರ್ಥ ಇನ್ನೊಬ್ಬನ ಸ್ವಹಿತಕ್ಕೆ ಧಕ್ಕೆಯನ್ನುಂಟು ಮಾಡು ವುದಿಲ್ಲ. ವ್ಯಕ್ತಿವ್ಯಕ್ತಿಯಲ್ಲಿ ಎಷ್ಟೇ ತಾರತಮ್ಯವಿರಬಹುದು. ಎಲ್ಲ ವ್ಯಕ್ತಿಗಳ ಸಾಮರ್ಥ್ಯ ಒಂದೇ ಇರುವುದಿಲ್ಲ. ಆದರೆ ಅವನವನ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿಯೊಬ್ಬನೂ ಮುಂದೆ ಬರಲು ಸಮಾಜದಲ್ಲಿ ಅವಕಾಶವಿರಬೇಕು. ಬಾಹ್ಯ ತಾರತಮ್ಯವನ್ನೇ ಎತ್ತಿ ಹಿಡಿಯುವುದರಿಂದ ಇದು ಸಾಧ್ಯವಾಗದು, ಇದರಿಂದ ಭೇದ ದೃಷ್ಟಿಯೇ ಪ್ರಬಲವಾಗುವುದು. ಈ ಭೇದದೃಷ್ಟಿ ಪ್ರೀತಿಗೆ ಮಾರಕ. ಸಮಾನದೃಷ್ಟಿ ಬರಬೇಕಾದರೆ ಆಂತರಿಕ ದಿವ್ಯತೆಗೆ ಪ್ರಾಧಾನ್ಯ ನೀಡಬೇಕು. ಈ ದೃಷ್ಟಿಯಿಂದ ಭೇದಭಾವ ಕಡಿಮೆ ಯಾಗುವುದು.

ನಿಜವಾಗಿಯೂ ಭಗವಂತನ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ, ಭಗವಂತನ ಮಕ್ಕಳು, ಅಮೃತ ಪುತ್ರರು. ಅವನ ಮುಂದೆ ನಾವು ಹಿಂದೂಗಳೂ ಅಲ್ಲ, ಮುಸ್ಲಿಮರೂ ಅಲ್ಲ, ಕ್ರಿಶ್ಚಿಯನ್ನರೂ ಅಲ್ಲ; ಬ್ರಾಹ್ಮಣರೂ ಅಲ್ಲ, ಶೂದ್ರರೂ ಅಲ್ಲ, ಬಿಳಿಯರೂ ಅಲ್ಲ, ಕರಿಯರೂ ಅಲ್ಲ; ಕನ್ನಡಿಗರೂ ಅಲ್ಲ, ತಮಿಳರೂ ಅಲ್ಲ – ಕೇವಲ ಅವನ ಮಕ್ಕಳು ಅಷ್ಟೆ. ಆದ್ದರಿಂದ ಯಾವುದೇ ಕೋಮು ಮನೋ ಭಾವವನ್ನು ತೊರೆದು ಆಧ್ಯಾತ್ಮಿಕ ದೃಷ್ಟಿಯಿಂದ ನಾವೆಲ್ಲ ಒಂದಾಗ ಬೇಕು. ಈ ರೀತಿಯ ಸಾಮೂಹಿಕ ಭಾವನೆ ಸಮಾಜದ ಒಳಿತಿಗೆ ಸಹಾಯಕವಾಗುವುದು. ನಾವು ಯಾವುದೇ ಗುಂಪಿನಲ್ಲಿದ್ದರೂ ಈ ರೀತಿಯ ವಿಶಾಲದೃಷ್ಟಿಯ ಸಾಮೂಹಿಕ ಭಾವನೆ ಇದ್ದರೆ ಗುಂಪು ಜಗಳ, ಕೋಮುಗಲಭೆ, ಗಡಿ ವಿವಾದ, ಭಾಷೆಯ ಹೆಸರಿ ನಲ್ಲಿ ಕಚ್ಚಾಟ – ಇತ್ಯಾದಿಗಳಿರುವುದಿಲ್ಲ.

ನಿಜವಾಗಿಯೂ ವ್ಯಕ್ತಿ ಹಿತ ಮತ್ತು ಸಮಾಜ ಹಿತ ಇವೆರಡೂ ವಿರುದ್ಧವಾದವುಗಳಲ್ಲ. ಉನ್ನತ ಆದರ್ಶವನ್ನಿಟ್ಟುಕೊಂಡು ಉತ್ತಮ ಜೀವನ ನಡೆಸುವವನಿಗೆ ಈ ತಿಕ್ಕಾಟವಿರುವುದಿಲ್ಲ. ಏಕೆಂದರೆ ಅವನು ಯಾವುದನ್ನು ತನ್ನ ಹಿತ ಎಂದು ಪರಿಗಣಿಸುತ್ತಾನೋ ಅದು ಇತರರ ಹಿತವೂ ಆಗಿರಲೇಬೇಕು. ಒಬ್ಬ ಪ್ರಾಮಾಣಿಕ ವ್ಯಕ್ತಿ ಎಲ್ಲರೂ ತನ್ನಂತೆಯೇ ಪ್ರಾಮಾಣಿಕರಾಗಿರಬೇಕೆಂದು ಬಯಸು ತ್ತಾನೆ. ಒಬ್ಬ ಮೋಸಗಾರ ಎಲ್ಲರೂ ತನ್ನಂತೆಯೇ ಮೋಸ ಮಾಡ ಬೇಕೆಂದು ಬಯಸುವುದಿಲ್ಲ, ಅವನು ಮಾತ್ರ ಮೋಸ ಮಾಡಿ ಇತ ರರು ತನ್ನ ಮೋಸಕ್ಕೆ ಒಳಗಾಗಬೇಕೆಂದು ಬಯಸುತ್ತಾನೆ. ಇಲ್ಲೇ ವೈಯಕ್ತಿಕ ಮತ್ತು ಸಾಮಾಜಿಕ ಹಿತಗಳ ನಡುವೆ ತಿಕ್ಕಾಟವುಂಟಾ ಗುವುದು. ಒಬ್ಬ ವ್ಯಕ್ತಿಯ ವರ್ತನೆ ಜಗತ್ತಿನಲ್ಲಿ ಪ್ರತಿಯೊಬ್ಬನೂ ಆಚರಿಸಬಹುದಾದ ರೀತಿಯಲ್ಲಿ ಇರಬೇಕು. ಸತ್ಯಸಂಧತೆ ಪ್ರಾಮಾಣಿಕತೆ, ಅಹಿಂಸೆ, ಪ್ರೀತಿ, ದಯೆ, ಇತ್ಯಾದಿಗಳು ಎಲ್ಲರೂ ಅನುಸರಿಸುವಂತಹವು. ಆದರೆ ಸುಳ್ಳು, ಕಳ್ಳತನ, ವಂಚನೆ ಹಿಂಸೆ ಇತ್ಯಾದಿಗಳನ್ನು ಎಲ್ಲರೂ ಅನುಸರಿಸುವಂತಿಲ್ಲ.

ಒಟ್ಟಿನಲ್ಲಿ ಪ್ರೀತಿ, ಸಮಾನತೆ, ಉನ್ನತ ಆದರ್ಶ ಮತ್ತು ನೈತಿಕ ಪರಿಪೂರ್ಣತೆ – ಇವು ಸಾಮೂಹಿಕ ಭಾವನೆಯ ತಳಹದಿ ಯಾಗಿದ್ದರೆ ಅದು ಸಮಾಜದ ಬೆಳವಣಿಗೆಗೆ ಸಹಾಯಕವಾಗು ವುದು. ಈ ರೀತಿಯ ಸಾಮೂಹಿಕ ಭಾವನೆ ಈ ಕೆಳಗಿನ ವೇದ ಮಂತ್ರದಲ್ಲಿ ಅತ್ಯಂತ ಸುಂದರವಾಗಿ ವ್ಯಕ್ತವಾಗಿದೆ:

ಸಮಾನೋ ಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಮ್ ॥
ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥

'ನಿಮ್ಮ ಪ್ರಾರ್ಥನೆ ಸಮಾನವಾಗಿರಲಿ, ನಿಮ್ಮ ಗುರಿ ಸಮಾನ ವಾಗಿರಲಿ, ನಿಮ್ಮ ಉದ್ದೇಶ ಸಮಾನವಾಗಿರಲಿ, ನಿಮ್ಮ ನಿರ್ಣಯ ಸಮಾನವಾಗಿರಲಿ. ಸಮಾನ ಅಭಿಪ್ರಾಯುಳ್ಳವರಾಗಿ, ನಿಮ್ಮ ಹೃದಯಗಳೆಲ್ಲ ಒಂದಾಗಿರಲಿ, ನೀವೆಲ್ಲರೂ ಒಂದೇ ಮನಸ್ಸಿನವ ರಾಗಿ ಮತ್ತು ನಿಮ್ಮಲ್ಲಿ ಪೂರ್ಣ ಏಕತೆಯಿರಲಿ.'

ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು



ಮಾತಾ ತ್ಯಾಗಮಯೀ

'ಸಂಘಜನನಿ'ಯೆಂದೇ ಕರೆಯಲ್ಪಟ್ಟ ಶ್ರೀಮಾತೆಯವರು ನಿಜಕ್ಕೂ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳ ಪಾಲಿಗೆ ತಾಯಿಯೇ ಆಗಿದ್ದರು. ಶ್ರೀರಾಮಕೃಷ್ಣರ ನೇರ ಶಿಷ್ಯರು ಅವರನ್ನು ಜಗನ್ಮಾತೆಯೆಂದೇ ಕಂಡಿದ್ದರು; ಶ್ರೀಮಾತೆ ಅವರ ಐಹಿಕ, ಪಾರಮಾರ್ಥಿಕ ಜೀವನದ ಸಂರಕ್ಷಕಿಯಾಗಿದ್ದರು. ಈ ಕುರಿತು ವಿವೇಚಿಸಿರುವ ಲೇಖಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

''ಎಲ್ಲಿಂದಲೋ ಒಂದು ಗಾಯಕರ ಮೇಳದವರು ಬಂದರು, ಹಾಡಿದರು, ಕುಣಿದರು. ಬಳಿಕ ಹೇಗೆ ಬಂದರೋ ಹಾಗೇ ಇದ್ದಕ್ಕಿದ್ದಂತೆ ಮಾಯವಾದರು. ಅವರು ಬರುತ್ತಾರೆ, ಹೊರಟು ಹೋಗುತ್ತಾರೆ.ಆದರೆ ಯಾರೂ ಅವರನ್ನು ಗುರುತಿಸುವುದಿಲ್ಲ.'' — ಶ್ರೀರಾಮಕೃಷ್ಣರು ತಮ್ಮ ರಹಸ್ಯವನ್ನು ಹೀಗೆ ಹೊರಗೆಡವುತ್ತಾರೆ. ಇನ್ನೊಂದೆಡೆ ಹೇಳುತ್ತಾರೆ, ''ನದೀದಡದಲ್ಲಿ ಅಂತರಗಂಗೆಯ ಬಳ್ಳಿ ಹರಡಿಕೊಂಡಿರುತ್ತದೆ. ಅವುಗಳಲ್ಲಿ ಒಂದು ಬಳ್ಳಿಯನ್ನು ಹಿಡಿದು ಎಳೆದರೆ ಎಲ್ಲವೂ ಬಂದುಬಿಡುತ್ತದೆ.'' ಹಾಗೆ ತಾವು ಆಗಮಿಸಿದಾಗ ತಮ್ಮೊಂದಿಗೆ ಅಂತರಂಗಿಗಳು ಬರಲೇಬೇಕಾಗುತ್ತದೆ.

ಹಾಗೆ ಆಗಮಿಸಿದಾಗ ಅವರನ್ನು ನಾವು ಗುರುತಿಸಲಾರೆವು. ಆದರೆ ಅವರ ನಡುವಿನ ಪರಸ್ಪರರ ಸಂಬಂಧ, ಅವರು ಪರಸ್ಪರರನ್ನು ಅರ್ಥಮಾಡಿಕೊಂಡ ಬಗೆ ಬಹಳ ಸ್ವಾರಸ್ಯಕರವಾದುದು.

ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರ ದೈವೀ ಸಂಬಂಧವನ್ನು ಕುರಿತು ನಾವು ಸಾಕಷ್ಟು ವಿವೇಚಿಸಿದ್ದೇವೆ. ಆದರೆ ಶ್ರೀಮಾತೆಯವರು ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಪರಸ್ಪರ ಸಂಬಂಧದ ಬಗ್ಗೆ ನಾವು ಹೆಚ್ಚು ಆಲೋಚಿಸಿದಂತಿಲ್ಲ.

ಶ್ರೀಮಾತೆಯವರು ಮತ್ತು ಸ್ವಾಮಿ ವಿವೇಕಾನಂದರು ಪರಸ್ಪರರನ್ನು ಹೇಗೆ ಅರ್ಥಮಾಡಿಕೊಂಡಿದ್ದರು? ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ಶ್ರೀಮಾತೆಯವರು ಬಗಲಾ ಅವತಾರ. ಈ ಬಾರಿ ಅವರು ಸರಸ್ವತಿಯ ರೂಪದಲ್ಲಿ ಆಗಮಿಸಿದ್ದಾರೆ. ಬಹಿರಂಗದಲ್ಲಿ ಅವರದು ಪರಮಶಾಂತಿ, ಆದರೆ ಅಂತರಂಗದಲ್ಲಿ ಅವರದು ದುಷ್ಟವಿನಾಶಿನಿಯಾದ ರುದ್ರ ಶಕ್ತಿ.'' ಸ್ವಾಮೀಜಿ ವಿದೇಶದಿಂದ ಮರಳಿದ ತರುವಾಯ, ಅವರು ಶ್ರೀಮಾತೆಯವರನ್ನು ಭೇಟಿಯಾಗಲು ಹೊರಟಾಗ ಬಾರಿಬಾರಿಗೂ ಗಂಗೆಯಲ್ಲಿ ಮೀಯುತ್ತಿದ್ದರು. ವಿದೇಶದಲ್ಲಿ ತಾವು ಎಲ್ಲ ಬಗೆಯ ಜನಗಳೊಂದಿಗೆ ಬೆರೆತು ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಪಾವಿತ್ರ್ಯವನ್ನು ಕಳೆದುಕೊಂಡಿರುವೆನೆಂಬ ಭಾವನೆಯಿಂದ ಅವರಿಗೆ ಪರಮ ಪವಿತ್ರತಾ ಸ್ವರೂಪಿಣಿಯಾದ ಶ್ರೀಮಾತೆಯವರ ಬಳಿ ಹೋಗಲು ಹಿಂಜರಿಕೆ! ಅವರು ಶ್ರೀಮಾತೆಯವರ ಮನೆ ಬಾಗಿಲಿನಲ್ಲಿ ನಿಂತು ಭಾವವಿಭೋರರಾಗುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಶ್ರೀಮಾತೆಯವರೇ ಅವರ ಕೈಹಿಡಿದು ಮನೆಯೊಳಗೆ ಕರೆದುಕೊಂಡು ಹೋಗಿದ್ದರು.[೧] ತಾಯಿಯ ಕೃಪೆಯಾದರೆ ಅವಳ ಈ ಭೂತಗಣಗಳು (ತಮ್ಮನ್ನು ಉದ್ದೇಶಿಸಿ) ಏನನ್ನು ಮಾಡುವುದಕ್ಕೂ ಸಿದ್ಧ — ಎನ್ನುತ್ತಾರೆ ಸ್ವಾಮೀಜಿ.

ಇನ್ನು ಶ್ರೀಮಾತೆಯವರು ಹೇಳುತ್ತಾರೆ, ''ನರೇನ್ ಶ್ರೀರಾಮಕೃಷ್ಣರ ಉಪಕರಣ. ಅವನ ಮೂಲಕ ಶ್ರೀರಾಮಕೃಷ್ಣರ ಇಚ್ಛೆ ಕೆಲಸ ಮಾಡುತ್ತಿದೆ.'' ಸ್ವಾಮೀಜಿಯವರ ಮಹಾಸಮಾಧಿಯ ತರುವಾಯ ಶ್ರೀಮಾತೆಯವರನ್ನು ಭೇಟಿಯಾಗಲು ಪೂರ್ವ ಬಂಗಾಳದಿಂದ ಒಂದು ಭಕ್ತರ ಗುಂಪು ಆಗಮಿಸಿತ್ತು. ಅವರು ತಮ್ಮ ವೇದಿಕೆಯಲ್ಲಿ ಶ್ರೀರಾಮಕೃಷ್ಣ-ಶ್ರೀಮಾತೆಯವರಿಗೆ ಸರಿಸಮವಾಗಿ ಸ್ವಾಮೀಜಿಯವರ ಭಾವಚಿತ್ರವನ್ನಿರಿಸಿ ಪೂಜಿಸು

---

೧ *Reminiscences of Sri Sarada Devi,* ಪು. ೯



ತ್ತಿದ್ದರು. ಶಿಷ್ಯನಾದ ಸ್ವಾಮೀಜಿಯವರನ್ನು ಗುರುವಿಗೆ ಸಮನಾಗಿ ಕೂರಿಸುವುದೆಂದರೇನು? ಇದು ಅನೇಕರ ಆಪಾದನೆ. ಇದಕ್ಕೆ ಶ್ರೀಮಾತೆಯವರ ಪ್ರತಿಕ್ರಿಯೆ ಏನಿರಬಹುದು ಎಂಬ ಕುತೂಹಲ ಬೇರೆ. ಆ ಭಕ್ತರು ಬಹಳ ಹಿಂಜರಿಯುತ್ತಲೇ ತಾವು ಸ್ವಾಮೀಜಿಯವರನ್ನು ಶ್ರೀರಾಮಕೃಷ್ಣರಿಗೆ ಸರಿಸಮನಾಗಿ ಪೂಜಿಸುತ್ತಿರುವುದಾಗಿ ಹೇಳಿದರು. ಇದ್ದಕ್ಕಿದ್ದಂತೆ ಶ್ರೀಮಾತೆಯವರು ಗಂಭೀರರಾದರು. ''ಶ್ರೀರಾಮಕೃಷ್ಣರು ಬದುಕಿದ್ದರೆ ಇದಕ್ಕೆ ಅನುಮತಿ ನೀಡುತ್ತಿದ್ದರೇನು?'' ಎಂದು ಉದ್ಗರಿಸಿದರು. ಭಕ್ತರೆಲ್ಲ ಹೆದರಿ ನಡುಗಿದರು. ಆದರೆ ಶ್ರೀಮಾತೆಯವರು ತಮ್ಮ ಮಾತಿಗೆ ಪೂರ್ಣವಿರಾಮವಿತ್ತಿರಲಿಲ್ಲ. ''ಶ್ರೀರಾಮಕೃಷ್ಣರು ಬದುಕಿದ್ದರೆ ನರೇಂದ್ರನನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದರು'' – ಎಂದರು. ಈಗ ಭಕ್ತರ ಭಯವೆಲ್ಲ ಪ್ರೇಮಾಶ್ರುವಾಗಿ ಬದಲಾಯಿತು. [೨]

ಶ್ರೀಮಾತೆಯವರು ಮತ್ತು ಸ್ವಾಮಿ ಬ್ರಹ್ಮಾನಂದರು ಪರಸ್ಪರರನ್ನು ಹೇಗೆ ಕಂಡಿದ್ದರು? ಸ್ವಾಮಿ ಬ್ರಹ್ಮಾನಂದರು ಒಂದು ಸಂದರ್ಭದಲ್ಲಿ ಬಲರಾಮ ಬೋಸ್‌ನ ಮನೆಯಲ್ಲಿದ್ದರು. ಶ್ರೀಮಾತೆಯವರು ಉದ್ಬೋಧನದಲ್ಲಿದ್ದರು. ಸ್ವಾಮಿ ಪ್ರೇಮೇಶಾನಂದಜಿಯವರು ಬರೆಯುತ್ತಾರೆ, ''ಆದರೂ ಅವರು ಶ್ರೀಮಾತೆಯವರ ದರ್ಶನಕ್ಕೆ ಹೋಗುತ್ತಿದ್ದುದು ಅಪರೂಪ. ಹಾಗೆ ಹೋದರೂ ಅವರಿಗೆ ಶ್ರೀಮಾತೆಯವರ ಸನ್ನಿಧಾನದಲ್ಲಿ ಹೆಚ್ಚು ಹೊತ್ತು ಇರಲು ಸಾಧ್ಯವಾಗುತ್ತಿರಲಿಲ್ಲ. ಅವರು ಶ್ರೀಮಾತೆಯವರ ಸನ್ನಿಧಾನದಲ್ಲಿದ್ದಾಗ ಅವರ ದೇಹ ಕಂಪಿಸುತ್ತಿತ್ತು. ಆ ರಹಸ್ಯವನ್ನು ನಾವು ಅರ್ಥಮಾಡಿಕೊಳ್ಳಲಾರೆವು.''

ಸ್ವಾಮಿ ಈಶಾನಾನಂದಜಿಯವರು ಹೇಳುತ್ತಾರೆ: ''ಅಂದು ಬೆಳಗ್ಗೆ ೯.೦೦ ಗಂಟೆಗೆ ಮಹಾರಾಜ್ 'ಉದ್ಬೋಧನ'ಕ್ಕೆ ಆಗಮಿಸಿದರು. ಶ್ರೀಮಾತೆಯವರು ಮೈತುಂಬ ವಸ್ತ್ರವನ್ನು ಹೊದ್ದುಕೊಂಡು ಮಂಚದ ಮೇಲೆ ಕಾಲುಗಳನ್ನು ಕೆಳಗೆ ಇರಿಸಿ ಕುಳಿತುಕೊಂಡರು. ಸ್ವಾಮಿ ಶಾರದಾನಂದರ ಕೋಣೆಯಲ್ಲಿದ್ದ ಮಹಾರಾಜರನ್ನು ಕರೆಯುವಂತೆ ಸೂಚನೆಯಿತ್ತರು. ಮಹಾರಾಜ್ ಮೆಟ್ಟಿಲುಗಳನ್ನು ಹತ್ತಿಕೊಂಡು ಬರುವಾಗ ಅವರ ಕಾಲುಗಳು ನಡುಗುತ್ತಿದ್ದವು. ಮಹಾರಾಜ್ ಶ್ರೀಮಾತೆಯವರಿಗೆ ಉದ್ದಂಡ ಪ್ರಣಾಮವನ್ನು ಮಾಡಿದರು. ಅವರ ಪಾದಧೂಳಿಯನ್ನು ತೆಗೆದುಕೊಂಡರು. ಬಳಿಕ ಒಂದೆರಡು ಮಾತುಗಳಷ್ಟೇ. ಶ್ರೀಮಾತೆಯವರು ಬಂಗಾಳಿ ಪದ್ಧತಿಯಂತೆ ಅವರ ಗದ್ದವನ್ನು ತಮ್ಮ ಕೈಗಳಿಂದ ಸ್ಪರ್ಶಿಸಿ, ಕೈಯನ್ನು ತಮ್ಮ ತುಟಿಗೆ ಒತ್ತಿಕೊಂಡರು, ಅವರ ಶಿರವನ್ನು ಸ್ಪರ್ಶಿಸಿ ಆಶೀರ್ವದಿಸಿದರು. ಅವರು ಕೂಡಲೇ ಕೋಣೆಯಿಂದ ಹೊರಹೋದರು. ಅವರು ಸ್ವಾಮಿ ಶಾರದಾನಂದಜಿಯವರ ಕೋಣೆಗೆ ಹೋಗಿ ಕುಳಿತುಕೊಂಡರು. ಶ್ರೀಮಾತೆಯವರು ಬಿಸ್ಕತ್ತು, ಕಿತ್ತಳೆಹಣ್ಣು ಮತ್ತು ಮಿಠಾಯಿಗಳನ್ನು ಜೋಡಿಸಿದ ಒಂದು ತಟ್ಟೆಯಿಂದ ಸ್ವಲ್ಪ ಭಾಗವನ್ನು ತಾವು ಸೇವಿಸಿ, ಅದನ್ನು ಪ್ರಸಾದವಾಗಿಸಿ ಮಹಾರಾಜರಿಗೆಂದು ಕಳುಹಿಸಿದರು. ಸ್ವಾಮಿ ಬ್ರಹ್ಮಾನಂದರು ಅತ್ಯಂತ ಆನಂದದಿಂದ ಅದನ್ನು ಸ್ವಾಮಿ ಶಾರದಾನಂದಜಿಯವರೊಂದಿಗೆ ಹಂಚಿಕೊಂಡು ಸೇವಿಸಿದರು. [೩]



ಶ್ರೀಮಾತೆಯವರು ವಾರಣಾಸಿಯಲ್ಲಿದ್ದಾಗ ಸ್ವಾಮಿ ಬ್ರಹ್ಮಾನಂದರು ಅಲ್ಲಿದ್ದರು. ಅವರು ಪ್ರತಿದಿನ ಬೆಳಗ್ಗೆ ಶ್ರೀಮಾತೆಯವರ ದರ್ಶನಕ್ಕೆ ಬರುತ್ತಿದ್ದರು. ಅಂದು ಬ್ರಹ್ಮಾನಂದರು ಬಂದಿದ್ದಾಗ ಗೋಲಾಪ್ ಮಾ, ಕೇಳಿದರು, ''ಶ್ರೀಮಾತೆಯವರು ನಿಮ್ಮನ್ನು ಕೇಳುತ್ತಿದ್ದಾರೆ, ಮೊದಲು ಶಕ್ತಿಪೂಜೆಯನ್ನು ಮಾಡಲು ಕಾರಣವೇನು– ಎಂದು.'' ಬ್ರಹ್ಮಾನಂದರು ಉತ್ತರಿಸಿದರು: ''ಏಕೆಂದರೆ, ಬ್ರಹ್ಮಜ್ಞಾನದ ಕೀಲಿಕೈ ಇರುವುದು ಆದ್ಯಾಶಕ್ತಿಯಾದ ಜಗನ್ಮಾತೆಯ ಕೈಯಲ್ಲಿ. ಜಗನ್ಮಾತೆ ಕೃಪೆಮಾಡಿ ಬಾಗಿಲು ತೆರೆಯದಿದ್ದರೆ ಬೇರೆ ದಾರಿಯೇ ಇಲ್ಲ.'' ಈ ಅರ್ಥದ ಒಂದು ಹಾಡನ್ನು ಹಾಡುತ್ತ ಹಾಡುತ್ತ ಅವರ ಮನಸ್ಸು ಆನಂದ ತನ್ಮಯವಾಯಿತು. ಆನಂದದ ಭರದಲ್ಲಿ ಅವರು ನರ್ತಿಸತೊಡಗಿದರು. ನರ್ತಿಸುತ್ತ ನರ್ತಿಸುತ್ತ ಆನಂದಾತಿರೇಕದಿಂದ ಗಟ್ಟಿಯಾಗಿ 'ಹೋ ಹೋ ಹೋ' ಎಂದು ಕೂಗುತ್ತ ಅಲ್ಲಿಂದ ವೇಗವಾಗಿ ಹೊರಟುಹೋದರು. ಮಹಡಿಯ ಮೇಲೆ ನಿಂತು ಇವನ್ನೆಲ್ಲ ನೋಡುತ್ತಿದ್ದ ಶ್ರೀಮಾತೆಯವರು ಅತೀವ ಸಂಪ್ರೀತರಾದರು. [೪]

ಸ್ವಾಮಿ ಬ್ರಹ್ಮಾನಂದರು ಸ್ವಾಮಿ ಶುದ್ಧಾನಂದರಿಗೆ ಹೇಳಿದ್ದರು: ''ಸುಧೀರ, ನಾನು ನಿನಗೆ ಈ ಕ್ಷಣ ಸಮಾಧಿಯನ್ನು ಕೊಡಬಲ್ಲೆ. ಆದರೆ ಶ್ರೀಮಾತೆಯವರು ಅದನ್ನು ನನಗಿಂತ ಹೆಚ್ಚು ಸುಲಭವಾಗಿ, ಪರಿಣಾಮಕಾರಿಯಾಗಿ ಮಾಡಬಲ್ಲರು.'' [೫]

ಸ್ವಾಮಿ ಅಭೇದಾನಂದರು '**ಪ್ರಕೃತಿಂ ಪರಮಾಂ ಅಭಯಾಂ ವರದಾಂ**' ಎಂದು ಆರಂಭವಾಗುವ ಶ್ರೀ ಶಾರದಾದೇವಿ ಸ್ತೋತ್ರವನ್ನು ರಚಿಸಿದವರು. ಅವರಿಗೆ ಅದನ್ನು ಶ್ರೀಮಾತೆಯವರ ಸನ್ನಿಧಿಯಲ್ಲಿ ಓದಿ ಹೇಳಬೇಕೆನ್ನಿಸಿತು. ಅವರು ಅದನ್ನು ಶ್ರೀಮಾತೆಯವರೆದುರು ವ್ಯಕ್ತಪಡಿಸಿದಾಗ ಅವರು ಬೆರಗಾದರು.

''ಸ್ತೋತ್ರ? ಯಾರನ್ನು ಕುರಿತು?'' ಶ್ರೀಮಾತೆಯವರು ಕೇಳಿದರು.

---

೨ *Our Mother in Many forms,* ಪು. ೨೭

೩ *Sri Sarada Devi And Her Divine Play* ಪು. ೩೮೫

೪ ಶ್ರೀಶಾರದಾದೇವಿ ಜೀವನಗಂಗಾ, ಪು. ೩೩೬


೫ *Sri Sarada Devi And Her Divine Play* ಪು. ೩೯೧



‘‘ಅಮ್ಮಾ, ತಮ್ಮನ್ನು ಕುರಿತು’’ ಎಂದರು ಅಭೇದಾನಂದರು.

‘‘ಮಗು, ನನಗೆ ಸ್ತೋತ್ರದ ಅಗತ್ಯ ವೇನಿದೆ?’’ ಎಂದರು ಶ್ರೀಮಾತೆ.

ಮೊದಲು ಅವರು ಸ್ತೋತ್ರವನ್ನು ಕೇಳಲು ಒಪ್ಪಲಿಲ್ಲ. ಬಳಿಕ ಶಿಷ್ಯನ ಕಾತರದ ಪ್ರಾರ್ಥನೆಯನ್ನು ಮನ್ನಿಸಿ ಶಾಂತ, ಗಂಭೀರ ಭಾವದಿಂದ ಸ್ತೋತ್ರವನ್ನು ಆಲಿಸಲು ಕುಳಿತರು. **‘ಪ್ರಕೃತಿಂ ಪರಮಾಂ ಅಭಯಾಂ ವರದಾಂ...**’ ಎಂದು ಮುಂದುವರಿಸುತ್ತಾ ಅಭೇದಾನಂದರು ‘**ರಾಮಕೃಷ್ಣಗತಪ್ರಾಣಾಂ**’ ಎಂದು ಉಚ್ಚರಿಸಿದಾಗ ಅಲ್ಲಿ ಶ್ರೀಮಾತೆಯವರು ಸ್ಥಿರರಾದರು. **ತನ್ನಾಮಶ್ರವಣಪ್ರಿಯಾಂ** ಎಂದು ಹೇಳಿದಾಗ ಅಲ್ಲಿ ಶ್ರೀಮಾತೆಯವರು ಇರಲಿಲ್ಲ, ಅವರು ಸಮಾಧಿಸ್ಥರಾಗಿದ್ದರು. ಶ್ರೀರಾಮಕೃಷ್ಣರೇ ಅಲ್ಲಿ ಕುಳಿತಿದ್ದರು. ಶ್ರೀಮಾತೆಯವರು ರಾಮಕೃಷ್ಣರೇ ಆದರು. ಶ್ರೀಮಾತೆಯವರ ಪಾದಗಳಲ್ಲಿ ಕುಳಿತು ಸ್ತೋತ್ರವನ್ನು ಹೇಳುತ್ತಿದ್ದ ಅಭೇದಾನಂದರೂ ಸಮಾಧಿಸ್ಥರಾದರು. ಆ ಕ್ಷಣದ ತಮ್ಮ ಅನುಭವವನ್ನು ಅವರು ಹೇಳಲಿಲ್ಲ.[೬]



ಶ್ರೀಮಾತೆಯವರು ‘ಉದ್ಬೋಧನ’ ದಲ್ಲಿದ್ದಾಗ ಸ್ವಾಮಿ ಪ್ರೇಮಾನಂದರು ಪ್ರತಿಯೊಂದು ವಿಷಯದಲ್ಲೂ ಅವರ ಅನುಮತಿಯನ್ನು ಪಡೆದುಕೊಂಡೇ ಮಾಡುತ್ತಿದ್ದರು. ೧೯೧೪ರಲ್ಲಿ ಅವರನ್ನು ಮಾಲ್ದಾದಲ್ಲಿ ಶ್ರೀರಾಮಕೃಷ್ಣರ ಉತ್ಸವಕ್ಕೆ ಆಮಂತ್ರಿಸಲಾಗಿತ್ತು. ಅದಕ್ಕೆ ಶ್ರೀಮಾತೆಯವರ ಅನುಮತಿಯನ್ನು ಕೇಳಲು, ಸ್ವಾಮಿ ಪ್ರೇಮಾನಂದರು ಆಗತಾನೆ ಅನಾರೋಗ್ಯದಿಂದ ಚೇತರಿಸಿಕೊಂಡಿದ್ದರಿಂದ ಅವರು ಒಪ್ಪಿಗೆಯನ್ನು ನೀಡಲಿಲ್ಲ. ಭಕ್ತರು ಒಗ್ಗೂಡಿ ಮತ್ತೆ ಶ್ರೀಮಾತೆಯವರನ್ನು ಒತ್ತಾಯಿಸಿದಾಗ ಅವರು ಪ್ರೇಮಾನಂದರ ಅಭಿಪ್ರಾಯವನ್ನು ಕೇಳಿದರು. ಸ್ವಾಮಿ ಪ್ರೇಮಾನಂದರು ಭಾವವಿಭೋರರಾಗಿ, ‘‘ಅಮ್ಮಾ, ನನಗೆ ಏನು ತಾನೆ ಗೊತ್ತಿದೆ? ನಾನು ಕೇವಲ ನಿಮ್ಮ ಆದೇಶವನ್ನು ಪಾಲಿಸುತ್ತೇನೆ. ನೀವು ನನಗೆ ಬೆಂಕಿಗೆ ಹಾರಲು ಹೇಳಿದರೆ ಬೆಂಕಿಗೆ ಹಾರುತ್ತೇನೆ. ನೀವು ನನಗೆ ನೀರಿಗೆ ಧುಮುಕಲು ಹೇಳಿದರೆ ಧುಮುಕುತ್ತೇನೆ. ನೀವು ನನಗೆ ನರಕಕ್ಕೆ ಹೋಗಲು ಹೇಳಿದರೆ ನರಕಕ್ಕೆ ಹೋಗುತ್ತೇನೆ. ನಾನು ಏನು ಬಲ್ಲೆ ಅಮ್ಮಾ?’’ ಕೊನೆಗೆ ಶ್ರೀಮಾತೆಯವರು ಬೇಗ ಮರಳಿ ಬರಬೇಕೆನ್ನುವ ಶರತ್ತಿನ ಮೇಲೆ ಅನುಮತಿಯನ್ನಿತ್ತರು.[೭]

ಸ್ವಾಮಿ ಅಖಂಡಾನಂದರು ೧೮೯೭ರಲ್ಲಿ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಬರಪರಿಹಾರ ಸೇವಾಕಾರ್ಯವನ್ನು ಆರಂಭಿಸಿದರು. ಅವರು ಹಸಿವು, ನಿದ್ರೆಯನ್ನು ಮರೆತು ಜೀವ-ಶಿವ ಸೇವೆಯಲ್ಲಿ ಅವಿಶ್ರಾಂತವಾಗಿ ಶ್ರಮಿಸಿದ್ದರಿಂದ ಅವರ ಆರೋಗ್ಯ ಕ್ಷೀಣಿಸಿತು. ಅವರಿಗೆ ಮಲೇರಿಯಾ ಜ್ವರ ಬಂದಿತು. ಸೋದರ ಸಂನ್ಯಾಸಿಗಳು ಅವರಿಗೆ ಔಷಧಿ ಪಥ್ಯ ಚಿಕಿತ್ಸೆಯನ್ನು ಪಡೆಯಲು ಹೇಳಿದರೂ ಅವರು ಗಮನವನ್ನೇ ಕೊಡಲಿಲ್ಲ. ಆಗ ಶ್ರೀಮಾತೆಯವರು ಅವರಿಗೆ ತಮ್ಮನ್ನು ಭೇಟಿಯಾಗುವಂತೆ ಆದೇಶಿಸಿದರು. ಅವರು ಒಡನೆಯೆ ಸಾರಗಾಛಿಯಿಂದ ಕಲ್ಕತ್ತಾಗೆ ಬಂದರು. ಉದ್ಬೋಧನಕ್ಕೆ ಹೋಗಿ ಶ್ರೀಮಾತೆಯವರಿಗೆ ಬಾಗಿ ನಮಿಸಿದರು. ಶ್ರೀಮಾತೆ ಹೇಳಿದರು: ‘‘ನೀನು ಈಗ ಬಲರಾಮನ ಮನೆಯಲ್ಲಿದ್ದು ಆಯುರ್ವೇದ ಚಿಕಿತ್ಸೆಯನ್ನು ಪಡೆಯಬೇಕು. ಕವಿರಾಜ ಹೇಳಿದ ಎಲ್ಲಾ ಪಥ್ಯವನ್ನು ತಪ್ಪದೆ ಪಾಲಿಸಬೇಕು. ನನ್ನ ಅನುಮತಿಯಿಲ್ಲದೆ ನೀನು ಎಲ್ಲಿಗೂ ಹೋಗುವಂತಿಲ್ಲ.’’ ಅಖಂಡಾನಂದರು ಪುಟ್ಟ ಬಾಲಕನಂತೆ ಒಪ್ಪಿಕೊಂಡರು. ಅವರು ಬಲರಾಮನ ಮನೆಯಲ್ಲಿದ್ದು ಆಯುರ್ವೇದ ಚಿಕಿತ್ಸೆಯನ್ನು ಪಡೆಯಲಾರಂಭಿಸಿದರು. ಆ ಸಂದರ್ಭದಲ್ಲಿ ಸ್ವಾಮಿ ಪ್ರೇಮಾನಂದರು ಅವರನ್ನು ಭೇಟಿಯಾಗಲು ಬಂದರು. ಅವರು ಒಂದು ದಿನಕ್ಕಾದರೂ ಬೇಲೂರು ಮಠಕ್ಕೆ ಬರುವಂತೆ ಅಖಂಡಾನಂದರನ್ನು ಒತ್ತಾಯಿಸಿದರು. ಅದಕ್ಕೆ ಅವರು, ‘‘ಸೋದರ, ತಾಯಿ ನನಗೆ ಇಲ್ಲಿ ಇರುವಂತೆ ಹೇಳಿದ್ದಾರೆ. ಅವರ ಅನುಮತಿಯಿಲ್ಲದೆ ನಾನು ಎಲ್ಲಿಗೂ ಹೋಗಲಾರೆ’’ ಎಂದರು. ಸ್ವಾಮಿ ಪ್ರೇಮಾನಂದರು ಉದ್ಬೋಧನಕ್ಕೆ ಹೋಗಿ ಶ್ರೀಮಾತೆಯವರ ಅನುಮತಿಯನ್ನು ಪಡೆದ ತರುವಾಯವೇ ಅವರು ಬೇಲೂರು ಮಠಕ್ಕೆ ಬಂದರು.[೮]

ಸ್ವಾಮಿ ಸುಬೋಧಾನಂದರು ಹೇಳುತ್ತಾರೆ: ‘‘ಯಾವಾಗ ಶ್ರೀಮಾತೆಯವರು ನಿನ್ನ ಮೇಲೆ ಕೃಪೆ ತೋರಿದ್ದಾರೋ ಆಗಿನಿಂದಲೇ ನಿನ್ನ ವಿಧಿ ಬದಲಾಗಿದೆ ಎಂಬುದನ್ನು ದೃಢವಾಗಿ ನಂಬು. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರು, ಯಾರಿಗೆ ತಮ್ಮ ನಿಜಸ್ವರೂಪವನ್ನು ತೋರಿಸಿದ್ದಾರೆಯೋ ಅವರಿಗೆ ಮಾತ್ರ ಅವರು ಯಾರೆಂದು ತಿಳಿದಿದೆ. ನೀನು ಶ್ರೀಮಾತೆಯವರನ್ನು ನಿನ್ನವರನ್ನಾಗಿ ಮಾಡಿಕೊಂಡಲ್ಲಿ ಮಾತ್ರ ಅವರ ಕೃಪೆಯಿಂದ ಎಲ್ಲವನ್ನೂ ಪಡೆಯುವೆ.’’

ಒಮ್ಮೆ ಒಬ್ಬ ಶಿಷ್ಯ ಸ್ವಾಮಿ ಶಾರದಾನಂದರನ್ನು ಪ್ರಶ್ನಿಸಿದನು, ‘‘ಶ್ರೀಮಾತೆಯವರು ಮಂತ್ರದೀಕ್ಷೆಯನ್ನು ಕೊಡಲು ಎರಡು ಮೂರು ನಿಮಿಷಗಳನ್ನು ತೆಗೆದುಕೊಳ್ಳುತ್ತಾರೆ. ನೀವು ಮಂತ್ರದೀಕ್ಷೆಯನ್ನು ಕೊಡಲು ಮೂವತ್ತು ನಿಮಿಷಕ್ಕಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತೀರಲ್ಲ?’’ ಅದಕ್ಕೆ ಸ್ವಾಮಿ ಶಾರದಾ



೬ *Our Mother in Many forms,* ಪು. ೧೬
೭. *Sri Sarada Devi And Her Devine Play,* ಪು. ೩೮೮
೮. *Sri Sarada Devi And Her Divine Play,* ಪು. ೩೯೦

ನಂದರು ಉತ್ತರಿಸಿದರು: ''ಶ್ರೀಮಾತೆಯವರು ಇಚ್ಛಾಮಾತ್ರದಿಂದ, ಸ್ಪರ್ಶಮಾತ್ರದಿಂದ ಒಬ್ಬ ಶಿಷ್ಯನನ್ನು ಶ್ರೀರಾಮಕೃಷ್ಣರು ಸ್ವೀಕರಿಸುವಂತೆ ಮಾಡುತ್ತಾರೆ. ಆದರೆ ಅಂತಹ ಭರವಸೆಯನ್ನು ನಾನು ಶ್ರೀರಾಮಕೃಷ್ಣರಿಂದ ಪಡೆಯಲು ಸ್ವಲ್ಪ ಕಾಲ ಧ್ಯಾನ ಮಾಡಬೇಕಾಗುತ್ತದೆ.''

ಸ್ವಾಮಿ ತುರೀಯಾನಂದರು ಹೇಳುತ್ತಾರೆ: ''ಶ್ರೀಮಾತೆಯವರದು ಅದ್ಭುತ ಶಕ್ತಿ. ಅವರು ಲೋಕಸಂಗ್ರಹಕ್ಕಾಗಿ ಬದುಕುತ್ತಿದ್ದಾರೆ. ನಾವು ನಮ್ಮ ಮನಸ್ಸನ್ನು ವಿಶುದ್ಧಚಕ್ರಕ್ಕೆ ಏರಿಸಲು ಹೆಣಗಾಡುತ್ತೇವೆ. ಆದರೆ ಶ್ರೀಮಾತೆಯವರು ರಾಧಿಯ[೯] ಸಹಾಯದಿಂದ ತಮ್ಮ ಮನಸ್ಸನ್ನು ವಿಶುದ್ಧ ಚಕ್ರದಿಂದ ಮೇಲಕ್ಕೇರದಂತೆ ನೋಡಿಕೊಳ್ಳುತ್ತಿದ್ದಾರೆ. ಈ ರಹಸ್ಯವನ್ನು ಭೇದಿಸಲು ಸ್ವಲ್ಪ ಪ್ರಯತ್ನಿಸು! ತಾಯಿಗೆ ಜಯವಾಗಲಿ! ಆದ್ಯಾಶಕ್ತಿಗೆ ಜಯವಾಗಲಿ!'' [೧೦]

ಸ್ವಾಮಿ ನಿರ್ಲೇಪಾನಂದರು ಬರೆಯುತ್ತಾರೆ:

''ಶ್ರೀರಾಮಕೃಷ್ಣರ ಶಿಷ್ಯರು ಶ್ರೀಮಾತೆಯವರಿಗೆ ಪ್ರಣಾಮಗೈಯಲು ಬಂದಾಗ, ಶ್ರೀಮಾತೆಯವರು ತಮ್ಮ ಸ್ವರೂಪದಲ್ಲಿ ಪ್ರತಿಷ್ಠಿತರಾಗುತ್ತಿದ್ದುದನ್ನು ನಾವು ಗಮನಿಸಿದ್ದೇವೆ. ಅವರು ತೆರಳಿದ ಮೇಲೆ ಶ್ರೀಮಾತೆಯವರಿಗೆ ಸಹಜ ಸ್ಥಿತಿಗೆ ಮರಳಲು ಸಮಯ ತೆಗೆದುಕೊಳ್ಳುತ್ತಿತ್ತು. ಅವರ ಪರಸ್ಪರ ಸಂಬಂಧವು ಆ ಭೂಮಿಕೆಯದಾಗಿತ್ತು.'' [೧೧]

ಶ್ರೀಮಾತೆಯವರು ಮತ್ತು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಪರಸ್ಪರ ಸಂಬಂಧದ ನಮಗೆ ತಿಳಿದಿರುವ ದೃಶ್ಯಗಳಲ್ಲಿನ ಕೆಲವೇ ದೃಶ್ಯಗಳು ಇವು. ಇನ್ನು ನಮಗೆ ತಿಳಿಯದಿರುವ ಅಸಾಧಾರಣ ದೈವೀ ಘಟನೆಗಳು, ದೃಶ್ಯಗಳು, ಸನ್ನಿವೇಶಗಳು ಎಷ್ಟಿವೆಯೋ, ನಾವರಿಯೆವು.


---

೯. ರಾಧು ಅಥವಾ ರಾಧಿ — ಈಕೆ ಶ್ರೀಮಾತೆಯವರ ಕೊನೆಯ ತಮ್ಮ ಅಭಯನ ಮಗಳು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆ ದುಃಖಾತಿರೇಕದಿಂದ ತಮ್ಮ ದೇಹವನ್ನೇ ಬಿಡಬೇಕೆಂದಿದ್ದರು. ಆಗ ಶ್ರೀರಾಮಕೃಷ್ಣರು ದರ್ಶನವಿತ್ತು ಒಬ್ಬಾಕೆ ಚಿಕ್ಕ ಹುಡುಗಿಯನ್ನು ತೋರಿಸಿ, ''ಇವಳು ಮಾಯೆ. ಇವಳ ಸಹಾಯದಿಂದ ದೇಹವನ್ನು ಹಿಡಿದಿಟ್ಟುಕೊಂಡಿರು'' ಎಂದರು. ಅವಳೇ ಮುಂದೆ ರಾಧುವಾಗಿ ಜನಿಸಿದಳು. ಮುಂದೆ ಶ್ರೀಮಾತೆಯವರು ಅವಳನ್ನು ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಅದೇ ಹುಡುಗಿಯೆಂದು ಗುರುತಿಸಿದರು ಹಾಗೂ ಅವಳನ್ನು ಸಾಕುವ ಜವಾಬ್ದಾರಿಯನ್ನು ಹೊತ್ತುಕೊಂಡರು. ಅವಳಲ್ಲಿ ವಿಶೇಷ ಮಮತೆಯನ್ನು ಬೆಳೆಸುವ ಮೂಲಕ ಶ್ರೀಮಾತೆಯವರು ತಮ್ಮ ದೇಹವನ್ನು ಹಿಡಿದಿಟ್ಟುಕೊಂಡು, ತಮ್ಮ ಜೀವಿತದ ಉದ್ದೇಶವನ್ನು ಪೂರ್ತಿಗೊಳಿಸಿದರು.

೧೦. *Sri Sarada Devi And Her Divine Play,* ಪು. ೩೮೮

೧೧. ಸ್ವಾಮಿ ವಿಜ್ಞಾನಾನಂದರು ೧೯೧೩ರಲ್ಲಿ ಉದ್ಬೋಧನಕ್ಕೆ ಬಂದಿದ್ದರು. ನಾನು ಶರತ್ ಮಹಾರಾಜರ ಕೋಣೆಯಲ್ಲಿ ಕುಳಿತಿದ್ದೆನು. ನಾನು ಶ್ರೀಮಾತೆಯವರನ್ನು ದರ್ಶಿಸಲು ಅವರ ಕೋಣೆಗೆ ಹೋಗುವಾಗ ಒಂದೊಂದು ಮೆಟ್ಟಿಲನ್ನು ಹತ್ತಿದಂತೆಲ್ಲ ನನ್ನ ಹೃದಯದ ಒಂದೊಂದು ಪದ್ಮಗಳು ತೆರೆದು ಕುಂಡಲಿನಿ ಜಾಗೃತವಾಯಿತು. ನನ್ನ ದೇಹಮನಗಳು ಆನಂದಸಾಗರದಲ್ಲಿ ಲೀನವಾದವು.

ಯುವಚೇತನ



ಆತ್ಮನಲ್ಲಿ ಏನಾದರೂ ಲಿಂಗಭೇದವಿದೆಯೇನು? ಗಂಡಸಿಗೂ ಹೆಂಗಸಿಗೂ ಇರುವ ಭೇದವನ್ನು ತ್ಯಜಿಸಿ. 'ಅಸ್ತಿ, ಅಸ್ತಿ' – ಎಲ್ಲವೂ ಇದೆ ಎಂದು ಧೈರ್ಯವಾಗಿ ಹೇಳಿ. ಸಕಾರಾತ್ಮಕವಾದ ಉತ್ತಮ ಭಾವಗಳನ್ನು ಮನಸ್ಸಿನಲ್ಲಿಡಿ. 'ನಾಸ್ತಿ, ನಾಸ್ತಿ'– ಇಲ್ಲ ಇಲ್ಲ ಎಂಬ ನಿಷೇಧಾರ್ಥವನ್ನು ಕೊಡುವ ಪದಗಳನ್ನು ಪಠಿಸಿ ಪಠಿಸಿ ದೇಶವೆಲ್ಲ ಅಧೋಗತಿಗೆ ಇಳಿಯುತ್ತಿದೆ. 'ಸೋಽಹಂ, ಸೋಽಹಂ, ಶಿವೋಽಹಂ' ಇದು ಎಷ್ಟು ಕಷ್ಟ! ಪ್ರತಿಯೊಂದು ಆತ್ಮನಲ್ಲಿಯೂ ಅನಂತ ಶಕ್ತಿ ನೆಲೆಸಿದೆ. ಯಾವಾಗಲೂ 'ಇಲ್ಲ ಇಲ್ಲ' ಎಂಬ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು, ಬೆಕ್ಕು ನಾಯಿಗಳಂತೆ ಆಗಬೇಕೇನು ನೀವು? ಯಾರಿಗೆ ನಿಷೇಧವನ್ನು ಬೋಧಿಸುವುದಕ್ಕೆ ಧೈರ್ಯವಿದೆ? ಯಾರನ್ನು ದುರ್ಬಲರು, ಶಕ್ತಿಹೀನರು, ಎಂದು ಕರೆಯುವುದು? ಶಿವನೇ ನಾನು, ಶಿವನೇ ನಾನು. ಎಂದು ಜನರು ನಾಸ್ತಿ ಎಂಬ ಆಲೋಚನೆಗಳನ್ನು ಮೆಲ್ಲುತ್ತಾರೊ ಆಗ ನನ್ನ ತಲೆಗೆ ಒಂದು ಸಿಡಿಲು ಬಡಿದಂತೆ ಆಗುವುದು. ಆತ್ಮನಿಂದೆ ಮಾಡಿಕೊಳ್ಳುವುದು ಮತ್ತೊಂದು ರೋಗ. ಇದನ್ನು ನಮ್ರತೆ ಎಂದು ಕರೆಯುವಿರೇನು? ಇದು ಮರೆಮಾಚಿದ ಅಹಂಕಾರ. '**ನ ಲಿಂಗಂ ಧರ್ಮಕಾರಣಂ, ಸಮತಾ ಸರ್ವಭೂತೇಷು, ಏತನ್ಮುಕ್ತಸ್ಯ ಲಕ್ಷಣಂ**' – ಬಾಹ್ಯಾಡಂಬರವಲ್ಲ ಮುಕ್ತನ ಲಕ್ಷಣ. ಎಲ್ಲದರಲ್ಲಿರುವ ಸಮದೃಷ್ಟಿ ಜೀವನ್ಮುಕ್ತನ ಲಕ್ಷಣ. 'ಅಸ್ತಿ, ಅಸ್ತಿ, ಸೋಽಹಂ ಚಿದಾನಂದ ರೂಪಃ, ಶಿವೋಽಹಂ ಶಿವೋಽಹಂ.' ಇದೆ, ಇದೆ; ನಾನೇ ಅವನು – ಚಿದಾನಂದ ರೂಪನಾದ ಶಿವನು. **ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರಿಃ** – ಸಿಂಹ ತನ್ನ ನಖದಿಂದ ಪಂಜರವನ್ನು ಸೀಳಿಬರುವಂತೆ, ಮಾಯಾಪ್ರಪಂಚದ ಬಂಧನಗಳನ್ನು ಅವನು ಸೀಳಿ ಬರುವನು. '**ನಾಯಮಾತ್ಮಾ ಬಲಹೀನೇನ ಲಭ್ಯಃ**' ಬಲಹೀನರಿಗೆ ಆತ್ಮಲಾಭವಾಗುವುದಿಲ್ಲ. ಮಹಾಹಿಮರಾಶಿಯ ಪರ್ವತವು ಮೇಲೆ ಬೀಳುವಂತೆ ಜಗದ ಮೇಲೆ ಬೀಳಿ. ನಿಮ್ಮ ಭಾರಕ್ಕೆ ಭೂಮಿ ಕುಸಿದು ಚೂರಾಗಲಿ. ''**ಹರ ಹರ ಮಹಾದೇವ!**'' '**ಉದ್ಧರೇದಾತ್ಮನಾತ್ಮಾನಂ**' ತನ್ನನ್ನು ತನ್ನಾತ್ಮನಿಂದಲೇ ಉದ್ಧರಿಸಿಕೊಳ್ಳಬೇಕು. ಪುರುಷಕಾರದ ಬಲದಿಂದ, ಸ್ವಪ್ರಯತ್ನದ ಸಾಹಸದಿಂದ ನಾವಿರುವ ಬಂಧನದಿಂದ ಪಾರಾಗಬೇಕು. *(ಕೃತಿಶ್ರೇಣಿ, ಸಂ.೪, ಪು.೧೮೧–೮೨)*

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೯

ಹೋಟೆಲಿಗೆ ಬಂದ ಶ್ರೀಮಾತೆ ವ್ಯವಸ್ಥೆಯೆಲ್ಲವನ್ನೂ ನೋಡಿ ತುಂಬ ಸಂತಸಗೊಂಡರು. ಕೃಷ್ಣಲಾಲ್ ಮತ್ತು ಗಣೇಂದ್ರನಾಥ ರಾತ್ರಿಯ ಗಾಡಿಗೆ ಕಲ್ಕತ್ತೆಗೆ ಹಿಂದಿರುಗಿದರು. ಊಟಕ್ಕೆ ಕುಳಿತಾಗ ಕೃಷ್ಣಲಾಲ್ ಹೇಳಿದ, ''ಎಷ್ಟೊಂದು ಬಗೆಯ ಅಡುಗೆ ಮಾಡಿದ್ದಾನೆ! ಸೂಕ್ತ[*]ದಿಂದ ಹಿಡಿದು ಅಂಬಲಿಯವರೆಗೂ!''

ನಾಲ್ಕು ಎತ್ತಿನಗಾಡಿಗಳಲ್ಲಿ ಶ್ರೀಮಾತೆ ಹಾಗೂ ಅವರ ಬಳಗ, ಸಾಮಾನುಗಳು ಇವನ್ನೆಲ್ಲ ಸಾಗಿಸಿಕೊಂಡು, ಕತ್ತಲೆಗೆ ಮೊದಲೇ ಕೊತುಲ್‌ಪುರದ ಕಡೆಗೆ ಹೊರಟೆವು. ದಾರಿಯ ನಡುವೆ ಜಯಪುರದ ಬಳಿ ಒಂದು ಕಾಡು ಸಿಗುತ್ತದೆ. ಇಡೀ ರಾತ್ರಿ ಗಾಡಿಗಳು ಸಾಗಿ, ಬೆಳಗಿನ ಹೊತ್ತಿಗೆ ಕೊತುಲ್‌ಪುರ ತಲುಪಿದೆವು. ಅಲ್ಲಿ ಇನ್ಸ್‌ಪೆಕ್ಟರನ ಸಹಕಾರದಿಂದ ಹೋಟೆಲು ಹಾಗೂ ಬ್ರಾಹ್ಮಣರನ್ನು ಒದಗಿಸಿಕೊಂಡು, ಬೇಗನೆ ಅಡುಗೆ ಮಾಡಿ ಬಡಿಸಲಾಯಿತು. ಶ್ರೀಮಾತೆಗಾಗಿ ಒಂದು ಪಲ್ಲಕ್ಕಿಯ ವ್ಯವಸ್ಥೆಯನ್ನೂ ಮಾಡಲಾಯಿತು. ಆಹಾರದ ನಂತರ ಪಲ್ಲಕ್ಕಿಯಲ್ಲಿ ಶ್ರೀಮಾತೆ ಹಾಗೂ ರಾಧು, ಠಾಕೂರರನ್ನು (ಅವರ ಭಾವಚಿತ್ರವನ್ನು) ತೆಗೆದುಕೊಂಡು ಹೊರಟರು. ಆಗ ಜ್ಯೇಷ್ಠಮಾಸ; ವಿಪರೀತ ಸೆಖೆ. ಪಲ್ಲಕ್ಕಿಯಲ್ಲಿ ಒಂದು ಬೀಸಣಿಗೆ, ಒಂದು ಗಿಂಡಿಯಲ್ಲಿ ನೀರು ಇವನ್ನು ಇಡಲಾಯಿತು. ಉಳಿದವರೆಲ್ಲರೂ ಎತ್ತಿನಗಾಡಿಯಲ್ಲಿ ಬಳಸು ದಾರಿ ಮೂಲಕ ಹೊರಟು, ಸಾಯಂಕಾಲ ಕಳೆದು ಕತ್ತಲಾಗುವ ಹೊತ್ತಿಗೆ ಜಯರಾಮಬಾಟಿ ತಲುಪಿದೆವು.

ಈ ಬಾರಿ ನಾನು ಜಯರಾಮಬಾಟಿಯಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ತಂಗಿದ್ದೆ. ಪ್ರತಿದಿನ ಶ್ರೀಮಾತೆಯವರೊಂದಿಗೆ ನಾನಾಬಗೆಯ ಮಾತುಕತೆ ನಡೆಯುತ್ತಿತ್ತು. ಅವುಗಳಲ್ಲಿ ಉಲ್ಲೇಖ ಯೋಗ್ಯವೆನಿಸಿದ ಕೆಲವನ್ನು ಇಲ್ಲಿ ಬರೆಯುತ್ತಿದ್ದೇನೆ:

ಒಂದು ದಿನ ಮಾತುಕತೆಯ ನಡುವೆ ಶ್ರೀಮಾತೆ ಹೇಳಿದರು: ''ಮೊದಮೊದಲು ಗಂಡನ ಮನೆಗೆ ಅಂತ ಕಾಮಾರಪುಕುರಕ್ಕೆ ಹೋದಾಗ ಹಾಲದಾರಪುಕುರಕ್ಕೆ ಸ್ನಾನ ಮಾಡಲು ಹೋಗಬೇಕಿತ್ತು. ಹೊಸದಾಗಿ ಬಂದ ಸೊಸೆ, ಅದೂ ಅಲ್ಲದೆ ಚಿಕ್ಕ ಮಗು ನಾನು — ಭಯದಿಂದ ನಡುಗುತ್ತಿದ್ದೆ. ಜನರ ಮುಂದೆ ಹೇಗೆ ಓಡಾಡಲಿ? ಹೆದರುತ್ತ ಮನೆಯಿಂದ ಹೊರಗಿಳಿದೆ. ಆಗ ನೋಡುತ್ತಿದ್ದಂತೆಯೆ ಎಂಟು ಮಂದಿ ಹೆಣ್ಣುಮಕ್ಕಳು, ನನ್ನದೇ ವಯಸ್ಸಿನವರು; ಬಂದು ನನ್ನನ್ನು ಸೇರಿಕೊಂಡರು. ನನ್ನ ಸುತ್ತ ನಿಂತು ಅವರೆಂದರು, 'ಸ್ನಾನಕ್ಕೆ ಹೋಗುತ್ತೀಯಾ? ನಡೆ, ನಾವು ನಿನ್ನ



ಸುತ್ತ ಸುತ್ತಿಕೊಂಡು ಕರೆದೊಯ್ಯುತ್ತೇವೆ. ಯಾರೂ ನೋಡಲಾರರು.' ನಾನು ಕೇಳಿದೆ, 'ನೀವೆಲ್ಲ ಯಾರಮ್ಮಾ?' ಅದಕ್ಕವರು, 'ನೀನು ಹೊಸದಾಗಿ ಬಂದ ಸೊಸೆಯಲ್ಲವೆ? ನಾವು ನಿನ್ನ ಸ್ನೇಹಿತೆಯರು. ನಿನ್ನ ಮನೆಯ ಸಮೀಪದಲ್ಲೇ ವಾಸ ಮಾಡುತ್ತಿದ್ದೇವೆ' ಎಂದರು. ನೆರೆಮನೆಯ ಹುಡುಗಿಯರು ಇರಬೇಕು ಎಂದುಕೊಂಡೆ. ಅವರು ನನ್ನನ್ನು ಕರೆದುಕೊಂಡು ಹೋದರು. ನಾಲ್ಕು ಮಂದಿ ನನ್ನ ಮುಂದೆ, ನಾಲ್ಕು ಮಂದಿ ನನ್ನ ಹಿಂದೆ. ಸ್ನಾನ ಮುಗಿಸಿದ ನಂತರ ಮತ್ತೆ ಮನೆಯ ತನಕವೂ ಕರೆದುಕೊಂಡು ಬಂದರು. ಹೋಗುವ ವೇಳೆಗೆ ಹೇಳಿದರು, 'ನಾವು ಪ್ರತಿದಿನವೂ ನಿನ್ನನ್ನು ಹುಡುಕಿ, ನಿನ್ನನ್ನು ಕರೆದುಕೊಂಡು ಹೋಗುತ್ತೇವೆ. ಮತ್ತೆ ಕರೆದುಕೊಂಡು ಬಂದು ತಲುಪಿಸುತ್ತೇವೆ. ನೀನು ನಮ್ಮ ಸ್ನೇಹಿತೆ

[*] ಒಂದು ಬಗೆಯ ಬಂಗಾಳಿ ಪಲ್ಯ. *(-ಅನು.)*

ಯಲ್ಲವೆ?' ಎಂದರು. ಅಂದಿನಿಂದ ಪ್ರತಿದಿನವೂ ನನ್ನನ್ನು ಕರೆದು ಕೊಂಡು ಹೋಗಿ, ಮರಳಿ ಬಂದು ತಲುಪಿಸುತ್ತಿದ್ದರು.''

ನಾನು ಶ್ರೀಮಾತೆಯನ್ನು ಕೇಳಿದೆ, ''ಅವರೇನು, ಮಹಾ ಮಾಯಾರೂಪಿಣಿಯಾದ ನಿಮ್ಮ ಅಷ್ಟಸಖಿಯರೆ?'' ಅದಕ್ಕೆ ಶ್ರೀಮಾತೆ, ''ಯಾರಿಗೆ ಗೊತ್ತು ಮಗೂ! ನಿನಗೆ ಈ ವಿಷಯವೆಲ್ಲ ಬರೀ ತಮಾಷೆ'' ಎಂದರು. ನಾನೆಂದೆ, ''ನೀವು ವಿಷಯ ಮರೆಸ ಬೇಡಿ. ಬೂದಿಮುಚ್ಚಿದ ಬೆಕ್ಕಲ್ಲವೆ!'' ಅದಕ್ಕೆ ಅವರು ಮೆಲುನಗೆ ನಕ್ಕರು.

ಒಂದು ಬಾರಿ ಅವರನ್ನು ಕೇಳಿದೆ: ''ಅಮ್ಮಾ, ಠಾಕೂರರ ಭಕ್ತ ಹರೀಶ ನಿಮ್ಮನ್ನು ಆಕ್ರಮಿಸಿದ ಎಂದು ಕೇಳಿದ್ದೇನೆ — ಅದು ನಿಜವೆ?'' ಶ್ರೀಮಾತೆ ಹೇಳತೊಡಗಿದರು: ''ಹೌದು ಮಗೂ, ಹರೀಶ ತುಂಬ ಒಳ್ಳೆಯವ, ಈಶ್ವರಕೋಟಿ (?). ಅವನ ಹೆಂಡತಿ ಅವನಿಗೆ ಔಷಧಿ ತಿನ್ನಿಸಿದಳು. ಅದರಿಂದಾಗಿ ಅವನ ತಲೆ ಕೆಟ್ಟು ಹೋಯಿತು. ಅಂದು ಕಾಮಾರಪುಕುರದ ಮನೆಯಲ್ಲಿ ನನ್ನ ಹೊರತು ಬೇರೆ ಯಾರೂ ಇರಲಿಲ್ಲ. ಅವನಿಂದ ತಪ್ಪಿಸಿಕೊಳ್ಳಲು ಹೋಗಿ ಧಾನ್ಯದ ಒಟ್ಟನ್ನು ಏಳು ಬಾರಿ ಸುತ್ತಿ, ನಾಲ್ಕೂ ಕಡೆ ಓಡಾಡಿ, ಬಸವಳಿದು ಬಿದ್ದುಬಿಟ್ಟೆ. ಇನ್ನೇನು ಮಾಡಲೂ ದಾರಿ ಯಿಲ್ಲದಾಗ ಏನು ಭಾವವೆದ್ದು ಬಂತೋ ಗೊತ್ತಿಲ್ಲ , ಅವನನ್ನು ಕೆಡವಿ, ಅವನ ಎದೆಯ ಮೇಲೆ ಮೊಣಕಾಲೂರಿ ಕುಳಿತು, ಒಂದು ಕೈಯಿಂದ ಅವನ ನಾಲಿಗೆಯನ್ನು ಎಳೆದು, ಇನ್ನೊಂದು ಕೈಯಿಂದ ಅವನ ಕೊರಳ ಮೇಲೆ ಒಂದೇಟು ಕೊಟ್ಟೆ. ನನ್ನ ಕೈಯಲ್ಲಿ ಬಾವು ಬಂದುಬಿಟ್ಟಿತ್ತು. ಅವನು ಹಾಹಾಕಾರ ಮಾಡುತ್ತ ಉಸಿರುಗಟ್ಟಿ ಒದ್ದಾಡುತ್ತಿದ್ದ. 'ಈಗ ಸಾಕು' ಅಂತ ಅನ್ನಿಸಿತು; ಆಗ ಬಿಟ್ಟುಬಿಟ್ಟೆ. ನಂತರ ಅವನು ಬರಲಿಲ್ಲ. ನಿರಂಜನನೆಂದರೆ ಯಮನನ್ನು ಕಂಡ ಹಾಗೆ ಹೆದರುತ್ತಿದ್ದ. ಅವನು ಚೆನ್ನಾಗಿ ಏಟು ಕೊಡುತ್ತಿದ್ದನಲ್ಲವೆ!''

ನಾನು ಕೇಳಿದೆ: ''ಆಗ ನೀವು ಬಗಲಾ ಮೂರ್ತಿಯ ರೂಪ ಧರಿಸಿದಿರಾ? ಬೇಲೂರು ಮಠದಲ್ಲಿ ಹಾಗೆ ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ.'' ಅದಕ್ಕೆ ಶ್ರೀಮಾತೆ, ''ಯಾರಿಗೆ ಗೊತ್ತು ಮಗೂ, ಆಗ ನಾನು ನಾನಾಗಿರಲಿಲ್ಲ'' ಎಂದರು. ನಾನೆಂದೆ, ''ನೀವು ಸಿಕ್ಕಿ ಹಾಕಿಕೊಳ್ಳಲಾರಿರಿ. 'ಬೂದಿ ಮುಚ್ಚಿದ ಬೆಕ್ಕು' ತಾನೆ?'' ಮತ್ತೆ ಅವರು ಮೆಲುನಗೆ ನಕ್ಕರು.

ಇನ್ನೊಂದು ಸಲ ಅವರು ಶ್ರೀರಾಮಕೃಷ್ಣರಿಗೋಸ್ಕರ ತಾರ ಕೇಶ್ವರದಲ್ಲಿ ವ್ರತ ಹಿಡಿದು ಕುಳಿತ ವಿಷಯವಾಗಿ ಹೇಳಿದರು: ''ಯಾವುದರಿಂದಲೂ ಏನೂ ಪ್ರಯೋಜನವಾಗದೆ ಹೋದಾಗ ತಾರಕನಾಥನ ಬಳಿ ವ್ರತ ಹಿಡಿದರೆ ಆದೀತೇನೋ ಅಂತ ಅನ್ನಿ ಸಿತು. ಅದಕ್ಕೆ ಠಾಕೂರರು ತಡೆಯಲಿಲ್ಲ. ಎರಡು ದಿನಗಳ ಕಾಲ ವ್ರತ ಹಿಡಿದು ಕುಳಿತಿದ್ದೆ. ನಡುರಾತ್ರಿ ನಿದ್ರೆ ಹತ್ತಿದ್ದಾಗ ಹಠಾತ್ತನೆ ಒಂದು ಸದ್ದಾಗಿ ನಿದ್ದೆ ಬಿಟ್ಟೆದ್ದೆ. ಕುಂಬಾರನ ಮನೆಯಲ್ಲಿ ಮಡಕೆ ಗಳ ಸಾಲಿನ ಮೇಲೆ ಒಂದು ಬೆತ್ತದಿಂದ ಹೊಡೆದುಬಿಟ್ಟರೆ ಹೇಗಾ ದೀತೋ ಹಾಗೆ ಸದ್ದಾಯಿತೆಂದು ನನ್ನ ಭಾವನೆ. ಜೊತೆಗೇ ಅನ್ನಿ ಸಿತು, ದೇಹವೆಂದರೆ ಇಷ್ಟೇ ತಾನೆ! ಈ ದೇಹ ಇದ್ದರೆಷ್ಟು, ಬಿಟ್ಟ ರೆಷ್ಟು? ಇದೂ ಅದೇ ರೀತಿ ಒಡೆದು ಹೋಗುವುದು. ಸಂಸಾರದಲ್ಲಿ ಯಾರು ಯಾರಿಗೆ ಪತಿ, ಯಾರು ಯಾರಿಗೆ ಪತ್ನಿ? ಇವೆಲ್ಲ ಒಂದು ದಿನ ಒಡೆದು ಹೋಗುವುದು ತಾನೆ! ಯಾರು ಯಾರಿಗೂ ಏನೂ ಅಲ್ಲ. ಮನುಷ್ಯ ಶರೀರವನ್ನು ಧರಿಸಿದ ಮೇಲೆ ಇದೇ ರೀತಿ ಒಡೆದು ಹೋಗುವುದು. ಇನ್ನು ಯಾರ ಸಲುವಾಗಿ ವ್ರತ ಹಿಡಿಯಲಿ! ನನ್ನ ಪಾಲಿಗೆ ಜಗತ್ತು ಶೂನ್ಯವಾಗಿ ಹೋಯಿತು. ನಿಧಾನವಾಗಿ ತೆವ ಳುತ್ತ ದೇವಾಲಯದ ಹಿಂಭಾಗಕ್ಕೆ ಬಂದೆ. ಗಟಾರದಿಂದ ಸ್ನಾನ ಮಾಡುವ ನೀರನ್ನು ತೆಗೆದುಕೊಂಡು, ಮುಖದ ಮೇಲೆ, ಕಣ್ಣಿನ ಮೇಲೆ ಎರಚಿಕೊಂಡೆ. ಬೆಳಗಾದ ಮೇಲೆ ಮರಳಿ ಬಂದೆ. ನಾನು ಮರಳಿ ಬಂದುದನ್ನು ಕಂಡು ಠಾಕೂರ್ ಸನ್ನೆ ಮಾಡಿ 'ಏನಾ ಯಿತು?' ಎಂದು ಕೇಳಿದರು; ಅನಂತರ ಹೆಬ್ಬೆರಳನ್ನು ಅಲುಗಾಡಿ ಸುತ್ತ, 'ಎಲ್ಲ ವಿಫಲವೆಂದು ತಿಳಿಯಿತಲ್ಲಾ?' ಎಂದು ತಿಳಿಸಿದರು.''

ಕೆಲವೊಂದು ದಿನ ಶ್ರೀಮಾತೆ ಠಾಕೂರ್ ಹಾಗೂ ತಮ್ಮ ಬಗ್ಗೆ ಕೆಲವು ಮಹತ್ವಪೂರ್ಣ ಸಂಗತಿಗಳನ್ನು ಹೇಳುತ್ತಿದ್ದರು. ಒಂದು ದಿನ ಈ ರೀತಿ ಕೆಲವು ಘಟನೆಗಳನ್ನು ಒಂದಾದ ಮೇಲೊಂದು ಹೇಳತೊಡಗಿದರು. ಅವುಗಳಲ್ಲಿ ನನಗೆ ನೆನಪಾಗುವ ಕೆಲವನ್ನು ಇಲ್ಲಿ ನೀಡುತ್ತಿದ್ದೇನೆ:

''ಗೋಲಾಪ್ ಏನು ಕಡಿಮೆಯೆ? ದಕ್ಷಿಣೇಶ್ವರದಲ್ಲಿ ನಾನು ಠಾಕೂರರ ಬಳಿಗೆ ಹೋಗುತ್ತಿದ್ದೆ ಅಂತ ಅವಳಿಗೆ ಅಸೂಯೆಯಾಗು ತ್ತಿತ್ತು. ಒಂದು ದಿನ ಅವಳು ಹೇಳಿಯೇ ಬಿಟ್ಟಳು, 'ನೀವೇಕೆ ಠಾಕೂರರ ಬಳಿಗೆ ಹೋಗುತ್ತೀರಾ?' ಅಂತ. ಯಾರಾದರೂ ಒಂದು ಮಾತು ಹೇಳಿಬಿಟ್ಟರೆ ನನಗೆ ಸಹಿಸಲಾಗುತ್ತಿರಲಿಲ್ಲ. ಇನ್ನೊ ಬ್ಬರು ಆಡಿಕೊಳ್ಳುವಂತಹ ಕೆಲಸವನ್ನೇನೂ ನಾನು ಮಾಡಿಲ್ಲ, ಇನ್ನು ಇವಳ ಮಾತನ್ನಾದರೂ ಏಕೆ ಕೇಳಬೇಕು? ಹಾಗೆಂದು ನಾನು ಅಲ್ಲಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟೆ. ಆ ದಿನಗಳು ಹೇಗೆ ಕಳೆದವು! ದಿನ ಕಳೆಯುವಾಗ ಠಾಕೂರರು ಒಂದು ಸಲ ಝಾವು ತಲಾಗೆ (ಶೌಚಾದಿಗಳಿಗೆ) ಹೋಗುವಾಗ ಮಾತ್ರ ನನಗೆ ನೋಡ ಲಾಗುತ್ತಿತ್ತು, ಇಲ್ಲದಿದ್ದರೆ ಇಲ್ಲ — ಅದೂ ದೂರದಿಂದ. ನಾನು ಅಷ್ಟರಲ್ಲೇ ತೃಪ್ತಿ ಹೊಂದುತ್ತಿದ್ದೆ.

''ಕಾಮಾರಪುಕುರದಲ್ಲಿ ಹಾಗೂ ಇಲ್ಲಿ, ಹೆಣ್ಣುಮಕ್ಕಳು ಏನೇನೋ ಹೇಳುತ್ತಿದ್ದರು. ಮಕ್ಕಳಾಗದಿದ್ದರೆ ಯಾವ ಕಾರ್ಯ ದಲ್ಲೂ ಹೆಂಗಸರು ಭಾಗವಹಿಸುವಂತಿಲ್ಲ, ಬಂಜೆಯಾದವರು ಯಾವುದೇ ಶುಭಕಾರ್ಯಗಳಲ್ಲಿ ಮುತ್ತೈದೆಯಾಗಿ ಪಾಲ್ಗೊಳ್ಳುವ ಹಾಗಿಲ್ಲ ಎನ್ನುತ್ತಿದ್ದರು. ಆಗ ನಾನಿನ್ನೂ ಚಿಕ್ಕವಳಾಗಿದ್ದೆ. ಈ ಮಾತುಗಳನ್ನೆಲ್ಲ ಕೇಳಿ ನನ್ನ ಮನಸ್ಸಿಗೆ ದುಃಖವಾಗುತ್ತಿತ್ತು. 'ಹಾಗಾ ದರೆ ನನಗೆ ಒಂದೂ ಮಗುವಾಗದೆ?' ಅನ್ನಿಸುತ್ತಿತ್ತು. ದಕ್ಷಿಣೇಶ್ವರಕ್ಕೆ ಹೋದಾಗ ಒಂದು ಸಲ ಆ ಮಾತು ನೆನಪಾಯಿತು. ಹಾಗೆ ನೆನಪಾದ ದಿನ — ನಾನು ಯಾರಿಗೂ ಅದನ್ನು ಹೇಳಿರಲಿಲ್ಲ;

ಠಾಕೂರರು ತಾವಾಗಿಯೇ ಹೇಳಿದರು, 'ನೀನೇಕೆ ಚಿಂತಿಸುತ್ತಿದ್ದೀಯಾ? ನಿನಗೆ ರತ್ನದಂತಹ ಮಕ್ಕಳನ್ನೇ ಕೊಟ್ಟು ಹೋಗುತ್ತೇನೆ ನೋಡು. ತಲೆಯನ್ನೇ ಕತ್ತರಿಸಿ ತಪಸ್ಸು ಮಾಡಿದರೂ ಅಂಥ ಮಕ್ಕಳು ಸಿಗಲಾರರು. ಆಮೇಲೆ ನೀನೇ ನೋಡುವೆ, ಎಷ್ಟೊಂದು ಮಕ್ಕಳು ನಿನ್ನನ್ನು 'ಅಮ್ಮಾ' ಎಂದು ಕರೆಯುವರೆಂದರೆ, ನಿನಗೆ ಅವರನ್ನು ನೋಡಿಕೊಳ್ಳುವುದೇ ಕಷ್ಟವಾಗುವುದು' ಅಂತ.

''ಗೋಲಾಪ್ ಆ ಮಾತನ್ನು ಹೇಳಿದ ಮೇಲೆ ಕೆಲವು ದಿನ ಠಾಕೂರರ ಬಳಿಗೆ ನಾನು ಹೋಗಲಿಲ್ಲ. ಆಮೇಲೆ ಹೋಗಬೇಕಾಗಿ ಬಂದಾಗ ಕೇಳಿದೆ, 'ನಾನು ನಿಮಗೆ ಏನಾಗಿದ್ದೇನೆ?' ಆಗ ಅವರು ಕಾಳೀಮಂದಿರದತ್ತ ತೋರಿಸಿ, 'ಅಲ್ಲಿ ಯಾರಿದ್ದಾರೋ' ಎಂದು, ಬಳಿಕ ನನ್ನತ್ತ ತೋರಿಸಿ, 'ಇಲ್ಲೂ ಅವಳೇ ಇದ್ದಾಳೆ' ಎಂದರು.''

ಶ್ರೀಮಾತೆ ಈ ವಿಷಯವನ್ನು ಹೇಳಿದಾಗ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆಯೆದ್ದಿತು. ಅದನ್ನು ನನಗೆ ಕೇಳದಿರಲಾಗಲಿಲ್ಲ. ಕೇಳಿದೆ, ''ಅಮ್ಮಾ, ಸುಬೋಧ ಮಹಾರಾಜರಿಂದ [೨] ಕೇಳಿದ್ದೆ, ಠಾಕೂರರ ದೇಹತ್ಯಾಗವಾದ ನಂತರ ನೀವು, 'ನನ್ನಮ್ಮ ಕಾಳೀ, ಎಲ್ಲಿಗೆ ಹೋಗಿಬಿಟ್ಟೆಯಮ್ಮಾ!' ಎಂದು ಅಳತೊಡಗಿದರಂತೆ? ಹೌದೆ?'' ಅದಕ್ಕೆ ಶ್ರೀಮಾತೆ ಉತ್ತರಿಸಿದರು, ''ಅದೊಂದೂ ನನಗೆ ಅಷ್ಟಾಗಿ ನೆನಪಿಲ್ಲ, ಮಗೂ.'' ನಾನೂ ಬಿಡಲಿಲ್ಲ. ಮತ್ತೆ ಅವರನ್ನು ಕೇಳಿದೆ, ''ನಿಮ್ಮ ದೃಷ್ಟಿಯಿಂದ ನೀವು ಅವರನ್ನು ಯಾವ ಭಾವದಿಂದ ನೋಡುತ್ತಿದ್ದಿರಿ?'' ಮೊದಲು ಅವರ ಕಡೆಯಿಂದ ಸರಿಯಾದ ಉತ್ತರ ಬರಲಿಲ್ಲ. ಬಹಳ ಹೊತ್ತು ಎಳೆದಾಡಿದ ನಂತರ ಸ್ಪಷ್ಟ ಉತ್ತರ ಲಭಿಸಿತು: ''ನಾನೂ ಅದೇ ರೀತಿ ನೋಡುತ್ತಿದ್ದೆ'' ಎಂದರು.

ಮೇಲಿನ ಮಾತುಕತೆಗಳಾದ ನಂತರ ಯಾಕೋ, ಶ್ರೀಮಾತೆಯವರ ಮನಸ್ಸು ಠಾಕೂರರ ದೇಹತ್ಯಾಗದ ಕಡೆಗೇ ಹರಿಯಿತು. ಅವರು ಮತ್ತೆಮತ್ತೆ ಆ ವಿಷಯವನ್ನು ಕುರಿತೇ ಹೇಳತೊಡಗಿದರು: ''ಆ ದಿನ ಬೆಳಗಿನಿಂದಲೇ ಎಲ್ಲವೂ ಮೇಲುಕೆಳಗೆ ಆಗುತ್ತಿದ್ದವು. ಮಕ್ಕಳಿಗೋಸ್ಕರ (ಶಿಷ್ಯಂದಿರು) ಖಿಚುಡಿ ಮಾಡುತ್ತಿದ್ದೆ, ಅದರ ತಳ ಹಿಡಿದುಕೊಂಡಿತು. ಮೇಲ್ಭಾಗವನ್ನು ಅವರಿಗೆ ನೀಡಿದೆ, ತಳದ ಭಾಗವನ್ನು ನಾವು ಉಂಡೆವು. ನನ್ನದೊಂದು ಕೆಂಪಂಚು ಸೆರಗಿನ ದೇಸೀ ಸೀರೆಯಿತ್ತು. ಅದೆಲ್ಲಿ ಕಾಣೆಯಾಯಿತೋ — ಬಹುಶಃ ಯಾರೋ ಕದ್ದುಬಿಟ್ಟರು. ನೀರಿಡುವ ಮಡಕೆಯಿತ್ತು, ಅದನ್ನು ಎತ್ತಿಕೊಳ್ಳಲು ಹೋದರೆ, ಕೈಯಿಂದ ಬಿದ್ದು ಒಡೆದುಹೋಯಿತು!''

ಶ್ರೀಮಾತೆ ಸುತ್ತಿ ಬಳಸಿ, ಮತ್ತೆ ಆ ವಿಷಯಕ್ಕೇ ಬಂದು ಹೇಳತೊಡಗಿದರು: ''ಒಂದು ದಿನ ದಕ್ಷಿಣೇಶ್ವರದಲ್ಲಿ ಊಟದ ತಟ್ಟೆಯನ್ನು ತೆಗೆದುಕೊಂಡು ಠಾಕೂರರ ಕೋಣೆಯನ್ನು ಪ್ರವೇಶಿಸುತ್ತಿದ್ದೆ. ಒಬ್ಬಾಕೆ ಹೆಣ್ಣುಮಗಳು ಬಂದು, 'ನನಗೆ ಕೊಡಿ ಅಮ್ಮಾ, ನಾನು ತೆಗೆದುಕೊಂಡು ಹೋಗುತ್ತೇನೆ' ಎಂದಳು. ಸುಮ್ಮನೆ ಅವಳ ಕೈಗೆ ಕೊಟ್ಟುಬಿಟ್ಟೆ. ಆದರೆ ಠಾಕೂರರು ಅದನ್ನು ಊಟಮಾಡಲು ಕುಳಿತುಕೊಳ್ಳಲೇ ಇಲ್ಲ. ಆ ಹೆಣ್ಣುಮಗಳು ತಟ್ಟೆಯನ್ನು ಅಲ್ಲಿಟ್ಟು ಹೋಗಿಬಿಟ್ಟಳು. ನಾನು ಕೇಳಿದಾಗ ಠಾಕೂರರೆಂದರು, 'ನೀನೇಕೆ ಅವಳ ಕೈಗೆ ಕೊಟ್ಟುಬಿಟ್ಟೆ? ಅವಳು ಎಂಥವಳೆಂದು ನಿನಗೆ ಗೊತ್ತಿಲ್ಲವೆ? ಈಗ ಅವಳು ಸ್ಪರ್ಶಿಸಿದ್ದನ್ನು ನಾನು ಹೇಗೆ ತಿನ್ನಲಿ?' ಬಹಳ ಒತ್ತಾಯ ಮಾಡಿದ ಮೇಲೆ ಅವರೇನೋ ಊಟಕ್ಕೆ ಕುಳಿತರು, ಆದರೆ ಇನ್ನೆಂದಿಗೂ ಆಕೆಯ ಕೈಗೆ ತಟ್ಟೆ ಕೊಡಬಾರದೆಂದು ಹೇಳಿಬಿಟ್ಟರು. ನಾನು ಕೈಜೋಡಿಸಿ ಹೇಳಿದೆ, 'ಅದು ನನ್ನ ಕೈಲಿ ಸಾಧ್ಯವಿಲ್ಲ ಠಾಕೂರ್. ಯಾರಾದರೂ ನನ್ನನ್ನು 'ಅಮ್ಮಾ' ಅಂತ ಕರೆದಾಗ ನನಗೆ ಸುಮ್ಮನಿರಲಾಗದು. ನೀವಂತೂ ಕೇವಲ ನನಗೆ ಠಾಕೂರ್ ಅಲ್ಲ; ನೀವು ಎಲ್ಲರ ಠಾಕೂರ್ ಅಲ್ಲವೆ?' ಆಗ ಅವರು ಆನಂದಗೊಂಡು ಊಟ ಮಾಡಿದರು.

''ಠಾಕೂರ್ ಮಾತನಾಡತೊಡಗಿದರೆಂದರೆ ಹೇಳುತ್ತಲೇ ಹೋಗುತ್ತಿದ್ದರು, ಮುಕ್ತಾಯಗೊಳಿಸಲು ಇಚ್ಛಿಸುತ್ತಿರಲಿಲ್ಲ. ನಾನು ಕೇಳುತ್ತ ಕೇಳುತ್ತ ನೆಲದಲ್ಲೇ ಸೆರಗು ಹಾಸಿ ಮಲಗಿಬಿಡುತ್ತಿದ್ದೆ. ಹೆಣ್ಣುಮಕ್ಕಳು ನನ್ನನ್ನು ಎಬ್ಬಿಸಿ ಕುಳ್ಳಿರಿಸಲು ಯತ್ನಿಸುತ್ತ 'ಅಂಥ ಅದ್ಭುತ ಮಾತನ್ನು ಕೇಳಲೇ ಇಲ್ಲವಲ್ಲ?' ಎನ್ನುತ್ತಿದ್ದರು. ಆಗ ಠಾಕೂರ್ ಅವರನ್ನು ತಡೆದು, 'ಅವಳನ್ನು ಎಬ್ಬಿಸಬೇಡ. ಎಲ್ಲವನ್ನೂ ಕೇಳಿಬಿಟ್ಟರೆ ಅವಳು ಬದುಕಿ ಉಳಿಯಲಾರಳು, ದಿಢೀರನೆ ಎಲ್ಲ ಬಿಟ್ಟು ಹೋಗಿಬಿಡುವಳು' ಎನ್ನುತ್ತಿದ್ದರಂತೆ. ''

ಒಂದು ಸಲ ಶ್ರೀಮಾತೆಯವರನ್ನು ಕೇಳಿದೆ, ''ಸ್ವಾಮೀಜಿಯವರಿಂದ ಕೇಳಿದ್ದೆ, 'ಠಾಕೂರರು ಬಲರಾಮ ಬಾಬುವಿನ ಮನೆಯ ಅನ್ನ ಊಟಮಾಡುತ್ತಿದ್ದರು' ಅಂತ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಹೌದು, ಅವರು ನನಗೆ ಹೇಳಿದ್ದರು, 'ನನ್ನ ಬಲರಾಮನ ಅನ್ನ ಶುದ್ಧ ಅನ್ನ. ಅವರು ಜಗನ್ನಾಥನಿಗೆ ನೈವೇದ್ಯ ನೀಡುತ್ತಾರೆ. ನೀನು ಅಲ್ಲಿ ಊಟ ಮಾಡಬಹುದು' ಅಂತ.''

ಸ್ವಾಮೀಜಿ ಹಾಗೂ ಬಾಬುರಾಮ ಮಹಾರಾಜರು ಸ್ಪರ್ಶಿಸಿದ ಅನ್ನವನ್ನು ಠಾಕೂರರು ಊಟಮಾಡುತ್ತಿದ್ದರೆ? ಈ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ಹೇಳಿದರು: ''ಅವರು ನರೇನ್‌ನನ್ನು ಎಲ್ಲದರಲ್ಲೂ ಎಳೆಯುತ್ತಿರಲಿಲ್ಲ. ಮತ್ತೆ ಬಾಬುರಾಮ? ಅವನು ಈಶ್ವರಕೋಟಿ. ಅವನದು ಶ್ರೀಮತಿಯ (ಶ್ರೀರಾಧೆಯ) ಭಾವ — ಠಾಕೂರ್ ಹೇಳುತಿದ್ದರು.''

ಅದರ ನಂತರ ನಾನು ಕೆಲವು ಬಾರಿ ಜಯರಾಂಬಾಟಿಗೆ ಹೋಗಬೇಕಾಗಿ ಬಂತು. ಪ್ರತಿಬಾರಿಯೂ ಒಂದು ತಿಂಗಳಿಗಿಂತ ಕಡಿಮೆಯಿಲ್ಲದಂತೆ ಅಲ್ಲಿ ತಂಗಿದ್ದೆ. ಒಂದು ಸಲ ಒಂದೂವರೆ ತಿಂಗಳು ಅಲ್ಲಿದ್ದೆ. ಹೆಚ್ಚಿನ ಸಲವೂ ನಾನೊಬ್ಬನೇ ಹೋಗಿದ್ದೆ. ಒಂದು ಸಲ ನಿತ್ಯಗೋಪಾಲನ ಶಿಷ್ಯ ಹಾಗೂ ನಾದು (ಬ್ರಹ್ಮಚಾರಿ ಹರೇಂದ್ರನಾಥ)[೩] ನನ್ನೊಂದಿಗಿದ್ದರು. ಇನ್ನೊಂದು ಸಲ ಕಾಳೀಕೃಷ್ಣ ಮಹಾರಾಜ್, ಮತ್ತೊಮ್ಮೆ ಡಾಕ್ಟರ್ ಕಂಜೀಲಾಲ್ ಹಾಗೂ

---

೨ ಸ್ವಾಮಿ ಸುಬೋಧಾನಂದರು. *(–ಸಂ)*

೩. ಸ್ವಾಮೀಜಿಯವರ ಅಳಿಯ.

ಮಗದೊಮ್ಮೆ ಶ್ರೀಮಾತೆ, ಗೋಲಾಪ್ ಮಾ ಹಾಗೂ ಕುಸುಮ ಜೊತೆಗಿರುತ್ತಿದ್ದರು. ಜಯರಾಮಬಾಟಿ ತಲುಪುವ ವೇಳೆಗೆ ಕೆಲವೊಮ್ಮೆ ಕೊತುಲ್‌ಪುರ ಮೂಲಕ ಕಾಲುನಡಿಗೆಯಲ್ಲೋ, ಕೆಲವೊಮ್ಮೆ ಕಾಮಾರಪುಕುರದ ಮೂಲಕ ನಡೆಯುತ್ತ ಅಂಗಡಿಯಿಂದ ಸಾಮಾನುಗಳನ್ನು ಕೊಂಡುಕೊಂಡೋ ಹೋಗುತ್ತಿದ್ದೆ. ಕಾಮಾರಪುಕುರದ ಕಪ್ಪು ಬಣ್ಣದ ಮರ ಬಹಳ ಪ್ರಸಿದ್ಧ. ಗುಡುಗುಡಿಯ ಪೈಪು, ಲಟ್ಟಣಿಗೆ, ಹುಂಕಾರ್ ಇತ್ಯಾದಿಗಳನ್ನು ತುಂಬ ಸುಂದರವಾಗಿ ತಯಾರಿಸುತ್ತಿದ್ದರು. ಅಲ್ಲಿಂದ ಸ್ವಲ್ಪದೂರದಲ್ಲೇ ಕೋಟೆ ಕೊತ್ತಳಗಳಿಂದ ಕೂಡಿದ ಮಂದಾರಣ ಗ್ರಾಮವಿತ್ತು.[೪] ಅಲ್ಲಿನ ಸೊಳ್ಳೆಪರದೆ ಹಾಗೂ ಅಡ್ಡಪಂಚೆ ಬಹಳ ಪ್ರಸಿದ್ಧ. ಕಲ್ಕತ್ತೆಯಿಂದ ಬರುವ ಭಕ್ತರಿಗಾಗಿ ಇವೆಲ್ಲವನ್ನೂ ಖರೀದಿಸಿ ತರಬೇಕಾಗಿತ್ತು. ಇವೆಲ್ಲ ಪ್ರಾಸಂಗಿಕ ವಿಷಯ. ಈಗ ನಾವು ನೋಡಬೇಕಾಗಿರುವ ವಿಷಯಕ್ಕೆ ಮತ್ತೆ ಬರೋಣ.

ಕ್ರಿ.ಶ. ೧೯೦೫ನೇ ಇಸವಿಯಲ್ಲಿ ನಡೆದ ಜಗದ್ಧಾತ್ರೀ ಪೂಜೆಗೆ ಕಲ್ಕತ್ತೆಯಿಂದ ಸಾಮಾನುಗಳನ್ನು ಹೊತ್ತುಕೊಂಡು ಹೋದಾಗ, ಶ್ರೀಮಾತೆ ಪೂಜೆಯ ಕೆಲಸಗಳಲ್ಲಿ ಸಂಪೂರ್ಣ ತೊಡಗಿಕೊಂಡಿದ್ದರು. ಏಕೆಂದರೆ, ಹಿಂದಿನ ವರ್ಷ ಅವರು ಕಲ್ಕತ್ತೆಯಲ್ಲಿದ್ದುದರಿಂದ ಪೂಜೆಗೆ ಬಂದಿರಲಿಲ್ಲ. ಈ ಬಾರಿ ಪೂಜೆಯ ಮೊದಲನೆಯ ದಿನ ಸುಮಾರು ಹನ್ನೆರಡು ಗಂಟೆಯವರೆಗೆ ಶ್ರೀಮಾತೆ ಬಿಡುವಿಲ್ಲದೆ ಕೆಲಸ ಮಾಡಿದ್ದರಿಂದ, ಅತ್ಯಂತ ಬಳಲಿದ್ದರು. ಅಲ್ಲಿಯವರೆಗೆ ಅವರು ನೀರನ್ನು ಕೂಡ ಕುಡಿದಿರಲಿಲ್ಲ. ಬಹಳ ಪ್ರಾರ್ಥಿಸಿಕೊಂಡ ನಂತರ ಅವರು ಶ್ರೀಠಾಕೂರರ ಪೂಜೆಗೆ ಕುಳಿತರು. ಸೇವಕನನ್ನು ಅವರು ಬಾಗಿಲಲ್ಲಿ ಕುಳಿತಿರಲು ಹೇಳಿದರು. ಪೂಜೆಯ ನಡುವೆ ಅವರಿಗೆ ತೊಂದರೆಯಾಗದಿರಲಿ ಎಂದು ಹಾಗೆ ಹೇಳಿದ್ದರು. ಅವನು ಕೂಡಲೇ ಅಲ್ಲಿ ಕುಳಿತು, ಶ್ರೀಮಾತೆಗಾಗಿ ಕಲ್ಲುಸಕ್ಕರೆಯ ಪಾನೀಯವನ್ನು ತಯಾರು ಮಾಡಿದ.

ಪೂಜೆಯ ನಂತರ ಕಲ್ಲುಸಕ್ಕರೆಯ ಪಾನೀಯವನ್ನು ಕುಡಿಯುತ್ತ ಶ್ರೀಮಾತೆ, ''ಇನ್ನು ನಾನು ಅಲ್ಲಿಗೆ (ಪೂಜಾಮಂಟಪಕ್ಕೆ) ಹೋಗಲಾರೆ. ಅವರಾಗಿ ಕರೆಯದಿದ್ದರೆ ಹೋಗಲ್ಲ. ಇಲ್ಲೇ ತುಸು ಕುಳಿತುಕೊಳ್ಳುತ್ತೇನೆ'' ಎಂದರು. ಆಗ ಸೇವಕ[೫] ಹೇಳಿದ, ''ಠಾಕೂರ್ ಹಾಗೂ ನೀವು ಮತ್ತೆ ಬರಬೇಕಲ್ಲ ; ಆಗ ಬಾವುಲ್ ಆಗಿ ಬರುತ್ತೀರಿ.'' ತಾಂಬೂಲ ಹಾಕಿಕೊಳ್ಳುತ್ತಿದ್ದ ಶ್ರೀಮಾತೆ ಹೇಳಿದರು, ''ನಿಮಗಾರಿಗೂ ಬಿಡುಗಡೆಯಿಲ್ಲ. ಯಾರು ಈ ಬಾರಿ ಬಂದಿದ್ದೀರೋ, ಪ್ರತಿಯೊಬ್ಬರೂ ಮತ್ತೆ ಬರಲೇಬೇಕು – ಯಾರನ್ನೂ ಬಿಡಲಾಗದು. ಆಕಾಶದಲ್ಲಿ ಚಂದ್ರನನ್ನು ನೋಡಿದ್ದೀಯಲ್ಲಾ? ಚಂದ್ರ ಒಬ್ಬನೇ ಮೇಲೆದ್ದು ಬರುತ್ತಾನೇನು? ನಾಲ್ಕೂ ಕಡೆ ನಕ್ಷತ್ರಗಳನ್ನೆಲ್ಲ ಕರೆದುಕೊಂಡು ಬಂದು, ಅನಂತರ ಅವನು ಬರುತ್ತಾನೆ.'' ಅದಕ್ಕೆ ಸೇವಕ ಹೇಳಿದ, ''ನಾವು ಅದಕ್ಕೆ ತಯಾರು, ನಿಮ್ಮನ್ನಂತೂ ಪಡೆಯುತ್ತೇವಲ್ಲ.''

ಈ ಘಟನೆಯನ್ನು ಬರೆಯುತ್ತಿದ್ದಂತೆ ಇನ್ನೂ ಎರಡು ಘಟನೆಗಳು ನೆನಪಾಗುತ್ತಿವೆ. ಅದನ್ನಿಲ್ಲಿ ಹೇಳಿದರೆ ರಸಭಂಗವಾಗದು. ಮೊದಲನೆಯದು, ಠಾಕೂರರು ಕುಳಿತುಕೊಂಡಿರುವ ಭಾವಚಿತ್ರವನ್ನು ತೆಗೆದಾಗ ಅದರ ನೆಗೆಟಿವ್‌ನಿಂದ ಮೊದಲ ಸಲ ಹನ್ನೆರಡು ಪ್ರತಿಗಳನ್ನು ಮುದ್ರಿಸಲಾಗಿತ್ತು ಎಂದು ನಾನು ಕೇಳಿದ್ದೆ. ಆ ಹನ್ನೆರಡು ಪ್ರತಿಗಳ ಮಾಹಿತಿ ನನಗೆ ತಿಳಿಯದು. ಆದರೆ ನನಗೆ ತಿಳಿದಿರುವ ಮೂರು ಪ್ರತಿಗಳ ವಿವರವನ್ನಿಲ್ಲಿ ನೀಡುತ್ತೇನೆ. ಒಂದು, ಯೋಗಿನ್ ಮಾ ನಿತ್ಯ ಪೂಜೆ ಮಾಡುತ್ತಿದ್ದಳು. ಆ ಪ್ರತಿ ನಾನು ಈ ವಿಷಯವನ್ನು ಹೇಳುವಾಗ ತುಂಬಾ ಅಸ್ಪಷ್ಟವಾಗಿ ಹೋಗಿತ್ತು. ಎರಡನೆಯದು, ಬೇಲೂರು ಮಠದಲ್ಲಿ ಪೂಜೆ ಮಾಡುತ್ತಿದ್ದಾರೆ. ಅದೂ ಹೇಗೋ ತುಸು ಅಸ್ಪಷ್ಟವಾಗಿತ್ತು. ಮೂರನೆಯದು, ಶ್ರೀಮಾತೆಯವರು ಪೂಜೆ ಮಾಡುತ್ತಿದ್ದ ಭಾವಚಿತ್ರ. ಅದು ಅಸ್ಪಷ್ಟವಾಗುವುದಿರಲಿ, ಅದನ್ನು ನೋಡುವಾಗ ಈಗ ತಾನೆ ತೆಗೆದಂತಿತ್ತು. ನಾನು ಈ ವಿಷಯ ಹೇಳುತ್ತಿರುವುದು ಕ್ರಿ.ಶ. ೧೯೧೧ರಲ್ಲಿ.

ಎರಡನೇ ಸಂಗತಿಯೆಂದರೆ ಶ್ರೀಮಾತೆಯವರ ಒಂದು ವಿಶೇಷತೆಯನ್ನು ನಾವು ಗಮನಿಸಿದೆವು. ಕಲ್ಕತ್ತೆಯಿಂದ ಹೊರಡುವ ದಿನದಂದು ಅವರು ಠಾಕೂರರ ಪೂಜೆ ಮುಗಿಸಿ, ಠಾಕೂರರನ್ನು ಕುರಿತು ಹೇಳುತ್ತಿದ್ದರು, ''ನಿಮಗೆ ಕಲ್ಕತ್ತಾದ ಸಂದೇಶ, ರಸಗುಲ್ಲಾ ತುಂಬ ಹಿಡಿಸುತ್ತದೆ ಅಂತೆ ಕಾಣುತ್ತದಲ್ಲ? ಜಯರಾಮಬಾಟಿಯ ಬಡೋಪುಕುರದ ನೀರು, ಹಾಗೂ ತುಳಸಿ ನಿಮಗೆ ರುಚಿಸುತ್ತಿಲ್ಲ, ಅಲ್ಲವೆ?'' ಎಂದು. ಆಗಲೇ ನಾವು ತಿಳಿದುಕೊಳ್ಳಬೇಕು, ಶ್ರೀಮಾತೆ ಊರಿಗೆ (ಅಂದರೆ ಜಯರಾಮಬಾಟಿಗೆ) ಹೊರಡಲು ಸಿದ್ಧರಾಗುತ್ತಿದ್ದಾರೆ ಅಂತ. ಭಕ್ತರುಗಳು ಎಷ್ಟು ಅನುನಯ, ವಿನಯಗಳಿಂದ ಪ್ರಾರ್ಥಿಸಿಕೊಂಡರೂ ಅವರು ಕೇಳುತ್ತಿರಲಿಲ್ಲ.

(ಮುಂದುವರಿಯುವುದು)

ಶಕ್ತಿ – ಜಗನ್ಮಾತೆ

ಅವಳೇ ಸರ್ವಸೃಷ್ಟಿಯಲ್ಲಿರುವ ಶಕ್ತಿ. ಪ್ರತಿಯೊಂದು ಕಾರಣವೂ ಕಾರ್ಯವಾಗುವಂತೆ ಮಾಡುವವಳು ಅವಳೇ. ಅವಳ ಇಚ್ಛೆಯೇ ಏಕಮಾತ್ರ ನಿಯಮ. ಅವಳೆಂದಿಗೂ ತಪ್ಪು ಮಾಡುವುದಿಲ್ಲ. ಅವಳ ಇಚ್ಛೆಯೇ ಪ್ರಕೃತಿ ನಿಯಮ. ಅದನ್ನು ಯಾರೂ ಬದಲಾಯಿಸಲಾರರು. ಅವಳೇ ಕರ್ಮನಿಯಮದ ಪ್ರಾಣ. ಪ್ರತಿಯೊಂದು ಕರ್ಮಕ್ಕೂ ಫಲವನ್ನು ಕೊಡುವವಳು ಅವಳೇ. ಅವಳ ನೇತೃತ್ವದಲ್ಲಿ ನಾವು ನಮ್ಮ ಕರ್ಮದ ಮೂಲಕ ಜೀವನವನ್ನು ರೂಢಿಸಿಕೊಳ್ಳುತ್ತಿರುವೆವು.

– ಸ್ವಾಮಿ ವಿವೇಕಾನಂದ

---

೪ ಸಾಹಿತ್ಯ ಸಾಮ್ರಾಟ್ ಬಂಕಿಮಚಂದ್ರರ 'ದುರ್ಗೇಶ ನಂದಿನಿ'ಯ ಕಥೆ ನಡೆಯುವುದು ಗಢ ಮಂದಾರಣದಲ್ಲಿ. ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಕಾಟಾಲಿ ಎಂಬ ಗ್ರಾಮದ ಶಿವಮಂದಿರದಲ್ಲೇ ದುರ್ಗೇಶ ನಂದಿನಿ ಹಾಗೂ ಜಗತ್ ಸಿಂಹ ಇವರಿಬ್ಬರ ಮೊದಲ ಭೇಟಿ ನಡೆಯುವುದು.

೫ ಸ್ವತಃ ಲೇಖಕರು. *(–ಸಂ)*

ಜಾನಪದ ತ್ರಿಪದಿಗಳಲ್ಲಿ ಬಸವಣ್ಣನ ವಿಚಾರಗಳು

ಡಾ. ರಾಜಶೇಖರ ಜಮದಂಡಿ

ಸಂತನೊಬ್ಬನನ್ನು ಜನಪದರು ಹೇಗೆ ಕಾಣುತ್ತಾರೆ? ಅದರಲ್ಲೂ ಸಾಮಾಜಿಕ ಬದಲಾವಣೆಯ ಹರಿಕಾರನೆಂದೇ ಪರಿಗಣಿಸಲ್ಪಟ್ಟ ಬಸವಣ್ಣನವರ ಜೀವನ, ತತ್ತ್ವ, ವಿಚಾರಗಳನ್ನು ಜನಸಾಮಾನ್ಯರು ಹೇಗೆ ಪರಿಭಾವಿಸುತ್ತಾರೆ? ತುಂಬ ಕುತೂಹಲಕಾರಿಯಾದ ಅಂಶವನ್ನು ಕುರಿತು ಇಲ್ಲಿ ಚರ್ಚಿಸಿರುವ ಲೇಖಕರು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕೊಪ್ಪಳ ಸ್ನಾತಕೋತ್ತರ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರು.



ಜನಪದಕ್ಕೆ ಸಂಬಂಧಿಸಿದ್ದು ಜಾನಪದ. ಜಾನಪದ ಸಾಹಿತ್ಯ ಮಾನವನ ಹುಟ್ಟಿನೊಂದಿಗೆ ಆರಂಭವಾಗಿ ಆತನಲ್ಲಿ ಅವಿನಾಭಾವ ಸಂಬಂಧ ಪಡೆದುಕೊಂಡಿದೆ. ಜಾನಪದ ಎಂಬುದು ಮಾತು, ಕ್ರಿಯೆ, ಅಕ್ಷರಗಳಿಂದ ಅಭಿವ್ಯಕ್ತವಾಗುತ್ತಾ ಬಂದಿದೆ. ಪ್ರಾಚೀನ ಕಾಲದ ಸಂಸ್ಕೃತಿಯ ಅಮೂಲ್ಯವಾದ ಅಂಶಗಳನ್ನು ಅರ್ಥಪೂರ್ಣವಾಗಿ ಗರ್ಭೀಕರಿಸಿಕೊಂಡಿರುವಂಥದ್ದೇ ಜಾನಪದ. ಅಂದರೆ ಮೂಲ ಸಾಂಸ್ಕೃತಿಕ ಪಳೆಯುಳಿಕೆಗಳನ್ನು ಜೀವಂತಿಕೆಯಾಗಿರಿಸಿಕೊಂಡು, ಅದರೊಳಗೆ ಧಾರ್ಮಿಕ, ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವವನ್ನು ಅಡಗಿಸಿಕೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಜಾನಪದಕ್ಕೆ ವಿಶಿಷ್ಟವಾದ ಮತ್ತು ಮೌಲಿಕವಾದ ಮಹತ್ವವಿದೆ. ಪ್ರಾದೇಶಿಕ ಭಿನ್ನತೆಯಿಂದ ಆಯಾ ದೇಶೀಯ ಭಾಷೆಯಲ್ಲಿ ಜನಪದವು ವಾಸ್ತವಿಕತೆಗೆ ತಕ್ಕಂತೆ ರಚನೆಗೊಂಡಿರುವಂಥದ್ದು ಕಾಣಬರುತ್ತದೆ. ಸಾಮಾನ್ಯವಾಗಿ ಜಾನಪದ ಎಂದಾಕ್ಷಣ ಅದರಲ್ಲಿರುವ ಬೇರೆ ಬೇರೆ ರೀತಿಯ ಹಾಡು, ಕಥೆ, ಗಾದೆ, ಒಗಟು, ಒಡಪು, ಕಲೆ, ಆಟ ಇತ್ಯಾದಿಗಳು ನಮ್ಮ ನೆನಪಿಗೆ ಬರುತ್ತವೆ.

ಜಾನಪದವು ನಿಂತ ನೀರಾಗದೆ ಸದಾ ಹರಿಯುವ ಜೀವನದಿಯಾಗಿದೆ. ನಿಸ್ವಾರ್ಥ ಮೂಲವಾಗಿ, ಸಂಚಲನೆ ಮತ್ತು ಪರಿವರ್ತನೆಯಲ್ಲಿ ಕೊಳ್ಳುಕೊಡೆಯಾಗಿದೆ. ಶಿಷ್ಟಪದ ವಿಜೃಂಭಿಸಿದಾಗಲೆಲ್ಲಾ ಜನಪದವು ಹಿಂದೆ ಸರಿಯದೆ, ತನ್ನ ಅಸ್ತಿತ್ವವನ್ನು ಉಳಿಸಿ-ಬೆಳೆಸಿಕೊಳ್ಳುತ್ತಾ ಸಾಗಿದೆ. ಎಂತಹ ನಾಗರಿಕತೆಯ ಸಂದರ್ಭದಲ್ಲೂ ಇದನ್ನು ಪರೋಕ್ಷವಾಗಿ ಗುರುತಿಸಿಕೊಳ್ಳುವ ಮನೋಭಾವ ಕಾಣಬರುತ್ತದೆ. ಇದನ್ನು ನಾವು ಅಂತರಂಗದಿಂದ ಸೂಕ್ಷ್ಮವಾಗಿ ಅರಿಯಬಹುದು. ಇಂತಹ ಜಾನಪದ ಸಾಹಿತ್ಯದ ಅಧ್ಯಯನ ಮತ್ತು ಚರ್ಚೆಯಲ್ಲಿ ತೊಡಗಿದರೆ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುವುದಲ್ಲದೆ, ಇದರಿಂದ ಮನಸ್ಸಿಗೆ ಒಂದಿಷ್ಟು ಸಂತೋಷ - ಸಂಭ್ರಮಗಳುಂಟಾಗುತ್ತವೆ.

ಬಸವೇಶ್ವರರು ಶಿಷ್ಟ ಕಾವ್ಯಗಳಿಗೆ ವಸ್ತುವಾದಂತೆ ಜನಪದ ಕವಿ, ಕವಯತ್ರಿಯರ ತ್ರಿಪದಿಗಳಿಗೂ ಗ್ರಾಸವಾಗಿದ್ದಾರೆ. ಅದೇ ರೀತಿ ಜನಪದರು ತಮ್ಮ ದುಡಿತದಲ್ಲಾಗಲಿ, ವಿಶ್ರಾಂತಿ ಸಂದರ್ಭದಲ್ಲಾಗಲಿ ಅಥವಾ ಸಾಮೂಹಿಕವಾದ ಚರ್ಚೆಯಲ್ಲಿ ತೊಡಗಿದಾಗ ತಮಗೆ ಹೊಳೆದ ವಿಷಯಗಳನ್ನು ಕುರಿತು ಮಾತಾನಾಡುವುದು ಸಹಜ. ಬಸವಣ್ಣನವರ ಆಚಾರ-ವಿಚಾರಗಳನ್ನು ಜನಪದರು ತಮ್ಮ ತ್ರಿಪದಿಗಳಲ್ಲಿ ಈ ಕೆಳಗಿನಂತೆ ಕಟ್ಟಿಕೊಟ್ಟಿದ್ದಾರೆ.

* * *

ಬಸವಣ್ಣನವರಲ್ಲಿದ್ದ ಭಕ್ತಿ ಊರ್ಧ್ವಮುಖವಾಗಿದ್ದರೂ 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ವಿನೀತ ಭಾವ ಹೊಂದಿದವರು. ನುಡಿದಂತೆ ನಡೆದು ತೋರಿದ, ಮಾನವ ಜನಾಂಗಕ್ಕೆ ಪ್ರಿಯನಾದ ಬಸವೇಶ್ವರನನ್ನು ಕುರಿತು ಜನಪದರು ಎದೆಯೊಳಗೆ ಹೀಗೆ ಮಾರ್ಮಿಕವಾಗಿ ನುಡಿಯುತ್ತಾರೆ:

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ । ಶಿವಮತಕೆ ।
ಬಸವ ಓಂಕಾರ ಶಿವನಾಮ ।

ಬಸವಣ್ಣನವರನ್ನು ನಿತ್ಯ ನೆನೆವುದೇ ಒಂದು ಆನಂದ. ಅವರು ಮಹಾಮೇಧಾವಿಗಳು, ಮಾನವತಾವಾದಿಗಳು, ತ್ರಿಕಾಲಜ್ಞಾನಿ, ಜಗಜ್ಯೋತಿ ಸ್ವರೂಪರಾಗಿದ್ದು, ಆಚಾರ-ವಿಚಾರಗಳಲ್ಲಿ ವಿನಯ ಸಂಪನ್ನರಾಗಿದ್ದರು. ಮುಂದಿನ ದಿನಗಳಲ್ಲಿ ಭಾರತದ ಪರಿಸ್ಥಿತಿ ಹೇಗಿರುತ್ತದೆಂದು ಬಲ್ಲವರಾಗಿದ್ದರೆಂಬುದಕ್ಕೆ ಅವರ ವಚನಗಳೇ ಸಾಕ್ಷಿ. ದೀನದಲಿತರನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಸಂತೋಷ. 'ತುಂಬಿದುದು ತುಳುಕದು ನೋಡಾ, ನಂಬಿದುದು ಸಂದೇಹಿಸದು ನೋಡಾ, ಒಲಿದುದು ಓಸರಿಸದು ನೋಡಾ, ನೆರೆಯರಿದುದು ಮರೆಯದು ನೋಡಾ ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯಾ' ಎಂದು ಅಕ್ಕಮಹಾದೇವಿ ಹೇಳಿದಂತೆ ಅಧಿಕಾರ, ಮಹಾಮನೆ, ಸಂಪತ್ತು ಎಲ್ಲವನ್ನೂ ಹೊಂದಿದ್ದ ಬಸವಣ್ಣನವರಲ್ಲಿ ಎಳ್ಳಷ್ಟೂ ಅವುಗಳ ಗತ್ತುಗಳಿರಲಿಲ್ಲ. ಅವರ ಭಾವನೆಯಲ್ಲಿ 'ಮೃದು ವಚನಗಳು ಸಕಲ ಜಪತಪವಷ್ಟೇ ಮೀಸಲಲ್ಲ, ಸದಾಶಿವನೊಲುಮೆಗೆ ಸಾಕ್ಷಿಯೆಂಬುದು' ಗೊತ್ತಿತ್ತು. ಸದಾ ಸಮಾಜಸೇವೆಯ ಚಿಂತನ-ಮಂಥನದಲ್ಲಿ ಬದುಕನ್ನು ಕಟ್ಟಿಕೊಂಡಿದ್ದರು. ಜನಪದರೂ ತಮ್ಮ ಜೀವನದುದ್ದಕ್ಕೂ ಬಸವಣ್ಣನವರಂತೆ ಪ್ರೀತಿ, ವಿಶ್ವಾಸ, ಸರಳತೆ, ತ್ಯಾಗ, ದಯಾಗುಣಗಳನ್ನು ರೂಢಿಸಿಕೊಂಡು ಬಂದಿದ್ದಾರೆ.

ಅಂದಿನ ಕಾಲದಲ್ಲಿ ಕಸುಬುಗಳನ್ನಾಧರಿಸಿದ ಜಾತೀಯತೆ ಅಪಾಯಕಾರಿಯಾಗಿತ್ತು. ಸಾಮಾಜಿಕ ಸ್ಥಾನಮಾನಗಳ ದೃಷ್ಟಿಯಲ್ಲಿ ಕಸುಬಿನಿಂದ ಕಸುಬಿಗೆ ಅಸಾಧಾರಣವಾದ ಅಂತರವಿತ್ತು. ಬೆವರು ಸುರಿಸುವವ ಶೂದ್ರನೆಂದು, ಬೆವರು ಸುರಿಸದವ ಪುರೋಹಿತನೆಂಬ ವೃತ್ತಿಬಂಧ ಮತ್ತು ಅಸಮಾನತೆ ಮನೆಮಾಡಿತ್ತು. ಉತ್ಪತ್ತಿಯ ದೃಷ್ಟಿಯಿಂದ ಶ್ರಮವಿಭಜನೆ ಅನಿವಾರ್ಯವಾದರೂ ಸಹಭೋಜನ, ಸಹಜೀವನ, ಸಹವಾಸ, ಸಮಾಗಮಗಳಿಗೆ ಅವಕಾಶವಿರದ ಕಸಬುಗಳ ವಿಭಜನೆಯನ್ನು ಜನಪದರು ಖಂಡಿಸಿದರು. ಜ್ಞಾನದ ಬೆಳಕಿನಲ್ಲಿ ಭಕ್ತಿಪೂರ್ವಕವಾಗಿ ಏಕಾಗ್ರತೆಯಿಂದ ಮಾಡುವ ಕ್ರಿಯೆಗಳೇ ನಿಜವಾದ ಕಾಯಕ. ವೈಯಕ್ತಿಕತೆಗಿಂತ ಸಮಾಜವನ್ನು ಸುಸ್ಥಿತಿಯಲ್ಲಿಡುವುದೇ ಬದುಕಿನ ಮೂಲಮಂತ್ರ ಎಂಬ ಧೋರಣೆ ಜನಪದರಲ್ಲಿ ಕಾಣುತ್ತೇವೆ.

ಕಾಯಕವೇ ಶಿವಭಕ್ತಿ ಕಾಯಕವೇ ಶಿವಭಜನೆ
ಕಾಯಕವೆ ಲಿಂಗ ಶಿವಪೂಜೆ । ಶಿವಯೋಗ ।
ಕಾಯಕವೇ ಕಾಯ್ದು ಕೈಲಾಸ ॥

ಬಸವಣ್ಣನವರಲ್ಲಿದ್ದ ಕಾಯಕದ ಪರಿಕಲ್ಪನೆ ಅನನ್ಯವಾದುದು. ಕಾಯಕ ಮಾಡದ ವ್ಯಕ್ತಿ ಸಮಾಜಕ್ಕೆ ಹೊರೆ ಮತ್ತು ಅಧ್ಯಾತ್ಮ ಸಾಧನೆಗೆ ಅನರ್ಹನೆಂಬುದಾಗಿತ್ತು. ಗಳಿಕೆಗೆ ಬೇಕಾದ ಕಾಯಕದಂತೆ ಸದ್ಬಳಕೆಗೆ ನೆರವಾದುದು ದಾಸೋಹ. ಯಾವ ವ್ಯಕ್ತಿಯೇ ಆಗಲಿ ತನ್ನ ವೈಯಕ್ತಿಕ ಆಶೋತ್ತರಗಳ ಪೂರೈಕೆಯೊಂದಿಗೆ ಸಮಾಜಕ್ಕೆ ಸಲ್ಲಿಸಬೇಕಾದ ಕರ್ತವ್ಯವನ್ನು ಕಾಯಕದ ಮೂಲಕ ರೂಪಿಸಿಕೊಳ್ಳುವುದಾಗಿದೆ. ಸಮಾಜದಲ್ಲಿ ಆರ್ಥಿಕ ಸಮಾನತೆಗೆ ಮತ್ತು ಮನುಷ್ಯನ ಅಹಂಕಾರ ನಿರಶನಕ್ಕೆ ಬಸವಣ್ಣನವರು ರೂಪಿಸಿದ್ದ ಕಾಯಕ-ದಾಸೋಹದ ತತ್ವಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ವ್ಯಕ್ತಿ ಸಮಾಜಗಳ ನಡುವಣ ಸಂಬಂಧ ಗಟ್ಟಿತನಕ್ಕಾಗಿ ಕಾಯಕ-ದಾಸೋಹಗಳು ಪೂರಕವಾಗಿವೆ. ಕಾಯಕದಲ್ಲಿ ಭಿನ್ನ-ಭೇದಗಳಿಲ್ಲದೆ ಸಕಲರೂ ದುಡಿಯಬೇಕು.

ಹೀಗೆ ಕಾಯಕದಲ್ಲಿ ತಾರತಮ್ಯಗಳನ್ನು ತೊಡೆದು ಹಾಕುವ ಜವಾಬ್ದಾರಿ ಬಸವಾದಿ ಪ್ರಮಥರಲ್ಲಿತ್ತು. ಕೆಲವೊಮ್ಮೆ ಲಿಂಗಧಾರಿಯಾದ ಶರಣನೊಬ್ಬ ಬಸವಣ್ಣನ ಮನೆಗೆ ಬಂದಾಗ, 'ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ ತಲೆದಂಡ ತಲೆದಂಡ' ಅಂದರೆ ಅವರವರ ಕಾಯಕ ಅವರವರಿಗೆ ಶ್ರೇಷ್ಠ. ಅದನ್ನು ಪ್ರಶ್ನಿಸಿ ಆ ಮೂಲಕ ಜಾತಿ ಲೆಕ್ಕಾಚಾರ ಹಾಕುವುದು ತಪ್ಪೆಂಬುದು ಬಸವಣ್ಣ ನವರ ಅಭಿಪ್ರಾಯ. ಇವರ ಕಾಯಕ-ದಾಸೋಹದ ಮಂತ್ರ ಅಂದು ಇಡೀ ದೇಶದ ತುಂಬಾ ಎಷ್ಟೆಲ್ಲಾ ಮೊಳಗಿತ್ತೆಂಬುದಕ್ಕೆ ಕಾಶ್ಮೀರದ ದಂಪತಿಗಳು ಕಲ್ಯಾಣಕ್ಕೆ ಬಂದಿರುವುದನ್ನು ನೆನಪಿಸಿಕೊಳ್ಳಬಹುದು.

ಅದೇ ರೀತಿ ಯಾಗ, ಯಜ್ಞ, ಯೋಗಗಳನ್ನರಿಯದ ಜನಪದರಿಗೆ ದೇಹಶ್ರಮವೊಂದೇ ಗೊತ್ತು. ತಮ್ಮ ಪಾಲಿಗೆ ಬಂದ ಕಾಯಕಕ್ಕೆ ಶರಣು ಅರ್ಪಿಸಿಕೊಂಡವರು. ಜನಪದರು ಇಂತಹ ಹಿನ್ನೆಲೆಯಲ್ಲಿ ತಮ್ಮ ದುಡಿತದಿಂದ ಬಂದ ಪಾಲನ್ನು ಹಂಚಿ ತಿನ್ನುವ ಸಂಭ್ರಮ ಕಂಡುಕೊಂಡವರು. ಬದುಕಿನುದ್ದಕ್ಕೂ ಮಹಾದಾನಿಯಾಗಿ 'ಭಗವಂತ ಕೊಟ್ಟಾಗ ಮನುಷ್ಯರೂಪದ ಅವನಿಗೆ ಮತ್ತೆ ನೀಡಿ ಧನ್ಯತೆ ಅನುಭವಿಸುವುದಷ್ಟೇ ನಮ್ಮ ಕರ್ತವ್ಯ' ಎಂಬುದು ಮನದಾಳದ ಮಾತು. ಕಾಯಕದಲ್ಲಿಯೇ ಶಿವಪೂಜೆ, ಶಿವಭಜನೆ, ಶಿವತತ್ವಾಚರಣೆ ಕಂಡುಕೊಂಡ ಜನಪದರು,

ಕಡೆಯ ಬಲಕಿನ ತಾಳ ಎಡೆಯಾಯ್ತು ಅರಸನಿಗೆ
ಎಡಗಡೆಯ ತಾಳ ಪಶುಪಕ್ಷಿಗೆ । ಜೀವನಕೆ ।
ನಡುವಿನ ತಾಳ ರೈತನಿಗೆ ॥

ಪ್ರಕೃತಿ ಪ್ರತಿ ಜೀವಿಗೂ ಮಳೆ, ಗಾಳಿ, ಆಹಾರ, ಬೆಳಕು ಕೊಡುತ್ತಲೇ ಇದೆ. ಪ್ರಕೃತಿಯ ಮಡಿಲಲ್ಲಿರುವ ಜನಪದರು ತಾವೂ ಬೆಳೆದ ದವಸ-ಧಾನ್ಯಗಳನ್ನು ರಾಶಿ ಮಾಡಿದ ಸಂದರ್ಭದಲ್ಲಿ ಸಂತೋಷದಿಂದ ಮೇಲಿನಂತೆ ಹಂಚುವುದುಂಟು. ತಾವು ತಮ್ಮ ಹೊಲದಲ್ಲಿ ನಿಷ್ಠೆಯಿಂದ ಬೆವರು ಸುರಿಸಿ ಬೆಳೆದ ದವಸ-ಧಾನ್ಯಗಳನ್ನು ರಾಶಿ ಮಾಡಿ, ಅದರಲ್ಲಿ ಮೂರು ಭಾಗಗಳನ್ನು ಮಾಡುವರು. ಒಂದನೆಯದು ಅರಸನಿಗೆ ಕಂದಾಯ ರೂಪ

ದಲ್ಲಿ, ಎರಡನೆಯದು ವರ್ಷದುದ್ದಕ್ಕೂ ಪಶುಪಕ್ಷಿಗಳಿಗೆ, ಮೂರನೆಯದು ತನ್ನ ಸಂಸಾರಕ್ಕೆ ಮೀಸಲಾಗಿರಿಸಿಕೊಂಡವರು.

ಹೀಗೆ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಮತ್ತೆ ವರವ ಬೇಡುತ್ತಾ 'ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ ಎನ್ನುವ' ತನ್ನಂತೆ ಪರರನ್ನು ಕಾಣುವ ವಿಶಾಲ ಮನೋಭಾವದವರು. ತಮಗೆ ದಕ್ಕಿದ್ದ ವಸ್ತು ವಿಷಯವನ್ನು ನಾಲ್ಕು ಜನರಲ್ಲಿ ಹಂಚಿಕೊಂಡು ಖುಷಿಪಡುವ ಮನೋವೃತ್ತಿ ಮೆಚ್ಚುವಂಥದ್ದು. ಬಸವಣ್ಣನವರು ಹೇಳಿದಂತೆ 'ಆಡಿದಡೇನು, ಹಾಡಿದಡೇನು, ಓದಿದಡೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ?' 'ತನುವಿನಲ್ಲಿ ಸೇವೆ, ಮನದಲ್ಲಿ ನೆನಹು, ಧನದಲ್ಲಿ ತ್ಯಾಗ'ದ ಗುಣಗಳನ್ನು ಅಳವಡಿಸಿಕೊಳ್ಳುವುದೇ ದಾಸೋಹದ ರಹಸ್ಯವಾಗಿದೆ. ದಾಸೋಹವೆಂಬುದು ಕೇವಲ ಮನೆಗೆ ಬಂದವರಿಗೆ ನೀಡುವಂಥದ್ದಲ್ಲ. ಹಸಿದವರನ್ನು, ನಿರ್ಗತಿಕರನ್ನು ಹುಡುಕಿಕೊಂಡು ಸ್ವತಃ ಅವರ ಮನೆಗೆ ಹೋಗಿ ದಾಸೋಹ ಸೇವೆ ಮಾಡುವುದು ಬಸವಣ್ಣನವರ ಅಪೇಕ್ಷೆಯಾಗಿತ್ತು.

ಹರಿವ ನೀರು, ಬೀಸುವ ಗಾಳಿ, ಉರಿವ ಸೂರ್ಯ, ಹೊತ್ತಿರುವ ಭೂಮಿ, ಮಿನುಗುವ ನಕ್ಷತ್ರ ಮುಂತಾದವುಗಳೆಲ್ಲ ಎಂದಾದರೂ ಬೇಸರಿಸಿಕೊಂಡಿವೆಯೆ? ಆದ್ದರಿಂದ ಗಾಳಿ, ನೀರು, ಆಹಾರವನ್ನು ಸಮಯಕ್ಕೆ ಸರಿಯಾಗಿ ಸವಿಯುವ ನಾವು ಕಾಯಕ ಮಾಡುವುದಕ್ಕೆ ಬೇಸರಪಟ್ಟುಕೊಳ್ಳುವುದೇಕೆ? ಎಂಬ ಪ್ರಶ್ನೆ ಜನಪದರದ್ದಾಗಿದೆ. ಶ್ರಮದಲ್ಲಿ ಸಿರಿಯನ್ನು, ಕಾಯಕದಲ್ಲಿ ಕೈಲಾಸವನ್ನು, ಗಳಿಕೆಯಲ್ಲಿ ದಾನವನ್ನು ಕಂಡುಕೊಳ್ಳುವ ಸಂಸ್ಕೃತಿಯನ್ನು ಜನಪದರಲ್ಲಿ ಕಾಣುತ್ತೇವೆ.

ಕಾಯಕವ ಕಲಿಸುದಕ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ । ಸಾರುದಕೆ ।
ರಾಯ ಜೀವನದ ಹೊಸ ನುಡಿಗೆ ।

ಸತ್ಯಶುದ್ಧ ಭಾವದಿಂದ ಮಾಡುವ ಉದ್ಯೋಗಕ್ಕೆ ಅಥವಾ ತನುಮನ ಬಳಲಿಸುವ ದುಡಿಮೆಗೆ ಮಹೋನ್ನತ ಕರ್ಮತತ್ತ್ವ ಪದವಿ ನೀಡಿದವರು. ದುಡಿಮೆಗೆ ಹೊಸ ಭಾಷ್ಯ ಬರೆದು ಕೈಲಾಸದ ಭಾವನೆಯನ್ನು ತಂದವರು ಮಹಾಶರಣರು. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಭಕ್ತಿ ದಾಸೋಹ, ಯುಕ್ತ ದಾಸೋಹ ಮತ್ತು ಐಕ್ಯ ದಾಸೋಹ ಹೀಗೆ ಮೂರು ರೀತಿಯ ದಾಸೋಹದ ಬಗೆಗೆ ಹೇಳಿದ್ದಾರೆ. ನಿಸ್ವಾರ್ಥದಿಂದ ಅರ್ಪಿಸಿಕೊಳ್ಳುವ ಮನೋಭಾವವುಳ್ಳ ಜನಪದರು ಸಹ ಯಾವ 'ಬೇಕು'ಗಳಿಗೆ ಆಸೆಪಡುವಂತವರಲ್ಲ. ಆದರೆ ದಾಸೋಹದ ವಿಚಾರದಲ್ಲಿ ಅನ್ಯಮನಸ್ಕರಾಗದೆ ಶುದ್ಧ ಮನಸ್ಥಿತಿಯಿಂದ ಅರ್ಪಿಸುವಲ್ಲಿ ಅದನ್ನು ಬಹಿರಂಗಪಡಿಸುವ ಮಾತೇ ಇಲ್ಲ. ಕೇವಲ ಕೀರ್ತಿ-ಪ್ರತಿಷ್ಠೆಗಾಗಿ ಅಥವಾ ಇತರರು ಹೊಗಳಲೆಂದು ಮಾಡುವ ದಾಸೋಹ ಅವರಿಗೆ ಬೇಕಿಲ್ಲ. ತಾವೇ ಮನಃಪೂರ್ವಕವಾಗಿ ಅಪ್ಪಿಒಪ್ಪಿಕೊಂಡ ಬಸವಣ್ಣನವರ ದಾಸೋಹದ ವಿಚಾರವನ್ನು ಅತ್ಯಂತ ಹೃದಯತುಂಬಿ ಹಾಡುತ್ತಾ:

ದಾಸೋಹಿ ಬಸವಣ್ಣ ದಾಸೋಹ ಕಲಿಸಿದವನು
ದೇಶ ದೇಶೆಲ್ಲ ಕೇಳುತ । ಹೊಸಮಾತ ।
ಮಾಸಿದವು ವೇದ ಹುಸಿಯೆಂದು ॥

ಇದ್ದವರು ಇಲ್ಲದವರಿಗೆ ದಾಸೋಹ (ದಾನವನ್ನು) ನೀಡುವಲ್ಲಿ ಅನುಕಂಪವಿರುತ್ತದೆ. 'ನೀಡುವವ ಭಕ್ತ ನೀಡಿಸಿಕೊಳ್ಳುವವ ಭಗವಂತ' ಎಂಬ ಉನ್ನತ ಭಾವ ಇದರಲ್ಲಿದೆ. ಸಮಾಜ ವಿಜ್ಞಾನಿಯಾದ ಬಸವಣ್ಣನವರು 'ನೆಲನನಗೆದು ಮಡುಗದಿರಾ ನೆಲನುಂಗಿದಡುಗುಳುವುದೆ? ಧನವಿರಿಸಿದಿರಾ, ಧನವನಿರಿಸಿದರೆ ಭವಬಪ್ಪುದು-ತಪ್ಪದು, ಕೂಡಲಸಂಗನ ಶರಣರಿಗೆ ಒಡನೆ ಸವೆಸು' ಎಂದು ಎಚ್ಚರಿಸಿದವರು. ಅಂದರೆ ಸಂಗ್ರಹವೆಂಬುದು ಅನಾಚಾರಕ್ಕೆಳಸಿದರೆ ದಾಸೋಹವೆಂಬುದು ಸದಾಚಾರಿಯನ್ನಾಗಿಸುತ್ತದೆ. ದಾಸೋಹ ದಯೆಯಲ್ಲ ಮಾಡಲೇಬೇಕಾದ ಕರ್ತವ್ಯವಾಗಿರುವುದು. 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತ್ತೆಂದೆನಬೇಡ, ಮುಂದೆ ಕಟ್ಟಿಹುದು ಬುತ್ತಿ' ಎಂದು ಸರ್ವಜ್ಞನೂ ಹೇಳಿದಂತೆ ನಾವು ಮತ್ತೊಬ್ಬರಿಗೆ ನೀಡಿದರೆ ನಮಗೆ ನಮ್ಮ ಕಷ್ಟ ಕಾಲದಲ್ಲಿ ಭಗವಂತ ಆಶೀರ್ವಾದ ನೀಡುತ್ತಾನೆಂದು ಮಾತಾಡುವುದನ್ನು ಜನಪದರಲ್ಲಿ ಕೇಳುತ್ತೇವೆ.

ನಿಸ್ವಾರ್ಥ ಗುಣಕ್ಕೆ ಸಹಜವಾಗಿ ಕಾಣಬರುವ ಮರಗಿಡಬಳ್ಳಿಗಳು ಸದಾ ಋಣಭಾರ ಮುಕ್ತವಾಗಿರುತ್ತವೆ. ಅವುಗಳಿಗೆ ನಾವು ಕಾಲಕಾಲಕ್ಕೆ ನೀರು ಗೊಬ್ಬರವಷ್ಟೇ ಹಾಕಿದರೆ ಅವು ಪ್ರಕೃತಿಯ ಮಡಿಲಲ್ಲಿ ನಗುನಗುತ್ತಾ ನಮಗೆ ಹೂ, ಕಾಯಿ, ಹಣ್ಣುಗಳನ್ನು ಕೊಟ್ಟು ಸಂತೋಷಪಡಿಸುತ್ತವೆ. ಇವುಗಳಿಂದ ಕಲಿತುಕೊಂಡ ನಮ್ಮ ಜನಪದರು ಆ ಮರಗಿಡಬಳ್ಳಿಗಿಂತ ಕಡೆಯಾಗಬಾರದೆಂಬ ಆಲೋಚನೆ ಮಾಡಿದವರು. ತಮಗೆ ಪರಂಪರೆಯಿಂದ ಬಂದ ಕಾಯಕವನ್ನಾಗಲಿ ಅಥವಾ ಆಯ್ದುಕೊಂಡ ಕಾಯಕವನ್ನು ನಿಷ್ಠೆ ನಿಯಮ ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಾ ಬಂದವರು. ಈ ಸಂದರ್ಭದಲ್ಲಿ ಯಾರೂ ಯಾರ ಋಣಭಾರವನ್ನು ಇಟ್ಟುಕೊಂಡು ಹೋಗಬಾರದು. ಅಷ್ಟೇ ಅಲ್ಲ, ತನುಮುಟ್ಟಿ ಮನಮುಟ್ಟಿ ಸೇವೆ ಸಲ್ಲಿಸುವ ಅವರ ಪರಿ ಸರ್ವಶ್ರೇಷ್ಠವಾದುದು.

* * *

೧೨ನೇ ಶತಮಾನದಲ್ಲಿ ಜಾತಿವ್ಯವಸ್ಥೆ ಎಷ್ಟಿತ್ತೆಂದರೆ ಸತ್ತ ಪ್ರಾಣಿಗಳನ್ನು ಎತ್ತಿ ಹಾಕುವ ಜನಾಂಗವನ್ನು ಊರಿನಿಂದ ದೂರವಿಟ್ಟಿತ್ತು. ಅವರನ್ನು ಅಸ್ಪೃಶ್ಯರೆಂದು ಗುರುತಿಸಿ ಸೌಲಭ್ಯಗಳಿಂದ ವಂಚಿಸಲಾಗಿತ್ತು. ಎಲ್ಲ ಜಾತಿ ಮತಗಳನ್ನು ತೊಡೆದು ಸರ್ವಸಮಾನತೆಯ ಆಧಾರದ ಮೇಲೆ ಉತ್ತಮ ಸಮಾಜವನ್ನು ನಿರ್ಮಿಸುವಲ್ಲಿ, ಬಸವಣ್ಣನವರಷ್ಟು ಮುನ್ನಡೆ ಸಾಧಿಸಿದವರು ಭಾರತದ ಇತಿಹಾಸದಲ್ಲಿ ವಿರಳವೆನ್ನಬಹುದು. ಹುಟ್ಟುವಾಗ ಪ್ರತಿ

ಯೊಬ್ಬರೂ ಹೊಲೆಯಲ್ಲಿಯೇ ಹುಟ್ಟುವುದು. 'ಹೊಲೆಯೊಳಗೆ ಹುಟ್ಟಿ ಕುಲವನರಸುವರೆ?' ಅನಂತರ ನಾವು ಶ್ರೇಷ್ಠ-ಕನಿಷ್ಠ ಎಂಬೀ ತಾರತಮ್ಯ ಭಾವನೆ ಸೃಷ್ಟಿಸಿಕೊಳ್ಳುತ್ತೇವೆ. ಈ ಮನೋಭಾವದವರನ್ನು ಕಂಡ ಬಸವಣ್ಣನವರು ತೀವ್ರ ವಿಡಂಬಿಸಿದ್ದಾರೆ. 'ಮಾಡುವ ಕಾಯಕದಲ್ಲಿ ಹೊಲೆಯತನವಿರುವುದಿಲ್ಲ'ವೆಂದ ಬಸವಣ್ಣನವರು 'ಸತ್ತುದನೆಳೆವರೆತ್ತಣ ಹೊಲೆಯ?' ಎನ್ನುತ್ತಾ

ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೋ

ಎಂದು ಪ್ರಶ್ನಿಸುತ್ತಾ ಜೀವಂತಿಕೆಯ ಹೋತವನ್ನು ತಂದು ಹಿಂಸಿಸಿ ಯಜ್ಞದಲ್ಲಿ ಕೊಲ್ಲುವವರೇ ಹೊಲೆಯರು. ಯಾರು ಬಾಯಿಚ್ಚೆಗಾಗಿ ಪ್ರಾಣಿ-ಪಕ್ಷಿಗಳನ್ನು ಕೊಲ್ಲುತ್ತಾರೆಯೋ ಅವರೇ ಹೊಲೆಯರು. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವರೆಲ್ಲ ಕುಲಜರು. ಉದಾತ್ತ ಜೀವನಕ್ಕೆ ಬೇಕಾಗಿರುವುದು ಇಂಥ ಕೀಳು ಆಲೋಚನೆಗಳಲ್ಲ, ಉನ್ನತ ನೈತಿಕ ಮೌಲ್ಯಗಳು ಮುಖ್ಯ. ಹಾಗಾಗಿ ಬಸವಣ್ಣನವರು 'ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡೆನೆ?' ಎಂದಿರುವುದು. ಯಾರು ಅಹಿಂಸಾ ಮೂಲವಾದ ಸಾತ್ವಿಕ ಭಕ್ತಿಯನ್ನು ಕೈಗೊಂಡಿರುತ್ತಾರೋ ಅವರೇ ಉತ್ತಮರು. ಅಂತವರು ಯಾವ ಜಾತಿಯಲ್ಲಿದ್ದರೂ ನಿಜವಾಗಿ ಶರಣರಾಗಿರುತ್ತಾರೆ.

ಅದೇರೀತಿ ಜನಪದರಲ್ಲಿ ಜಾತಿ ಮತದ ಕಲ್ಪನೆಗಳಿಲ್ಲ. ಜನಪದರೂ ಬಸವಣ್ಣನವರ ಈ ಹೊಲೆಯತನ ಕುರಿತಾಗಿ ವ್ಯಕ್ತಪಡಿಸಿದ ವಿಚಾರಕ್ಕೆ ಸ್ಪಂದಿಸಿದ್ದಾರೆ.

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲಿರೆ ಬಸವಯ್ಯ ಬಸವರಸ । ನಿನ್ಹೆಸರು ।
ನೆಲೆಯಾತು ನಿತ್ಯ ಜನಪದಕೆ ॥

ಹೊಲಸು ತಿಂಬುವ ಹೊಲೆಯ ಹೊಲಬಿಲ್ಲವ ಹೊಲೆಯ
ನೆಲೆಸಲ್ಲುಸಿನುಡಿಯು ಎದೆಯೊಳಗೆ । ಹೊಲೆಯರಸ ।
ಹೊಲೆಯರೆನ್ನುವರೇ ಶರಣರಿಗೆ ॥

ಹಿಂದೆ ಮನುಷ್ಯ ಯಾವದೋ ಸಂದರ್ಭದಲ್ಲಿ ಕಾಯಕಕ್ಕನುಗುಣವಾಗಿ ಜಾತಿಯನ್ನು ಕಲ್ಪಿಸಿಕೊಂಡಿರಬಹುದು. ಇದರಿಂದ ಶ್ರೇಷ್ಠ-ಕನಿಷ್ಠವೆಂಬ ಮಾಪನದಿಂದ ಅಳೆದರೆ ಮೂರ್ಖತನವಾದೀತು. ಹುಟ್ಟುವಾಗ ಮಾನವರೆಲ್ಲರೂ ಒಂದೇ ವಿನಃ ಹೊಲೆಯ ಎಂಬುದೇ ಇಲ್ಲ. ಇದು ಶರಣರ ಗಟ್ಟಿ ನಿಲುವು. ಹೊಲೆಯತನವನ್ನಳಿಸಿ ಹಾಕಿದ ಶರಣರನ್ನು ಜನಪದರು ಮನಃಪೂರ್ವಕವಾಗಿ ಕೊಂಡಾಡಿದ್ದಾರೆ.

ಜಾತಿಯೆಂಬುದು ಮನಸ್ಸಿಗಂಟಿದ್ದೇ ಹೊರತು ಮೈಗಂಟಿದ್ದಲ್ಲವೆಂಬುದು ಜನಪದರ ಭಾವನೆ. ಬಸವಾದಿ ಪ್ರಮಥರ ಅನುಭಾವವನ್ನು ಅರಿಯುವುದರ ಮೂಲಕ ಅಶುದ್ಧ ಮನಸ್ಸನ್ನು ಶುದ್ಧಗೊಳಿಸಿಕೊಳ್ಳುವುದು. ದೇಹದ ಮೈಲಿಗೆ ತೊಳೆಯಲು ತಿಳಿಯಾದ ನೀರು ಹೇಗೋ ಮನದ ಮೈಲಿಗೆಯನ್ನು ತೊಳೆಯಲು ಭಗವಂತನ ಧ್ಯಾನ ಉಂಟು. ಬಸವಣ್ಣನವರು ಸಮಾಜದಲ್ಲಿ ಸಕಲರೂ ಸಮಾನರಾಗಿರಬೇಕೆಂದು ಎಲ್ಲರಿಗೂ ಲಿಂಗವನ್ನು ಕಟ್ಟಿದರು. ಹೀಗೆ ಲಿಂಗಪೂಜೆಯ ಮೂಲಕ ಜಾತಿ ನಿರ್ಮೂಲನೆ ಮಾಡಲು ಬಸವಣ್ಣನವರು ಅದನ್ನು ಒಂದು ಮಂತ್ರದಂತೆ ಹರಡಿದರು.

ಬಸವಣ್ಣನವರ ಜಾತಿ ಹೋಗಲಾಡಿಸುವ ಕಾರ್ಯವೈಖರಿ ಜನಪದರಲ್ಲಿ ಇಮ್ಮಡಿ ಸಂತೋಷವನ್ನುಂಟುಮಾಡಿದೆ. ಹಾಗಾಗಿ ಆತನನ್ನು ಹೊಗಳುತ್ತಾ, 'ಭೂಮಂಡಲದಲ್ಲಿ ಬಸವಣ್ಣ ನಿನ್ನ ಹೆಸರೇ ಒಂದು ಮಹಾಮಂತ್ರವಾಗಿದೆ' ಎಂದು ಜನಪದರು ತ್ರಿಪದಿಯೊಂದರಲ್ಲಿ ಹೀಗೆ ಹಾಡಿದ್ದಾರೆ.

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ ।
ಮರ್ತ್ಯದೊಳು ಮಂತ್ರ ಜೀವನಕೆ ॥

ಮಾನವ ಜನ್ಮದ ಸಾರ್ಥಕತೆಯನ್ನು ಅನುಭವಿಸಿದ ಬಸವಣ್ಣನವರು ತಮ್ಮ ಸಮಕಾಲೀನ ಹಾಗೂ ಅನಂತರದ ವಿಚಾರವಂತರಿಗೆ ಮಾರ್ಗದರ್ಶಿಯಾಗಿದ್ದಾರೆ. ಅವರ ವಚನಗಳು ಪ್ರಚಲಿತ ವಿದ್ಯಮಾನಗಳಿಗೆ ಕನ್ನಡಿಯಾಗಿವೆ. ಹಾಗಾಗಿ,

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ ।
ಸೊಲ್ಲೆತ್ತಿ ಜನವು ಹಾಡುವುದು ॥

ಹೀಗೆ ಜನಪದರು ಮನದುಂಬಿ ಹಾಡಿ ಹೊಗಳಿದ್ದಾರೆ. ಮೂಢನಂಬಿಕೆ, ಅಸಮಾನತೆ, ಕಂದಾಚಾರ, ಅಸ್ಪೃಶ್ಯತೆಗಳೆಂಬ ಅನಿಷ್ಟಗಳ ವಿರುದ್ಧ ಬಸವಣ್ಣನವರು ತಮ್ಮ ವಯಸ್ಸಿಗೂ ಮೀರಿ ಹೋರಾಡಿದವರು. ಅಂದಿನ ಕಾಲದಲ್ಲಿಯೇ ಭಾವೀ ಭಾರತದ ಕನಸನ್ನು ಕಂಡವರು. ಅದಕ್ಕೆ ಅವರ ವಚನಗಳೇ ಸಾಕ್ಷಿ ಮತ್ತು ಸ್ಫೂರ್ತಿ.


ಆಕರಗಳು:

ಜನಪದ ತ್ರಿಪದಿಗಳು, *೨೦೧೦ರ ದಿನದರ್ಶಿ, ಸಿದ್ಧಗಂಗಾ ವಿದ್ಯಾಸಂಸ್ಥೆ, ತುಮಕೂರು.*

ಜನಪದ ಸಾಹಿತ್ಯ, *ಡಾ. ಕಾಳೇಗೌಡ ನಾಗವಾರ, ಯುಗಾದಿ ಪ್ರಕಾಶನ, ಬೆಂಗಳೂರು.*

ನಿಷ್ಪತ್ತಿ, *ಅಕ್ಕ ಅನ್ನಪೂರ್ಣತಾಯಿ, ಬಸವ ಸಂಪದ ಪ್ರಕಾಶನ, ಬೀದರ.*

ಬಸವ ವಿಚಾರಧಾರೆ, *ದೇಜಗೌ, ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.*



ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧೦



ಕೆಲವು ದಿನಗಳಲ್ಲಿ ಭಕ್ತಮಾಲನಿಂದ ಗೋಕುಲದ ಒಬ್ಬ ಪರಮಹಂಸರ ಬಗ್ಗೆ ಕೇಳಿ, ಅವರ ದರ್ಶನ ಮಾಡಲು ಮೂವರೂ ಹೊರಟರು. ಪರಮಹಂಸಜೀ ಇವರುಗಳನ್ನು ಬಹಳ ಗೌರವದಿಂದ ಬರಮಾಡಿಕೊಂಡು, ತಮ್ಮ ಆಶ್ರಮದಲ್ಲಿ ಇರಿಸಿಕೊಂಡರು. ಅಲ್ಲಿಯ ಜನರು ಪರಮಹಂಸರ ವಯಸ್ಸಿನ ಬಗ್ಗೆ ಸೋಜಿಗದ ಮಾತುಗಳನ್ನಾಡುತ್ತಿದ್ದರು. ಕೆಲವು ವೃದ್ಧರು, 'ಚಿಕ್ಕಂದಿನಿಂದಲೂ ಅವರನ್ನು ಈಗ ಇರುವಂತೆ, ಒಂದೇ ರೀತಿಯಾಗಿ ನೋಡುತ್ತಿದ್ದೇವೆ' ಎನ್ನುತ್ತಿದ್ದರು. ಮತ್ತೆ ಕೆಲವರು, ತಮ್ಮ ಮುತ್ತಜ್ಜನ ಬಾಯಿಯಿಂದಲೂ ಸಹ ಅವರ ಬಗ್ಗೆ ಕೇಳಿದ್ದಾಗಿ ಹೇಳುತ್ತಿದ್ದರು. ಅಂದರೆ ಪರಮಹಂಸರ ವಯಸ್ಸು ೧೫೦–೨೦೦ ವರ್ಷಗಳೆಂದೇ ಹೇಳಬಹುದು. ಒಳ್ಳೆಯ ಆಜಾನುಬಾಹು, ಬಲಿಷ್ಠವಾದ ದೇಹ, ಕೂದಲು ಸಹ ಬೆಳ್ಳಗಾಗಿಲ್ಲ. ಈಗಲೂ ಅವರು ನಿಯಮಿತವಾಗಿ ವ್ಯಾಯಾಮ ಮಾಡುತ್ತಾರೆ. ಪರಮಹಂಸಜೀ ಭಕ್ತರೂ ಹೌದು, ಜ್ಞಾನಿಯೂ ಹೌದು. ಧಾರ್ಮಿಕ ವಿಷಯದಲ್ಲಿಯೂ ಅವರ ದೃಷ್ಟಿಕೋನ ಉದಾರವಾಗಿತ್ತು. ಈ ಮೂವರು ಮಹಾರಾಜರ ಬಾಯಿಯಿಂದ ಠಾಕೂರ್ ಮತ್ತು ಸ್ವಾಮೀಜಿಯವರ ವಿಷಯವನ್ನು ಕೇಳಿ ಅವರು ತುಂಬ ಆನಂದಪಟ್ಟರು. ಅವರ ದಿನಚರಿ ತುಂಬ ಚೆನ್ನಾಗಿತ್ತು. ಮುಂಜಾನೆಗೂ ಮೊದಲೇ ಎದ್ದು, ಶಿಷ್ಯರೊಡಗೂಡಿ ಜಪ-ಧ್ಯಾನದಲ್ಲಿ ತೊಡಗುತ್ತಿದ್ದರು. ಆಶ್ರಮದಲ್ಲಿ ಬೇರೆ ಕೆಲಸದವರಾರೂ ಇರಲಿಲ್ಲ. ಅಲ್ಲಿದ್ದ ೧೨-೧೫ ಶಿಷ್ಯರೇ ಎಲ್ಲ ಕೆಲಸಗಳನ್ನೂ ಹಂಚಿಕೊಂಡು ಮಾಡುತ್ತಿದ್ದರು. ೩-೪ ಜನರು ಅಡುಗೆಮನೆಯ ಕೆಲಸ ನೋಡಿಕೊಳ್ಳುತ್ತಿದ್ದರೆ, ಇತರ ೩-೪ ಜನರು ದೊಡ್ಡ ಜೋಳಿಗೆಯೊಂದನ್ನು ಹಿಡಿದುಕೊಂಡು ಭಿಕ್ಷೆಗೆ ಹೊರಗೆ ಹೋಗುತ್ತಿದ್ದರು. ನಿತ್ಯವೂ ಆಶ್ರಮದಲ್ಲಿ ೫೦-೬೦, ಕೆಲವೊಮ್ಮೆ ೧೦೦ ಜನ ಅತಿಥಿಗಳು, ಬೈರಾಗಿಗಳು ಮಧ್ಯಾಹ್ನದ ಹೊತ್ತು ತೃಪ್ತಿಯಿಂದ ಊಟ ಮಾಡುತ್ತಿದ್ದರು. ಪರಮಹಂಸಜೀ ತಾವೇ ಸ್ವತಃ ನಿಂತು ಅದರ ಮೇಲ್ವಿಚಾರಣೆ ಮಾಡುತ್ತಿದ್ದರು. ಪರಮಹಂಸರ ಆಹಾರದಲ್ಲಿ ಯಾವ ರೀತಿಯ ವಿಶೇಷತೆಯೂ ಇರಲಿಲ್ಲ, ಎಲ್ಲರೂ ಏನು ಊಟ ಮಾಡುತ್ತಿದ್ದರೋ ಅದನ್ನೇ ಅವರೂ ಸ್ವೀಕರಿಸುತ್ತಿದ್ದರು. ಊಟ, ವಿಶ್ರಾಂತಿಯ ನಂತರ ೩ ಗಂಟೆಯ ಹೊತ್ತಿಗೆ ಎಲ್ಲರನ್ನೂ ಸೇರಿಸಿಕೊಂಡು 'ಅಧ್ಯಾತ್ಮ ರಾಮಾಯಣ'ವನ್ನು ಭಾಷ್ಯಸಮೇತ ಹಿಂದಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಅಲ್ಲಿದ್ದಷ್ಟು ದಿನವೂ ಪರಮಹಂಸಜೀ ಅವರೆಲ್ಲರನ್ನೂ ಸಂಗಡ ಕರೆದುಕೊಂಡು, ಸಂಜೆ ತಿರುಗಾಡಿ ಬರುತ್ತಿದ್ದರು. ಅಂಗಡಿಗಳಿರುವ ಬೀದಿಗೇನಾದರೂ ಹೋದರೆ, ರಸ್ತೆಯ ಎರಡು ಬದಿಯ ವ್ಯಾಪಾರಿಗಳೂ ಹೊರಗೆ ಬಂದು ಭಕ್ತಿಗೌರವಗಳಿಂದ ಕೈ ಮುಗಿದು ನಿಲ್ಲುತ್ತಿದ್ದುದನ್ನು ಕಾಣಬಹುದಿತ್ತು. ಒಂದು ದಿನ ಪರಮಹಂಸಜೀ ತಮ್ಮ ಗೋಶಾಲೆಯನ್ನು ತೋರಿಸಿಕೊಂಡು ಬರಲು ಈ ಮೂವರನ್ನು ಕರೆದೊಯ್ದರು. ಸುಮಾರು ಒಂದೂವರೆ ಮೈಲಿ ದೂರದಲ್ಲಿ ಆ ಗೋಶಾಲೆ ಇತ್ತು. ಅಲ್ಲಿನ ರೈತರ, ಸಾಹು

ಕಾರರ ಮುದಿ ಹಾಗೂ ಯಾವುದೇ ಕೆಲಸ ಮಾಡಲು ಅಶಕ್ಯ ವಾಗಿದ್ದ ದನ, ಎತ್ತುಗಳು ಈ ಗೋಶಾಲೆಯಲ್ಲಿ ಆಶ್ರಯ ಪಡೆಯು ತ್ತಿದ್ದವು. ಪರಮಹಂಸರ ಇಬ್ಬರು ಶಿಷ್ಯರನ್ನು ಈ ಗೋವುಗಳ ಪರಿ ಚರ್ಯೆಗಾಗಿ ನೇಮಿಸಿದ್ದರು. ಇದನ್ನೆಲ್ಲಾ ನೋಡಿ ಬಾಬುರಾಮ್ ಮಹಾರಾಜರು ತುಂಬ ಆನಂದವನ್ನು ವ್ಯಕ್ತಪಡಿಸಿದರು. ಪರಮ ಹಂಸಜೀ ಆಶ್ರಮದಲ್ಲಿ ನಾಲ್ಕೈದು ದಿನಗಳಿದ್ದ ನಂತರ, ಶ್ರೀಕೃಷ್ಣನ ಅಣ್ಣ ಬಲರಾಮನ ಜನ್ಮಸ್ಥಳ 'ರಾವುಲ್'ನ ದರ್ಶನ ಮಾಡಿ ಬೃಂದಾವನಕ್ಕೆ ಹಿಂತಿರುಗಿದರು.

ಇದೇ ಸಮಯದಲ್ಲಿಯೇ ಕಾಳೀಕೃಷ್ಣರ ತಾಯಿ ಬೃಂದಾ ವನದ ಯಾತ್ರೆಗೆ ಬಂದಿದ್ದರು. ಕಾಲಾಬಾಬುವಿನ ಕುಂಜದ ಒಳ ಮನೆಯಲ್ಲಿ ಸುಮಾರು ಒಂದು ತಿಂಗಳು ವಾಸವಾಗಿದ್ದರು. ಅವರು ನಾನಾ ಪ್ರಕಾರದ ಪಲ್ಯಪದಾರ್ಥಗಳನ್ನು ತಯಾರಿಸಿ ಬಾಬುರಾಮ್ ಮಹಾರಾಜರಿಗೆ ಮತ್ತು ಕಾಳೀಕೃಷ್ಣರಿಗೆ ಬಡಿಸು ತ್ತಿದ್ದರು. ಕುಂಜದ ಕಾವಲುಗಾರ ಹರಿಸಿಂಗ್ ಕಟ್ಟುಮಸ್ತಾದ ಆಳು, ತುಂಬ ಲಕ್ಷಣವಾಗಿದ್ದ. ಮಧುರಭಾಷಿ ಹಾಗೂ ಬಹಳ ಕಸರತ್ತು ಮಾಡುತ್ತಿದ್ದ. ಅವನು ದಿನವೂ ಸಂಜೆ ಕಾಳೀಕೃಷ್ಣರಿಗೆ 'ಸಿದ್ಧಿ'[೧] ತಯಾರಿಸಿ ಕೊಡುತ್ತಿದ್ದ; ಅದಕ್ಕಾಗಿ ಆಗಾಗ ಇನಾಮು ಕೇಳುತ್ತಿದ್ದ, ಕಾಳೀಕೃಷ್ಣರೂ ಕೊಡುತ್ತಿದ್ದರು. ಬೇಸಿಗೆಯ ಆ ಪ್ರಚಂಡ ಸೆಖೆಯಲ್ಲಿ ಸಿದ್ಧಿಯಿಂದಾಗಿ ಶರೀರವು ಸ್ವಲ್ಪ ತಂಪಾಗು ತ್ತಿತ್ತು, ಹಸಿವೂ ಆಗುತ್ತಿತ್ತು. ಆದ್ದರಿಂದ ಒಂದು ಮಧ್ಯಮ ಗಾತ್ರದ ಕಮಂಡಲು ಭರ್ತಿ ಸಿದ್ಧಿಯನ್ನು ಕಾಳೀಕೃಷ್ಣರು ಪಾನ ಮಾಡುತ್ತಿದ್ದರು. ದಿನವೂ ಎರಡು ಬಾರಿ ಸ್ನಾನ ಮಾಡುತ್ತಿದ್ದರಿಂದ ಸಿದ್ಧಿಯಿಂದ ಮತ್ತೇರುತ್ತಿರಲಿಲ್ಲ. ಸಂಜೆ ಹೊತ್ತು ದೇವಾಲಯ ಗಳಿಗೆ ಹೋಗಿ ಬರುತ್ತಿದ್ದರು. ಕಾಳೀಕೃಷ್ಣರ ನೆನಪುಗಳಲ್ಲಿ:

''ಬೃಂದಾವನದ ಒಂದು ತುದಿಯಿಂದ ಹಿಡಿದು ಮತ್ತೊಂದು ತುದಿಯವರೆಗೆ ರಸ್ತೆ ಹಾಗೂ ಆಸುಪಾಸಿನಲ್ಲಿರುತ್ತಿದ್ದ ಪ್ರಸಿದ್ಧ ಮಂದಿರಗಳನ್ನು ಸಂದರ್ಶಿಸಿ, ರಾತ್ರಿ ೮ರ ವೇಳೆಗೆ ಹಿಂತಿರುಗುತ್ತಿದ್ದೆ. ಪ್ರತಿ ಮಂದಿರದಲ್ಲಿ ನಿತ್ಯವೂ ವಿಗ್ರಹವನ್ನು ಹೊಸ ವೇಷ ಭೂಷಣ ಗಳಿಂದ ಅಲಂಕರಿಸುತ್ತಿದ್ದರು. ಒಂದು ದಿನ ರಾಖಾಲನ (ಗೊಲ್ಲನ) ವೇಷವಾದರೆ ಇನ್ನೊಂದು ದಿನ ರಾಜವೇಷ, ಮತ್ತೊಂದು ದಿನ ನರ್ತಕನ ವೇಷ. ಕೆಲವೊಮ್ಮೆ ಚಿನ್ನದ ನಾನಾ ಬಗೆಯ ಅಲಂಕಾರ, ಮತ್ತೊಮ್ಮೆ ಸುಂದರವಾದ ಹೂಗಳ ಅಚ್ಚುಕಟ್ಟಾದ ಅಲಂಕಾರ. ಈ ಅಲಂಕಾರಗಳೆಲ್ಲ ಅದೆಷ್ಟು ಸೂಕ್ಷ್ಮ ನೈಪುಣ್ಯದಿಂದ ಕೂಡಿ ಕಲಾ ತ್ಮಕವಾಗಿರುತ್ತಿತ್ತೆಂದರೆ ಎಷ್ಟು ನೋಡಿದರೂ ಕಣ್ಣಿಗೆ ತೃಪ್ತಿಯಾಗು ತ್ತಿರಲಿಲ್ಲ. ಕೆಲವೊಂದು ದೊಡ್ಡ ಮಂದಿರಗಳಲ್ಲಿ ಇಂಥ ಅಲಂ ಕಾರಗಳಲ್ಲಿ ಅವುಗಳದ್ದೇ ಆದ ವಿಶೇಷತೆ ಇರುತ್ತಿತ್ತು. ಅದೆಂಥ ಸೇವೆ, ಭಕ್ತಿಗಳ ಭಾವನೆ! ಬೇಸಗೆಯಲ್ಲಿ ಪ್ರತಿ ಮಂದಿರದಲ್ಲೂ ವಿಗ್ರಹದ ಮುಂದಿನ ಪ್ರಾಂಗಣದಲ್ಲಿ ಕಾರಂಜಿ ಚಿಮ್ಮುತ್ತಿತ್ತು. ಈ ಸಮಯದಲ್ಲೇ ಒಮ್ಮೆ 'ಫೂಲ್ ಬಂಗ್ಲಾ' ನಡೆಯುತ್ತಿತ್ತು. ಅಂದರೆ ಹೂವಿನಿಂದಲೇ ಮಂಟಪ, ವೇದಿಕೆ ಇತ್ಯಾದಿಗಳನ್ನು ರಚಿಸಿ ಅದರ ಮಧ್ಯದಲ್ಲಿ ಕಾರಂಜಿಯನ್ನು ಚಿಮ್ಮಿಸಿ ಅಪರೂಪದ ದೃಶ್ಯ ವನ್ನು ಸೃಷ್ಟಿಸುತ್ತಿದ್ದರು. ಲಾರ್ಡ್ ಕರ್ಜನನು ಸೇಠ್‌ಗಳ ಮಂದಿರ ವನ್ನು 'ಫೋರ್ಟ್' ಎಂದೂ, ಸಾಹ್‌ಜೀಗಳ ಮಂದಿರವನ್ನು 'ಟೆಂಪಲ್' ಎಂದೂ ಕರೆದಿದ್ದನು. ಸೇಠ್‌ಗಳ ಪೂಜೆ ಪುನಸ್ಕಾರದ ವ್ಯವಸ್ಥೆಯೆಲ್ಲ ಬಹಳ ಆಡಂಬರದ್ದು. ಸಾಹ್‌ಜೀಗಳದ್ದು ಎಲ್ಲದ ರಲ್ಲೂ ಕಲೆ ಹಾಗೂ ಸೌಂದರ್ಯದ ಕಡೆಗೇ ದೃಷ್ಟಿ.''

ಬೃಂದಾವನದಲ್ಲಿ ಕೆಲವು ತಿಂಗಳನ್ನು ಸಾಧಾರಣ ರೀತಿಯಲ್ಲಿ ನಿಯಮಿತವಾದ ಜಪ, ಧ್ಯಾನ ಮತ್ತು ದರ್ಶನಾದಿಗಳಲ್ಲಿ ಕಳೆದ ಮೇಲೆ, ಕಾಳೀಕೃಷ್ಣರ ಅಂತರ್ಯದಲ್ಲಿ ತಾವು ಮನೆಯಲ್ಲಿದ್ದಾಗ ಯಾವ ರೀತಿ ತೀವ್ರ ಸಾಧನೆಯನ್ನು ಮಾಡಿದ್ದರೋ ಅದೇ ರೀತಿ ಮತ್ತೆ ತೀವ್ರ ತಪಸ್ಸು ಮಾಡುವ ಇಚ್ಛೆ ಪ್ರಬಲವಾಯಿತು. ಅವರು ಇಳಿದುಕೊಂಡಿದ್ದ ಮನೆಯ ಹಿಂಭಾಗದಲ್ಲಿ ಅಂತಹುದೇ ಇನ್ನೊಂದು ದೊಡ್ಡ ಮನೆ ಖಾಲಿಯಾಗಿತ್ತು; ಕಾಳೀಕೃಷ್ಣರು ಈಗ ಒಬ್ಬರೇ ಇದ್ದುಕೊಂಡು ಆ ಮನೆಯಲ್ಲಿ ಸಾಧನೆಗೆ ತೊಡಗಿದರು. ಮೇಲ್ಛಾ ವಣಿಯಲ್ಲಿ ಕುಳಿತು ರಾತ್ರಿ ಬಹಳ ಹೊತ್ತಿನವರೆಗೂ ಜಪ ಮಾಡು ತ್ತಿದ್ದರು. ಅನೇಕ ವೇಳೆ ಹೀಗಾದದ್ದುಂಟು: ಜಪ ಮಾಡಲು ಕುಳಿ ತಾಗ ಒಂದು ಸಣ್ಣ ಮಳೆ ಬಿತ್ತು; ಜಪದ ಸಂಖ್ಯೆ ಮುಗಿದಿರಲಿಲ್ಲ, ಆದ್ದರಿಂದ ಕಾಳೀಕೃಷ್ಣರು ಅಲ್ಲಿಂದ ಏಳದೆ ಮೈ- ಬಟ್ಟೆ ಯೆಲ್ಲಾ ತೊಯ್ದುಹೋಗಿ, ಅನಂತರ ಅಲ್ಲೇ ಮೈ ಒಣಗುತ್ತಿತ್ತು. ಈ ರೀತಿ ೨-೩ ತಿಂಗಳು ತೀವ್ರ ಸಾಧನೆ ಮಾಡಿದ್ದರ ಫಲವಾಗಿ ಕಾಳೀ ಕೃಷ್ಣರಿಗೆ ಮನೋದಾರ್ಢ್ಯ, ಆನಂದದ ಅನುಭವವಾಯಿತು. ಆದರೆ ಅದರಿಂದ ದೇಹ ತುಂಬ ದುರ್ಬಲವಾಯಿತು. ಹೃದಯ ದಲ್ಲಿ ಒಂದು ರೀತಿಯ ಅಸ್ವಸ್ಥತೆ ತೋರಿ ಬಂತು. ಬಾಬುರಾಮ್ ಮಹಾರಾಜರು ಚಿಂತೆಗೀಡಾಗಿ ಅವರನ್ನು ಒಂದು ದಿನ ಮಥುರೆ ಯಲ್ಲಿದ್ದ ಸಿವಿಲ್ ಸರ್ಜನ್ ಬಳಿಗೆ ಕರೆದುಕೊಂಡು ಹೋದರು. ಸರ್ಜನ್ ಕಾಳೀಕೃಷ್ಣರನ್ನು ಪರೀಕ್ಷಿಸಿ, ಹೃದಯ ಸ್ವಲ್ಪ ದುರ್ಬಲ ವಾಗಿದೆ ಎಂದು ತಿಳಿಸಿದರು. ವಿಶ್ರಾಂತಿ ಹಾಗೂ ಪುಷ್ಟಿಕರ ಆಹಾರ ತೆಗೆದುಕೊಳ್ಳುವಂತೆ ಸಲಹೆಯಿತ್ತರು. ಕಾಳೀಕೃಷ್ಣರು ಒಂದು ಸೇರು ಶುದ್ಧ ಹಾಲನ್ನು ಕುಡಿಯಲಾರಂಭಿಸಿದರು ಮತ್ತು ಜಪ, ಧ್ಯಾನದ ಸಮಯವನ್ನು ಕಡಿಮೆ ಮಾಡಿದರು. ಆದರೆ ಅದರಿಂದ ನಿರೀಕ್ಷಿಸಿದಂತಹ ಪರಿಣಾಮವೇನೂ ಕಂಡುಬರಲಿಲ್ಲ. ಸ್ವಾಮಿ ವಿಜ್ಞಾನಾನಂದರು ಆಗಿನ್ನೂ ಮಠವನ್ನು ಸೇರಿರಲಿಲ್ಲ, ಹರಿಪ್ರಸನ್ನ ಚಟ್ಟೋಪಾಧ್ಯಾಯ ಎಂಬ ತಮ್ಮ ಹಿಂದಿನ ಹೆಸರಿನಿಂದಲೇ ಪರಿಚಿತರಾಗಿದ್ದರು. ಅವರು ಉತ್ತರಪ್ರದೇಶದ ಎಟಾ (Etwa) ಎಂಬ ನಗರದಲ್ಲಿ ಡಿಸ್ಟ್ರಿಕ್ಟ್ ಇಂಜಿನಿಯರ್ ಆಗಿ ಕೆಲಸ ಮಾಡು ತ್ತಿದ್ದರು. ಕಾಳೀಕೃಷ್ಣರನ್ನು ಅಲ್ಲಿಗೆ ಕರೆದುಕೊಂಡು ಹೋದರೆ ಅವ ರಿಗೆ ಹವಾ ಬದಲಾವಣೆಯೂ ಆಗುತ್ತದೆ, ಪಥ್ಯದ ವ್ಯವಸ್ಥೆಯೂ ಆಗುತ್ತದೆ ಎಂದು ನಿರ್ಧರಿಸಿ ಬಾಬುರಾಮ್ ಮಹಾರಾಜರು ಹರಿಪ್ರಸನ್ನರಿಗೆ ಪತ್ರ ಬರೆದು ಎಲ್ಲ ಏರ್ಪಾಟನ್ನೂ ಮಾಡಿದರು.

---

೧. ಒಂದು ಬಗೆಯ ಅಫೀಮು.

ಹರಿಪ್ರಸನ್ನ ಮಹಾರಾಜರನ್ನು ಕಾಳೀಕೃಷ್ಣರು ಹಿಂದೆಂದೂ ನೋಡಿರಲಿಲ್ಲ. ಇದೇ ಮೊದಲ ಭೇಟಿ. P.W.D.ಯ ಒಂದು ದೊಡ್ಡ ಬಂಗಲೆಯಲ್ಲಿ ಅವರು ತಾವೊಬ್ಬರೇ ಇರುತ್ತಿದ್ದರು. ಅಲ್ಲಿ ಒಬ್ಬ ಅಡಿಗೆ ಬ್ರಾಹ್ಮಣ ಮತ್ತು ಆಳುಗಳಿದ್ದರು, ಅವರೇ ಗೃಹಕೃತ್ಯಗಳನ್ನೆಲ್ಲ ನೋಡಿಕೊಳ್ಳುತ್ತಿದ್ದರು. ಹರಿಪ್ರಸನ್ನ ಮಹಾರಾಜರು ಈ ವಿಷಯದಲ್ಲಿ ಹೆಚ್ಚು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರನ್ನು ಅವರು ಆದರದಿಂದ ಸ್ವಾಗತಿಸಿದರು. ಸ್ಥಳೀಯ ಸಿವಿಲ್ ಸರ್ಜನ್‌ನಿಂದ ಕಾಳೀಕೃಷ್ಣರನ್ನು ಚೆನ್ನಾಗಿ ಪರೀಕ್ಷೆ ಮಾಡಿಸಿದರು. ಸರ್ಜನ್ ಪರೀಕ್ಷಿಸಿ, ‘‘ಭಯಪಡಬೇಕಾದ್ದೇನಿಲ್ಲ; ಚೆನ್ನಾಗಿ ಊಟ, ವಿಶ್ರಾಂತಿ, ಮಿತವಾದ ನಡಿಗೆ ಮತ್ತು ಕುದುರೆ ಸವಾರಿ ಮಾಡಿದರೆ ಆರೋಗ್ಯ ಸುಧಾರಿಸುತ್ತದೆ’’ ಎಂದು ಹೇಳಿದರು. ವೈದ್ಯರ ಮಾತಿನಿಂದ ಕಾಳೀಕೃಷ್ಣರು ಭರವಸೆ ಪಡೆದು, ಅವರ ಸಲಹೆಯಂತೆ ನಡೆಯತೊಡಗಿದರು. ಹರಿಪ್ರಸನ್ನ ಮಹಾರಾಜರಲ್ಲಿ ಒಂದು ಟಮ್ ಟಮ್ (ಕುದುರೆ ಹೂಡಿದ ಗಾಡಿ) ಇತ್ತು. ಆ ಕುದುರೆಯಲ್ಲಿ ಕಾಳೀಕೃಷ್ಣರು ಪ್ರತಿದಿನವೂ ಬೆಳಗ್ಗೆ ಸ್ವಲ್ಪ ಹೊತ್ತು ತಿರುಗಾಡಿ ಬರುತ್ತಿದ್ದರು. ಇದೇ ಅವರ ಮೊದಲ ಕುದುರೆ ಸವಾರಿಯಾದ್ದರಿಂದ ಕಾಸ್ತಾರನೊಬ್ಬ ಜೊತೆಗಿರುತ್ತಿದ್ದ. ಕಾಳೀಕೃಷ್ಣರು ಮೀನು, ಮಾಂಸ, ಹಾಲು ತುಪ್ಪಗಳನ್ನು ಹೆಚ್ಚಾಗಿ ತಿನ್ನಲಾರಂಭಿಸಿದರು. ಈ ಬಗೆಯ ವ್ಯವಸ್ಥೆಯ ಫಲವಾಗಿ ಅವರ ಆರೋಗ್ಯ ಶೀಘ್ರವಾಗಿ ಸುಧಾರಿಸಿತು. ಆದ್ದರಿಂದ ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಮತ್ತೆ ಬೃಂದಾವನಕ್ಕೆ ಹಿಂದಿರುಗಿದರು.[೨]

ಬೃಂದಾವನಕ್ಕೆ ಮರಳಿದ ಕೆಲವು ದಿನಗಳಲ್ಲೇ ಸ್ವಾಮೀಜಿಯವರು ಡಿಸೆಂಬರ್ ತಿಂಗಳಲ್ಲಿ ಸ್ವದೇಶಕ್ಕೆ ಮರಳಲಿದ್ದಾರೆ ಎಂಬ ಸುದ್ದಿ ಬಂತು. ಅವರು ಕೊಲಂಬೋದಲ್ಲಿ ಇಳಿದು, ದಕ್ಷಿಣ ಭಾರತದ ಮೂಲಕ ಕಲ್ಕತ್ತೆಗೆ ಬರುವವರಿದ್ದರು. ಸ್ವಾಮೀಜಿಯವರನ್ನು ನೋಡಿ ಬಹಳ ಕಾಲವಾಯಿತು, ಈಗ ಅವರು ಪಾಶ್ಚಾತ್ಯ ದೇಶಗಳಲ್ಲಿ ವಿಜಯ ಸಾಧಿಸಿ ಬರುತ್ತಿದ್ದಾರೆ. ಮತ್ತೆ ಅವರೊಂದಿಗಿರುವ ಸೌಭಾಗ್ಯ ದೊರಕಲಿದೆ ಎಂದೆಲ್ಲ ಭಾವಿಸಿ ಬಾಬುರಾಮ್ ಮಹಾರಾಜರ ಮನಸ್ಸು ಆಲಂಬಜಾರ್ ಮಠಕ್ಕೆ ಹಿಂತಿರುಗಲು ಹಾತೊರೆಯಿತು. ಇತ್ತ ಬೃಂದಾವನ ಬಿಟ್ಟು ಹೋಗುವುದೂ ಅವರಿಗೆ ಕಷ್ಟವಾಗುತ್ತಿತ್ತು. ಅಂತೂ ಕೊನೆಗೆ ನರೇಂದ್ರನನ್ನು ನೋಡುವ, ಅವನೊಂದಿಗೆ ಒಡನಾಡುವ ಇಚ್ಛೆಯೇ ಗೆದ್ದಿತು; ಅವರು ಕೊಲ್ಕತ್ತೆಗೆ ಹಿಂದಿರುಗುವುದೆಂದೇ ತೀರ್ಮಾನಿಸಿದರು. ೧೮೯೬ರ ಡಿಸೆಂಬರ್ ಮಧ್ಯಭಾಗದಲ್ಲಿ ಅವರು ಕಾಳೀಕೃಷ್ಣರೊಂದಿಗೆ ಕೊಲ್ಕತ್ತೆಗೆ ಹೊರಟರು. ದಾರಿಯಲ್ಲಿ ರೈಲು ವರ್ಧಮಾನ್ ನಿಲ್ದಾಣದ ಹತ್ತಿರಕ್ಕೆ ಬಂದಾಗ ಬಾಬುರಾಮ್ ಮಹಾರಾಜರು ಕಾಳೀಕೃಷ್ಣರಿಗೆ, ‘‘ನಡೆ, ಕಾಳೀಕೃಷ್ಣ, ಒಮ್ಮೆ ಶ್ರೀಮಾತೆಯವರ ದರ್ಶನ ಮಾಡಿ ಬರೋಣ’’ ಎಂದರು. ಅನೇಕ ದಿನಗಳ ನಂತರ ಶ್ರೀಮಾತೆಯವರ ದರ್ಶನವಾಗುವುದೆಂದು ಭಾವಿಸಿ ಕಾಳೀಕೃಷ್ಣರು ತುಂಬ ಉಲ್ಲಸಿತರಾದರು. ವರ್ಧಮಾನದಲ್ಲಿ ಇಳಿದು, ಅಲ್ಲಿಂದ ಎತ್ತಿನಗಾಡಿಯಲ್ಲಿ ಕಾಮಾರಪುಕುರಕ್ಕೆ ಬಂದು ಒಂದು ದಿನ ಅಲ್ಲಿದ್ದು, ಮರುದಿನ ಜಯರಾಂಬಾಟಿ ತಲುಪಿದರು. ಅವರಿಬ್ಬರನ್ನೂ ನೋಡಿ ಶ್ರೀಮಾತೆಯವರು ತುಂಬ ಆನಂದಗೊಂಡರು. ಅವರು ಕೆಲವು ವಾರಗಳ ಕಾಲ ಜಯರಾಂಬಾಟಿಯಲ್ಲೇ ಇದ್ದರು. ಅಲ್ಲಿ ಬಾಬುರಾಮ್ ಮಹಾರಾಜರು ಕಾಳೀಕೃಷ್ಣರನ್ನು ಜೊತೆಯಲ್ಲಿ ಕರೆದುಕೊಂಡು ಆಗಿಂದಾಗ್ಗೆ ಶ್ರೀರಾಮಕೃಷ್ಣರ ಜೀವನಕ್ಕೆ ಸಂಬಂಧಪಟ್ಟ ಸ್ಥಳಗಳನ್ನು ಸಂದರ್ಶಿಸುತ್ತಿದ್ದರು. ಹೀಗೆ ಸಿಹೋರ್, ಶ್ಯಾಮಬಜಾರ್, ಮುಂತಾದ ಸ್ಥಳಗಳಿಗೂ, ಹಾಜರಾ ಮಹಾಶಯನ ಮೊರಗೋಡ ಗ್ರಾಮಕ್ಕೂ ಹೋಗಿದ್ದರು. ಕೆಲವೊಂದು ದಿನ ಕಾಮಾರಪುಕುರಕ್ಕೂ ಹೋಗುತ್ತಿದ್ದರು. ಬಾಬುರಾಮ್ ಮಹಾರಾಜರು ಠಾಕೂರರ ಲೀಲಾಸ್ಥಾನಗಳಲ್ಲೆಲ್ಲ ತಿರುಗಾಡಿ ಎಲ್ಲವನ್ನೂ ನೋಡುತ್ತಿದ್ದರು. ಶ್ರೀರಾಮಕೃಷ್ಣರ ಸ್ನೇಹಿತರು ಹಾಗೂ ಭಕ್ತರು ಯಾರಿದ್ದರೋ ಅವರನ್ನೂ ಭೇಟಿ ಮಾಡಿ, ಅವರಿಂದ ಶ್ರೀರಾಮಕೃಷ್ಣರ ವಿಚಾರಗಳನ್ನು ಕೇಳುತ್ತಿದ್ದರು. ಹಿಂದಿರುಗುವಾಗ ಇಬ್ಬರೂ ಶ್ರೀಮಾತೆಯವರಿಗಾಗಿ ಹಣ್ಣು-ತರಕಾರಿ, ಜಿಲೇಬಿ ಮತ್ತು ಮಿಠಾಯಿಗಳನ್ನು ಹೊತ್ತು ತರುತ್ತಿದ್ದರು. ಅವರು ಭಾರ ಹೊತ್ತು ತರುತ್ತಿದ್ದುದನ್ನು ಕಂಡು ಶ್ರೀಮಾತೆ, ‘‘ಅಯ್ಯೋ, ಮಕ್ಕಳಿಗೆ ತುಂಬ ಕಷ್ಟವಾಗುತ್ತಿದೆ’’ ಎಂದು ಆಕ್ಷೇಪಿಸುತ್ತಿದ್ದರು.

ಬೆಳಿಗ್ಗೆ ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಶ್ರೀಮಾತೆಯವರ ಪೂಜೆಗಾಗಿ ಹೂವನ್ನು ಬಿಡಿಸಿಕೊಂಡು ಬರಲು ಹೋಗುತ್ತಿದ್ದರು. ಬಾಬುರಾಮ್ ಮಹಾರಾಜರಿಗೆ ಮರ ಹತ್ತಲು ಬರುತ್ತಿತ್ತು. ಕಾಳೀಕೃಷ್ಣರಿಗೆ ಬರುತ್ತಿರಲಿಲ್ಲ. ಒಂದೂವರೆ ಮೈಲಿ ದೂರದ ದೇಸರಾ ಗ್ರಾಮದ ಒಂದು ಕೊಳದಲ್ಲಿ ತುಂಬ ತಾವರೆ ಹೂಗಳು ಇರುವುದಾಗಿ ಅವರು ಕೇಳಿದ್ದರು. ಒಂದು ದಿನ ಬೆಳಗ್ಗೆ ಇಬ್ಬರೂ ಶ್ರೀಮಾತೆಯವರಿಗೆ ಗೊತ್ತಿಲ್ಲದಂತೆ ಅಲ್ಲಿಗೆ ಹೊರಟರು. ಕಾಳೀಕೃಷ್ಣರಿಗೆ ಈಜು ಗೊತ್ತಿಲ್ಲದ ಕಾರಣ ನೀರಿಗಿಳಿಯಲು ಭಯವಾಯಿತು. ಬಾಬುರಾಮ್ ಮಹಾರಾಜರು ಅವರನ್ನು ಕೊಳದ ಅಂಚಿನಲ್ಲಿ ನಿಲ್ಲಿಸಿ, ಚೌಕವೊಂದನ್ನು ಉಟ್ಟುಕೊಂಡು ಕೊಳಕ್ಕೆ

---

೨. ಹರಿಪ್ರಸನ್ನ ಮಹಾರಾಜರ ಆಫೀಸು ಸ್ನೇಹಿತರು ಅವರ ಬಂಗಲೆಯಲ್ಲಿ ಸಂಜೆಯ ಹೊತ್ತು ಸೇರುತ್ತಿದ್ದರು; ಬಾಬುರಾಮ್ ಮಹಾರಾಜರ ಸತ್ಸಂಗದಲ್ಲಿ ಕೆಲವು ಗಂಟೆಯನ್ನು ಆಧ್ಯಾತ್ಮಿಕ ಚರ್ಚೆಯಲ್ಲಿ ಆನಂದದಿಂದ ಕಳೆಯುತ್ತಿದ್ದರು. ಕಾಳೀಕೃಷ್ಣರು ತಮ್ಮ ಸ್ಮೃತಿಕಥೆಯಲ್ಲಿ ಬರೆಯುತ್ತಾರೆ:

‘‘(ಅಲ್ಲಿಗೆ) ವಯಸ್ಸಾದ ಸ್ನೇಹಿತರೊಬ್ಬರು ಬರುತ್ತಿದ್ದರು; ಅವರದು ಹಾಸ್ಯಪ್ರವೃತ್ತಿ ಮತ್ತು ಎಲ್ಲರೊಡನೆಯೂ ಬೆರೆಯುವ ಸ್ವಭಾವ. ಇವರು ಸಿಪಾಯಿ ದಂಗೆಯ ಸಮಯದಲ್ಲಿ Army Transport Department (ಸೇನಾ ಸಾರಿಗೆ ವಿಭಾಗ) ದಲ್ಲಿದ್ದರು. ಸಿಪಾಯಿ ದಂಗೆಯ ಕಾಲದ ಅನೇಕ ರೋಮಾಂಚಕಾರಿ ಘಟನೆಗಳನ್ನು ಅವರು ಹೇಳುತ್ತಿದ್ದರು. ‘‘ನಮ್ಮವರಲ್ಲಿ ಕೊನೆಯವರೆಗೂ ಒಗ್ಗಟ್ಟು ಎಂಬುದೇನಾದರೂ ಇದ್ದಿದ್ದರೆ, ಹಿಂದಿನಿಂದ ‘ವಾಹ್ ಬಹದ್ದೂರ್! ಹೋರಾಡು ಬಹದ್ದೂರ್’ ಎನ್ನುತ್ತಾ ಸೈನ್ಯವನ್ನು ಮುಂದೆ ಕಳುಹಿಸಿ, ಸೇನಾಪತಿಗಳು ಹಿಂದೆ (ದೂರದಲ್ಲಿ ಸುರಕ್ಷಿತವಾಗಿ) ಇರದೇ ‘ಶಿರದಾರ್–ಸರದಾರ್’ (ತಲೆ ತೆತ್ತವನೇ ಸರದಾರ) ಎಂಬ ನುಡಿಯಂತೆ ಜೀವನವನ್ನು ತುಚ್ಛಗೊಳಿಸಿ, ಮುನ್ನುಗ್ಗಿ ಹೋರಾಡಿದ್ದರೆ, ಈಗ ಸ್ವದೇಶಕ್ಕೆ ಹಿಂದಿರುಗಿ ಹೋಗಲು ಇಂಗ್ಲಿಷರಾರೂ ಉಳಿದಿರುತ್ತಿರಲಿಲ್ಲ.’’

ಇಳಿದರು. ಒಂದೊಂದಾಗಿ ತಾವರೆ ಹೂಗಳನ್ನು ಕಿತ್ತು ಅವರ ಕೈಗೆ ಕೊಡಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲೇ ಅವರು ಬಹಳ ಗಾಬರಿಯಿಂದ ದಡಕ್ಕೆ ಜಿಗಿದರು. ಕಾಳೀಕೃಷ್ಣರು ಭಯಗೊಂಡು ನೋಡಿದರೆ, ೩-೪ ಇಂಚು ಉದ್ದವಾದ, ದಪ್ಪನೆಯ ೨೦-೩೦ ಜಿಗಣೆಗಳು ಬಾಬುರಾಮ್ ಮಹಾರಾಜರ ಸೊಂಟದಿಂದ ಹಿಡಿದು ಕಾಲಿನ ಬೆರಳವರೆಗೂ ಕಚ್ಚಿಕೊಂಡಿದ್ದವು. ಇಬ್ಬರೂ ಬೇಗ ಬೇಗನೆ ಜಿಗಣೆಗಳನ್ನು ಎಳೆದು ಬಿಡಿಸಲಾರಂಭಿಸಿದರು. ಅಷ್ಟರಲ್ಲಿ ದೇಹದ ಎಲ್ಲ ಜಾಗದಿಂದಲೂ ರಕ್ತ ಹರಿಯಲಾರಂಭಿಸಿತ್ತು. ತಾವರೆ ಹೂಗಳನ್ನು ನೋಡಿ ಶ್ರೀಮಾತೆಯವರು ತುಂಬ ಸಂತಸಪಟ್ಟರು. ಆದರೆ ಜಿಗಣೆಗಳ ಆಕ್ರಮಣದ ವಿಷಯ ಕೇಳಿ ತುಂಬ ನೊಂದುಕೊಂಡರು. ಇನ್ನೊಮ್ಮೆ ತಾವರೆ ಹೂಗಳನ್ನು ತರಲು ಹೋಗಕೂಡದೆಂದು ಕಟ್ಟಪ್ಪಣೆ ಮಾಡಿದರು.

ಜಯರಾಂಬಾಟಿಯಿಂದ ಇವರಿಬ್ಬರೂ ತಾರಕೇಶ್ವರಕ್ಕೆ ಬಂದು ಶಿವನ ದರ್ಶನ ಮಾಡಿ, ನಂತರ ಬಾಬುರಾಮ್ ಮಹಾರಾಜರ ಜನ್ಮಸ್ಥಳವಾದ ಆಂಟ್‌ಪುರದಲ್ಲಿ ಕೆಲವು ದಿನಗಳನ್ನು ಕಳೆದು, ಆಲಂಬಜಾರ್ ಮಠಕ್ಕೆ ಹಿಂತಿರುಗಿದರು.

೮

ಬಾಬುರಾಮ ಮಹಾರಾಜ್ ಮತ್ತು ಕಾಳೀಕೃಷ್ಣರು ಕೊಲ್ಕತ್ತಾ ತಲುಪುವಷ್ಟರಲ್ಲಿ ಸ್ವಾಮೀಜಿ ಅಲ್ಲಿಗೆ ಬಂದು ನಾಲ್ಕೈದು ದಿನಗಳೇ ಕಳೆದಿದ್ದವು (೨೦ ಫೆಬ್ರುವರಿ, ೧೮೯೭). ಕೊಲ್ಕತ್ತೆಯಲ್ಲಿ ಅವರಿಗಿತ್ತ ಅಭೂತಪೂರ್ವ ಸ್ವಾಗತವನ್ನು[೩] ಕಣ್ಣಾರೆ ನೋಡಲಾಗಲಿಲ್ಲವೆಂದು ಕಾಳೀಕೃಷ್ಣರ ಮನದಲ್ಲಿ ಖೇದವಾದರೂ, ಸ್ವಾಮೀಜಿಯವರನ್ನು ಸಾಕ್ಷಾತ್ತಾಗಿ ನೋಡಿದಾಗ ಸ್ತಂಭೀಭೂತರಾದರು. ಸ್ವಾಮೀಜಿ ಆಗ ಗುರುಭಾಯಿಗಳೊಂದಿಗೆ ಕುಳಿತು ಸಂಭಾಷಣೆ ನಡೆಸುತ್ತಿದ್ದರು. ಯಾರ ಬಗ್ಗೆ ಬಹಳಷ್ಟು ವಿಷಯಗಳನ್ನು ಕಾಳೀಕೃಷ್ಣರು ಇಷ್ಟು ದಿನ ಕೇಳಿದ್ದರೋ ಅವರೇ ಇಂದು ಸಶರೀರವಾಗಿ ಎದುರಿಗಿದ್ದರು. ಆ ಸಂದರ್ಭವನ್ನು ಕಾಳೀಕೃಷ್ಣರ ಮಾತುಗಳಲ್ಲಿ ಹೇಳುವುದಾದರೆ:

''ಯಾರ ಬಗ್ಗೆ ಬಹಳವಾಗಿ ಕೇಳಿದ್ದೆನೋ, ಅಮೆರಿಕಾದ ವೃತ್ತಪತ್ರಿಕೆಗಳ cutting ನಲ್ಲಿ ಓದಿದ್ದೆನೋ ಅವರೇ! ಅದೇ ಸಮ್ಮೋಹಕ ನೇತ್ರಗಳು! ಅವರ ಇಡೀ ಶರೀರದಿಂದ ಒಂದು ಜ್ಯೋತಿ ಹೊರಹೊಮ್ಮುತ್ತಿದ್ದಂತೆ ಭಾಸವಾಗುತ್ತಿತ್ತು. ಅದೇನು ಅಪರೂಪದ ಮೂರ್ತಿ! ಒಂದೇ ಆಧಾರದಲ್ಲಿ ಸೌಂದರ್ಯ ಮತ್ತು ಮಹಾಶಕ್ತಿಯ ಆಟ, ಒಂದು ರೀತಿಯ nonchalant (ಪ್ರಶಾಂತ) ಭಾವ, dazzling personality! (ಕಣ್ಣು ಕೋರೈಸುವ ವ್ಯಕ್ತಿತ್ವ)! ನನ್ನ first impression (ಪ್ರಥಮ ಭಾವನೆ) ಪ್ರೀತಿ-ಭಕ್ತಿ-ಭಯ ಮಿಶ್ರಿತ ಭಾವ.''

ಸ್ವಾಮೀಜಿಯವರು ಮೊದಲೇ ಗುರುಭಾಯಿಗಳಿಂದ ಕಾಳೀಕೃಷ್ಣರ ಬಗ್ಗೆ ಕೇಳಿದ್ದರು. ಕಾಳೀಕೃಷ್ಣರು ಪ್ರಣಾಮ ಸಲ್ಲಿಸಿದಾಗ, ಸ್ವಾಮೀಜಿಯವರು ಅವರನ್ನು ಸ್ನೇಹದಿಂದ ನೋಡಿ, ಗುರುಭಾಯಿಗಳ ಕಡೆಗೆ ತಿರುಗಿ, 'ಇವನು ಅದೇ ಹುಡುಗನಲ್ಲವೆ?' ಎಂದು ಕೇಳಿದರು. ಕಾಳೀಕೃಷ್ಣರ ನೆನಪುಗಳಲ್ಲಿ:

''ಆಗ ಸ್ವಾಮೀಜಿಯವರ ಮೈ ಬಣ್ಣ ಉಜ್ವಲವಾಗಿತ್ತು. ಮುಖಮಂಡಲವು ಸರ್ವದಾ ಒಂದು ಅಪೂರ್ವ ಭಾವ ಮತ್ತು ತೇಜಸ್ಸಿನಿಂದ ಕೂಡಿ ಪ್ರಜ್ವಲಿಸುತ್ತಿತ್ತು. ಅವರ ಜ್ಯೋತಿರ್ಮಯ ನೇತ್ರಗಳನ್ನು ನೇರವಾಗಿ ನೋಡಲಾಗುತ್ತಿರಲಿಲ್ಲ, ಏಕೆಂದರೆ ಕಣ್ಣುಗಳು ಸಂಧಿಸಿದರೆ ನಮ್ಮ ಕಣ್ಣೆಲ್ಲಿ ಕಮರಿಹೋಗುವುದೋ ಎನಿಸುತ್ತಿತ್ತು. ಯಾವಾಗ ಅವರು ಕೌಪೀನವನ್ನು ಮಾತ್ರ ಧರಿಸಿ, ಒಳಮನೆಯ ತಾರಸಿಯಲ್ಲಿ ಭಗವದ್ಭಾವದಲ್ಲಿ ಮತ್ತರಾಗಿ ಸಿಂಹದಂತೆ ನಡೆದಾಡುತ್ತಿದ್ದರೋ, ಆಗ ಅವರು ಆಧ್ಯಾತ್ಮಿಕ ಜಗತ್ತಿನ ನೆಪೋಲಿಯನ್ ಎಂದೆನಿಸುತ್ತಿತ್ತು. ಅವರ ಹೆಜ್ಜೆ ಹೆಜ್ಜೆಗೂ ಭೂಮಿ slipping from under his feet (ಜಗತ್ತು ಪಾದದಡಿಯಿಂದ ಸರಿದು ಹೋಗುತ್ತಿದೆಯೇನೋ), ನೆಲ ನಡುಗುತ್ತಿದೆಯೇನೋ, ಒಂದು ಮಹಾಶಕ್ತಿಯು ಅನವರತ ಸ್ಫುರಿಸಿ, ಸಿಡಿದೇಳುತ್ತಿದೆಯೇನೋ ಎಂದೆನಿಸುತ್ತಿತ್ತು. ಮೊದಮೊದಲು ಅವರನ್ನು ನೋಡಿದರೆ ಬಹಳ ಭಯವಾಗುತ್ತಿತ್ತು. 'ಏನೋ ಮಾಡಲು ಹೋಗಿ ಮತ್ತೇನೋ ತಪ್ಪಾದರೆ, ಅದರಿಂದ ಅವರು ಅಸಂತುಷ್ಟರಾದರೆ!' ಎಂದು ಭಾವಿಸಿ ಅವರ ಹತ್ತಿರ ಹೆಚ್ಚಾಗಿ ಸುಳಿಯುತ್ತಿರಲಿಲ್ಲ. ಆದಷ್ಟೂ ಅವರ ಹತ್ತಿರ ಸ್ವಲ್ಪ ಸಮಯವೇ ಇರುತ್ತಿದ್ದೆ, ಇಲ್ಲವೇ ಸ್ವಲ್ಪ ಮರೆಯಾಗಿ ಕುಳಿತುಕೊಳ್ಳುತ್ತಿದ್ದೆ.''

ಸ್ವಾಮೀಜಿಯವರು ಹಗಲುಹೊತ್ತು ಕಾಶೀಪುರದ ಗೋಪಾಲ್‌ಲಾಲ್ ಶೀಲರ ತೋಟದ ಮನೆಯಲ್ಲಿರುತ್ತಿದ್ದರು. ಸಂಜೆ ತಮ್ಮ ಗುರುಭಾಯಿ ಮತ್ತು ಶಿಷ್ಯರೊಂದಿಗೆ ಕಾಶೀಪುರದಿಂದ ಸುಮಾರು ಎರಡೂವರೆ ಮೈಲಿ ದೂರದ ಆಲಂಬಜಾರ್ ಮಠಕ್ಕೆ ಮಾತುಕತೆಯಾಡುತ್ತಾ ನಡೆದುಕೊಂಡು ಬರುತ್ತಿದ್ದರು. ಮಠಕ್ಕೆ ಬಂದು ಬಟ್ಟೆಬರೆ ಬಿಸುಟು, ಕೇವಲ ಕೌಪೀನದಲ್ಲಿ ಇರುತ್ತಿದ್ದರು. ಒಂದೊಂದು ದಿನ ತುಂಬ ಹೊತ್ತಾಗಿಬಿಟ್ಟರೆ ಅಥವಾ ಆಯಾಸವೆನಿಸಿದರೆ ಶೀಲರ ತೋಟದಲ್ಲೇ ರಾತ್ರಿಹೊತ್ತು ಇದ್ದುಬಿಡುತ್ತಿದ್ದರು. ಅಲ್ಲಿ ಪ್ರತಿದಿನವೂ ಸ್ವಾಮೀಜಿಯವರ ದರ್ಶನ ಮಾಡಲು ಮತ್ತು ಅವರ ಮಾತುಗಳನ್ನು ಕೇಳಲು ಬಹಳ ಜನ ಕಾತರರಾಗಿ ಸೇರುತ್ತಿದ್ದರು. ಮಠಕ್ಕೆ ಬಂದ ಮೇಲೂ ವಿರಾಮವಿಲ್ಲದೆ, ಗುರುಭ್ರಾತರೊಂದಿಗೆ ನಗು, ತಮಾಷೆ, ಕಥೆ ಹಾಗೂ ನಾನಾಬಗೆಯ ಮಾತುಕತೆಗಳಲ್ಲಿ ತೊಡಗುತ್ತಿದ್ದರು. *(ಮುಂದುವರಿಯುವುದು)*

---

೩. ಸ್ವಾಮೀಜಿ ಕೊಲ್ಕತ್ತಾ ತಲುಪಿದ ಒಂದು ವಾರದ ನಂತರ, ಅಂದರೆ ಫೆಬ್ರುವರಿ ೨೮ರಂದು ಶೋಭಾಬಜಾರ್‌ನ ಅರಮನೆಯಲ್ಲಿ ರಾಜಾ ವಿನಯಕೃಷ್ಣ ದೇವನ ಅಧ್ಯಕ್ಷತೆಯಲ್ಲಿ ಸ್ವಾಮೀಜಿಯವರ ಸ್ವಾಗತ ಸಭೆ ಜರುಗಿತು. ಅದರಲ್ಲಿ ಅನೇಕ ಮಂದಿ ಪ್ರತಿಷ್ಠಿತರೂ, ವಿಶಿಷ್ಟ ನಾಗರಿಕರೂ, ಬ್ರಾಹ್ಮಣ ಪಂಡಿತರೂ, ನೂರಾರು ಮಂದಿ ಕಾಲೇಜು ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ತಮ್ಮ ಭಾಷಣದ ಕೊನೆಯಲ್ಲಿ ಸ್ವಾಮೀಜಿ ಬಂಗಾಳದ ಯುವಕರನ್ನು ಉದ್ದೇಶಿಸಿ ಸ್ಫೂರ್ತಿದಾಯಕವಾದ ಮಾತುಗಳನ್ನು ಆಡಿದರು. *(ನೋಡಿ: ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೮೦-೯೧)*

ಶ್ರೀಮಾತೆಯವರ ಪತ್ರಗಳು -೫

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

ಪತ್ರ ೧೬

ಶ್ರೀ ಶ್ರೀ ಹರಿಪದಗಳಲ್ಲಿ ಭರವಸೆ

೧೯೦೨

ಮಗು,

ನಿನ್ನ ಪತ್ರ ಸಿಕ್ಕಿ ನನಗೆ ತುಂಬಾ ಸಂತೋಷವಾಯಿತು. ಮಗು, ನೀನು ತುಂಬಾ ಎಚ್ಚರಿಕೆಯಿಂದ ಇರಬೇಕು. ನಿನ್ನ ಕಲ್ಯಾಣಕ್ಕಾಗಿ ನಾನು ಠಾಕೂರರ ಬಳಿ ದಿನವೂ ಪ್ರಾರ್ಥಿಸುತ್ತಿದ್ದೇನೆ. ಭಗವಂತನಲ್ಲಿ ನಿನಗೆ ಭಕ್ತಿ ಇರಲಿ ಮತ್ತು ನಿನಗೆ ಅವನು ದಯೆಯನ್ನು ತೋರಿಸಲಿ. ಯಾವುದರಿಂದ ನಿಮಗೆಲ್ಲ ಶ್ರೀರಾಮಕೃಷ್ಣರಲ್ಲಿ ಭಕ್ತಿ ಉಂಟಾಗುವುದೋ, ಹಾಗೂ ಅವರು ನಿಮಗೆಲ್ಲಾ ದಯೆ, ಶಾಂತಿಗಳನ್ನು ನೀಡುವರೋ, ಅದರಿಂದಲೇ ನನಗೆ ಸಂತೋಷವುಂಟಾಗುವುದು. ಮೋತಿಲಾಲ್, ಕಾಳೀಕೃಷ್ಣರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ನಿನಗೂ ನನ್ನ ಆಶೀರ್ವಾದ. ಶ್ರೀ ರಾಮಕೃಷ್ಣರ ಕೃಪೆಯಿಂದ ನಾನು ಚೆನ್ನಾಗಿದ್ದೇನೆ.ಇಲ್ಲಿ ಎಲ್ಲವೂ ಕ್ಷೇಮ. ಅಲ್ಲಿಯ ಕುಶಲವನ್ನು ತಿಳಿಸಿ ನನಗೆ ಸಮಾಧಾನವನ್ನು ನೀಡು.

ಇತಿ, ೧೩೦೯ನೇ ವರ್ಷ, ಪೌಷ ೨೦ ರವಿವಾರ

(ಟಿಪ್ಪಣಿ: ಈ ಪತ್ರವನ್ನು ಬಹುಶಃ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದಿರಬೇಕು. ಪತ್ರದಲ್ಲಿ ಯಾವುದೇ ವಿಳಾಸವಿಲ್ಲ.)

ಪತ್ರ -೧೭

ಓಂ ರಾಮಕೃಷ್ಣ ಜಯತಿ

೧೫.೧.೧೯೦೩
೧೩೦೯ನೇ ವರ್ಷ
ಪೌಷ ೨೯, ಮಂಗಳವಾರ

ಮಗು,

ನಿನ್ನ ಪತ್ರ ಸಿಕ್ಕಿ ಎಲ್ಲವನ್ನೂ ತಿಳಿದುಕೊಂಡೆನು. ನಿನ್ನ ಎರಡು ಪತ್ರಗಳ ಜೊತೆ ಫೋಟೋಗ್ರಾಫ್ ಸಿಕ್ಕಿತು. ನನಗೂ ಅದರ ಮೇಲೆ ಸಂಪೂರ್ಣ ಇಚ್ಛೆ ಇತ್ತು. ನೀನು ಅದನ್ನು ಕಳುಹಿಸಿಕೊಟ್ಟಿರುವೆ. ಅದು ಸಿಕ್ಕಿ ನನಗೆ ತುಂಬಾ ಸಂತೋಷವಾಯಿತು. ನೀನು ಬರೆದಿರುವೆ, ನಿನಗೆ ಧ್ಯಾನ ಮಾಡುವಾಗ ತಲೆ ಕೆಟ್ಟು ಹೋಗುತ್ತಿದೆ ಎಂದು. ಆದ್ದರಿಂದ ಈಗ ನಾನು ಹೇಳುವುದೇನೆಂದರೆ, ಹೆಚ್ಚು ಜಪ ಮಾಡಿದರೆ ಕೊನೆಗೆ ಇನ್ನಷ್ಟು ತಲೆ ಕೆಟ್ಟು ಹೋಗುವುದು. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಮಾಡು. ಸ್ಮರಣ, ಮನನ ಮಾಡಬೇಕೆಂದು ಠಾಕುರ್ ಹೇಳುತ್ತಿದ್ದರು. ಭಗವಂತನನ್ನು ಪ್ರಾರ್ಥಿಸಬೇಕು. ಅದರಿಂದ ಎಲ್ಲ ರಕ್ಷಣೆಯೂ ಸಿಗುವುದು. ಅದೇ ರೀತಿ ಮಾಡು. ನಾನು ಸದ್ಯ ಚೆನ್ನಾಗಿದ್ದೇನೆ. ಮನೆಯಲ್ಲಿ



ಎಲ್ಲರೂ ಚೆನ್ನಾಗಿದ್ದಾರೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಕೊಲ್ಕತ್ತಾದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ ಸ್ಮರಣೆಗಳೊಂದಿಗೆ,

(ನಿನ್ನ ತಾಯಿ)

ಮತ್ತೆ ಶಾರದನ (ಸ್ವಾಮಿ ತ್ರಿಗುಣಾತೀತಾನಂದ) ಪತ್ರ ಸಿಕ್ಕಿತು. ಅವನು ಈಗ ಜಪಾನ್ ದೇಶಕ್ಕೆ ಹೋಗುತ್ತಿದ್ದಾನೆ. ಮಹಾ ಸಮುದ್ರದಲ್ಲಿ ಆರು ದಿನ ಹಗಲು-ರಾತ್ರಿ ಭಯಂಕರ ಬಿರುಗಾಳಿ ಮಳೆ ಇತ್ತು. ಅದರಿಂದ ಅವನಿಗೆ ತುಂಬಾ ಕಷ್ಟವಾಗಿತ್ತು.

(ಟಿಪ್ಪಣಿ: ಈ ಪತ್ರವನ್ನೂ ಬಹುಶಃ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದಿರಬೇಕು. ಪತ್ರದಲ್ಲಿ ಯಾವುದೇ ವಿಳಾಸವಿಲ್ಲ.)

ಪತ್ರ -೧೮

ಶ್ರೀ ಶ್ರೀ ಗುರುದೇವ ಕೃಪೆ

೭.೧೦.೧೯೦೩

ದೀರ್ಘಾಯುವಾಗು,

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತ,

ಮಗು, ನೀನು ಅಂಚೆಯ ಮೂಲಕ ಕಳುಹಿಸಿರುವ ವಸ್ತ್ರ (ಸೀರೆ) ಸಿಕ್ಕಿತು. ಕಾಮಾರಪುಕುರಿನ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ನಿನಗೆ ನನ್ನ ವಿಜಯದಶಮಿಯ ಆಶೀರ್ವಾದಗಳು. ವಸಂತ, ಸುರೇಶ ಮತ್ತು ಬ್ರಹ್ಮಚಾರಿ ಮೊದಲಾದವರಿಗೆಲ್ಲ ನನ್ನ ಆಶೀರ್ವಾದವನ್ನು ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮ . ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆ.

ಇತಿ ಆಶೀರ್ವಾದ ಪತ್ರ.

ನಿನ್ನ ತಾಯಿ.

ದಿನಾಂಕ ೧೫, ಆಶ್ವಯುಜ

ಇನ್ನು ಮೇಲೆ ಸೀರೆ ಕಳುಸಿಸುವಾಗ ಇಷ್ಟು ದೊಡ್ಡ ಅಂಚಿನ ಸೀರೆಯನ್ನು ಕಳುಹಿಸಬೇಡ. ಚಿಕ್ಕ ಅಂಚಿನ ಸೀರೆಯನ್ನು ಕಳುಹಿಸು. ಶಾರದನ (ಸ್ವಾಮಿ ತ್ರಿಗುಣಾತೀತಾನಂದ) ಭಾಷಣ ಕೇಳಿ ಸಂತೋಷವಾಯಿತು.

ಪತ್ರ ಪಡೆದವರ ಹೆಸರು ಮತ್ತು ವಿಳಾಸ:

Swami Ramakrishnananda
C/o M.N. Narayana Iyanger
To His Highness
The Yuvaraj of Mysore
Mysore

ಪತ್ರ - ೧೯

ಶ್ರೀ ಶ್ರೀ ಗುರುದೇವರ ಕೃಪೆ

೭ ಅಕ್ಟೋಬರ್, ೧೯೦೩

Postal Date

ಚಿರಂಜೀವಿಗೆ,

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತಾ,

ಮತ್ತೆ ಪ್ರೀತಿಯ ಮಗೂ, ನೀನು ಕಳುಹಿಸಿದ ಹಣ ಸಿಕ್ಕಿತು; ಎಲ್ಲಾ ಸಮಾಚಾರಗಳನ್ನು ತಿಳಿದುಕೊಂಡೆ. ಕೃಷ್ಣ ಕುಮಾರಿಯ ಪರವಾಗಿ ಕಳುಹಿಸಿದ ೫ ರೂಪಾಯಿ ಕೂಡ ಸಿಕ್ಕಿತು. ನೀನು ಕಳುಹಿಸಿರುವ ಪುಸ್ತಕವೂ ಲಭಿಸಿತು. ನಿನಗೆ ನನ್ನ ವಿಜಯದಶಮಿ ಆಶೀರ್ವಾದಗಳು. ನಿನ್ನ ಪತ್ರ ತ್ರಯೋದಶಿಯಂದು ಸಿಕ್ಕಿತು. ಸೊಸೆಗೆ (ಮಹೇಂದ್ರನಾಥರ ಪತ್ನಿ), ಮತ್ತು ಗಂಡುಮಕ್ಕಳಿಗೂ, ಹೆಣ್ಣುಮಕ್ಕಳಿಗೂ ನನ್ನ ವಿಜಯದಶಮಿಯ ಆಶೀರ್ವಾದಗಳನ್ನು ತಿಳಿಸು. ಸದ್ಯ ಆರೋಗ್ಯದಿಂದ ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆದು ತಿಳಿಸು.

ಆಶೀರ್ವಾದದೊಂದಿಗೆ,
ನಿನ್ನ ಶ್ರೀಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ:

ಮಹೇಂದ್ರನಾಥ ಗುಪ್ತ ('ಮ')

* * *

ಸ್ವಾಮಿ ರಾಮಕೃಷ್ಣಾನಂದರು ಮದ್ರಾಸಿನಲ್ಲಿದ್ದಾಗ ಆರಂಭದ ದಿನಗಳಲ್ಲಿ ಐಸ್ ಹೌಸ್‌ನಲ್ಲಿದ್ದರು. (ಹಿಂದೆ 'ಕ್ಯಾಸಲ್ ಕರ್ನನ್' ಎಂದು ಕರೆಯಲ್ಪಡುತ್ತಿದ್ದ, ಈಗ 'ವಿವೇಕಾನಂದರ್ ಇಲ್ಲಂ' ಎಂದು ಮರುನಾಮಕರಣಗೊಂಡಿರುವ ಸ್ಮಾರಕಭವನವಿದು.) ಆಗ ಅವರಿಗೆ ಶ್ರೀಮಾತೆಯವರು ಬರೆದ ಪತ್ರಗಳಿವು. ಸ್ವಾಮಿ ರಾಮಕೃಷ್ಣಾನಂದರು ಆಗತಾನೇ ಆರಂಭಗೊಂಡಿದ್ದ ತಮ್ಮ ಶಾಖೆಯ ಎಲ್ಲಾ ಚಟುವಟಿಕೆಗಳ ಬಗ್ಗೆ, ಹಾಗೂ ತಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ಶ್ರೀಮಾತೆಯವರಿಗೆ ತಿಳಿಸುತ್ತಿದ್ದರು. ಶ್ರೀಮಾತೆಯವರೂ ಅತ್ಯಂತ ಪ್ರೀತಿಯಿಂದ ಅವರಿಗೆ ಶ್ರೀರಾಮಕೃಷ್ಣರ ಭಾವಪ್ರಚಾರಕ್ಕೆ ಸ್ಫೂರ್ತಿಯನ್ನು ನೀಡಿ, ಜೊತೆಗೆ ತಮ್ಮ ಕೌಟುಂಬಿಕ ಸಮಸ್ಯೆಗಳನ್ನೂ ತಿಳಿಸಿ ಪತ್ರ ಬರೆಯುತ್ತಿದ್ದರು. ಅವುಗಳಲ್ಲಿ ಕೆಲವು ಪತ್ರಗಳು ಇಲ್ಲಿವೆ:

ಪತ್ರ -೨೦

ಶ್ರೀ ಶ್ರೀ ದುರ್ಗಾ ಕೃಪೆ
೮.೨.೧೯೦೫

ಚಿರಂಜೀವಿಗೆ,

ಪ್ರೀತಿಯ ಮಗೂ, ಈಗತಾನೇ ನಿಮ್ಮೆಲ್ಲರ ಕ್ಷೇಮ ಸಮಾಚಾರಗಳ ಪತ್ರ ಸಿಕ್ಕಿ, ಹಿಡಿಸಲಾರದಷ್ಟು ಸಂತೋಷವಾಯಿತು. ಠಾಕೂರರು ಈ ರೀತಿ (ನಿಮ್ಮನ್ನು) ಕೆಲಸಕ್ಕೆ ನೇಮಿಸಿರುವಾಗ ಅವರೇ ರಕ್ಷಿಸುತ್ತಾರೆ. ಮಗು ಕಾಳಿ ದೇವಸ್ಥಾನ ಕಟ್ಟಿಸಿದ್ದಾನೆ ಎಂದು ಕೇಳಿ ಸಂತುಷ್ಟಳಾದೆ. ಮತ್ತೆ ನಾನು ಅಲ್ಲಿಗೆ ಹೋಗುವ ಬಗ್ಗೆ ಬರೆದಿರುವೆ. ಈಗ ಯಾವ ತರಹದಲ್ಲೂ ನಿನ್ನಲ್ಲಿಗೆ ಹೋಗಲು ಸಾಧ್ಯವಿಲ್ಲ. ಕಾರಣ, ಇಲ್ಲಿ ತಮ್ಮಂದಿರನ್ನು ನೋಡಿಕೊಳ್ಳುವವರು ಬೇರೆ ಯಾರೂ ಇಲ್ಲ. ಅದಕ್ಕಾಗಿ ಕೆಲವು ದಿನ ನಾನು ಇಲ್ಲೇ ಇರಬೇಕಾಗಿದೆ. ಇಲ್ಲಿ ಕ್ಷೇಮ. ನಿಮ್ಮೆಲ್ಲರ ಸಮಾಚಾರ ಬರೆದು ತಿಳಿಸು.

ಇತಿ
೧೧ ಶ್ರಾವಣ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

Swamy Ramakrishnanda
Castle Kernan, Triplicane
Ice House, Madras

ಪತ್ರ -೨೧

ಶ್ರೀ ಶ್ರೀ ಹರಿ
೨೫.೧೦.೧೯೦೬
ವರ್ಷ ೧೩೧೩, ೮ನೇ ಕಾರ್ತಿಕ

ಸುರಕ್ಷಿತವಾಗಿರು.

ಪರಮ ಆಶೀರ್ವಾದಗಳೊಂದಿಗೆ ವಿಶೇಷವೇನಂದರೆ,

ಪ್ರೀತಿಯ ಮಗನ (?) ಪತ್ರ ಸಿಕ್ಕಿ ಸಮಾಚಾರ ತಿಳಿದುಕೊಂಡೆ. ನೀನಂತೂ ಮೀನು, ಮಾಂಸ ತಿನ್ನುವ ಬಗ್ಗೆ ಬರೆದಿರುವೆ. ನಾನು ಅನುಮತಿಯನ್ನು ಕೊಡುತ್ತಿದ್ದೇನೆ.ಇದರಿಂದ ಯಾವ ದೋಷವೂ ಉಂಟಾಗುವುದಿಲ್ಲ. ನೀನು ಮೀನು, ಮಾಂಸ ತಿನ್ನಬಹುದು.

ನಿಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಯಾವಾಗಲೂ ಬರೆ.

ಇತಿ, ನನ್ನ ಆಶೀರ್ವಾದ ಎಲ್ಲಾ ಭಕ್ತ ವೃಂದದವರಿಗೆ ತಿಳಿಸು.

ಆಶೀರ್ವಾದದೊಂದಿಗೆ — ಶ್ರೀಮಾತೆ.


ಪತ್ರ ಪಡೆದವರ ಹೆಸರು ಮತ್ತು ವಿಳಾಸ

Swamy Ramakrishnanda
Castle Kernan, Triplicane, Madras.


ಪುಸ್ತಕ ಪರಿಚಯ

ಕವನಗಳ ಮಾಲೆ – ಕಥನ ಕಾವ್ಯ

ಗಜಾನನ ಈಶ್ವರ ಹೆಗಡೆಯವರ ಎರಡು ಕೃತಿಗಳು



ಕೃತಿ : **ರಸರಾಮಾಯಣ – ಎದೆಯ ಮೊಗ್ಗರಳಿ**
ಲೇಖಕರು :
ಗಜಾನನ ಈಶ್ವರ ಹೆಗಡೆ
ಪ್ರಕಾಶಕರು : **ಶ್ರೀ ಸದ್ಗುರು ಪ್ರಕಾಶನ, ಹೊದಿಗೆರೆ, ಚೆನ್ನಗಿರಿ ತಾಲೂಕು, ಚಿತ್ರದುರ್ಗ-577215**
ಪುಟಗಳು : **300**
ಬೆಲೆ : **300/-(ಕ್ಯಾಲಿಕೊ ಪ್ರತಿ)**
200/-(ಸಾದಾ ಪ್ರತಿ)



ಕೃತಿ : **ಲೋಕ ಶಂಕರ**
ಲೇಖಕರು :
ಗಜಾನನ ಈಶ್ವರ ಹೆಗಡೆ
ಪ್ರಕಾಶಕರು :
ಜಿ.ಎಸ್.ಎಲ್. ಪ್ರಕಾಶನ ನಂ. 1365, 2ನೇ ಮುಖ್ಯ ರಸ್ತೆ, 5ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು-570004
ಪುಟಗಳು : **120**
ಬೆಲೆ : **100/-**

ಇಡೀ ರಾಮಾಯಣವನ್ನು ಹಲವು ಕವನಗಳ ಒಂದು ಗುಚ್ಛವಾಗಿಯೂ, ಬಿಡಿ ಬಿಡಿ ಕವನಗಳ ಮೂಲಕ ವಿಸ್ತಾರವಾದ ಕಥೆ ಮುಂದುವರಿಯುವಂತೆಯೂ ಕಾವ್ಯ ರಚಿಸಿದರೆ ಹೇಗಿರುತ್ತದೆ? ಅಂತಹ ಒಂದು ಸುಂದರ ಪ್ರಯತ್ನವೇ ಗಜಾನನ ಈಶ್ವರ ಹೆಗಡೆಯವರ '**ರಸರಾಮಾಯಣ – ಎದೆಯ ಮೊಗ್ಗರಳಿ**' ಎಂಬ ಕೃತಿ.

ಸಾಮಾನ್ಯವಾಗಿ ಎಲ್ಲರಿಗೂ ರಾಮಾಯಣದ ಕಥೆ ಗೊತ್ತೇ ಇದೆ. ಅದನ್ನು ಆದ್ಯಂತವಾಗಿ ನಿರೂಪಿಸದೆ, ಕೆಲವು ಘಟನೆಗಳನ್ನು ಮಾತ್ರ ನೆಪವಾಗಿಟ್ಟುಕೊಂಡು, ಅಲ್ಲಿನ ಭಾವವನ್ನು ಕವಿತೆಯನ್ನಾಗಿಸಿ ಬರೆದ ರಚನೆಗಳಿವು. ಒಂದು ರೀತಿಯಲ್ಲಿ ಈ ಕೃತಿಯಲ್ಲಿನ ನಿರೂಪಣಾಶೈಲಿಯನ್ನು 'ಭಾವಯಾನ' ವೆನ್ನಬಹುದು. ಘಟನೆಗಳಿಗಿಂತ ಒಂದೊಂದು ಭಾವ ಮುಖ್ಯ; ಘಟನೆ ಅಥವಾ ಸನ್ನಿವೇಶ ಹಿನ್ನೆಲೆಯಾಗಿದ್ದುಕೊಂಡು, ಭಾವ ಮುನ್ನೆಲೆಗೆ ಬರುವಂತೆ ಈ ಕವಿತೆಗಳು ಕೆಲಸ ಮಾಡುತ್ತವೆ. ಒಂದೊಂದು ಕವಿತೆಗಳೂ ಬಿಡಿ ಹೂಗಳಂತೆ – ಪ್ರತ್ಯೇಕ ಪ್ರತ್ಯೇಕವಾಗಿ ಅವು ಸುಗಂಧವನ್ನು ಬೀರಿಯೇ ಬೀರುತ್ತವೆ. ಆದರೆ ಅವುಗಳು ರಾಮಾಯಣ ಮಹಾಕಾವ್ಯದ ದಿವ್ಯಚರಿತೆಯನ್ನು ಬಿಟ್ಟಿರುವುದಿಲ್ಲ, ಅದರ ಪ್ರಬಂಧ ಧ್ವನಿಯತ್ತ ಕರೆದೊಯ್ಯುವ ಭಾವ ಪುಷ್ಪಗಳಾಗುತ್ತವೆ. ಸಂಪೂರ್ಣ ಕೃತಿಯು ಒಂದು ಸುಂದರ ಮಲ್ಲಿಗೆ ಮಾಲೆಯಂತೆ ನಿರಂತರ ಪರಿಮಳವನ್ನು ಬೀರುತ್ತಿರುತ್ತದೆ. ಪ್ರತಿ ಕವನಗಳ ಕೊನೆಯಲ್ಲಿ ಬರುವ 'ಎದೆಯ ಮೊಗ್ಗರಳಿ ಮಧು ದ್ರವಿಸಲಿ' ಎಂಬುದು ಕವಿಯ ಹಾರೈಕೆಯೋ, ರಸಯಾನದಲ್ಲಿ ಹೃದಯಗಳು ಭವ್ಯತೆಗೇರಲು ಮಾಡುವ ಪ್ರಾರ್ಥನೆಯೋ!

ಲೇಖಕರ ಅರಿಕೆ, ಕವಿ ಡಾ. ಹೆಚ್.ಎಸ್ ವೆಂಕಟೇಶಮೂರ್ತಿಯವರ ಮುನ್ನುಡಿ, ಕೊನೆಯಲ್ಲಿ ಬರುವ ಟಿಪ್ಪಣಿಗಳು, ಭಾವಗಳಿಗೆ ಸಂವಾದಿಯಾಗಿ ಬರುವ ರೇಖಾಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿವೆ. ಮನೆಯಲ್ಲಿ ಇಟ್ಟುಕೊಂಡು ಆಗಾಗ ಮೆಲುಕು ಹಾಕಬಹುದಾದ ಅತ್ಯಪೂರ್ವವಾದ ಕೃತಿರತ್ನವಿದು.

'**ಲೋಕ ಶಂಕರ**' ಈ ಕೃತಿಯೂ ರಸರಾಮಾಯಣದಂತೆಯೇ ಹಲವು ಬಿಡಿ ಕವನಗಳ ಒಂದು ಸಮುಚ್ಚಯವಾದರೂ, ಇದರ ರಚನೆ, ಭಾವ, ಸಂಯೋಜನೆಗಳು ತುಸು ಭಿನ್ನವಾಗಿದೆ. ಶ್ರೀಶಂಕರರ ಬಾಲ್ಯದ ಘಟನೆಗಳನ್ನು ಆಧರಿಸಿ ಬರೆದ ಈ ಕವಿತೆಗಳು ಗಾತ್ರದಲ್ಲಿ ತುಸು ದೀರ್ಘ; ಕಥನಶೈಲಿಯಲ್ಲೂ ತುಸು ವಿವರಣಾತ್ಮಕವಾಗಿದೆ. ಇಲ್ಲಿನ ಕವನಗಳು ಬಹುತೇಕ ಹಾಡುಗಳು, ಛಂದೋಲಯ ಬದ್ಧವಾದ ರಚನೆಗಳು. ಚಾರಿತ್ರಿಕ ಆಕರಗಳ ಅಭಾವವಿದ್ದರೂ, ಶ್ರೀಶಂಕರರ ಬಾಲ್ಯದ ಘಟನೆಗಳಿಗೆ ಸಾಮಾನ್ಯ ಬದುಕಿನ ಹಲವು ಚಿತ್ರಗಳನ್ನು ಕಲ್ಪಿಸಿ ಜೋಡಿಸಿರುವುದು ಕವಿಯ ಕಾಲ್ಪನಿಕ ಸಂಪನ್ನತೆಯನ್ನೂ ಸ್ವತಂತ್ರ ಆಲೋಚನೆಯ ಸೌಂದರ್ಯ ಪ್ರಜ್ಞೆಯನ್ನೂ ಸೂಚಿಸುತ್ತದೆ. 'ಸಂನ್ಯಾಸ ಸ್ವೀಕಾರ' ಎಂಬ ಹಾಡಿನಲ್ಲಿ ಬರುವ ಒಂದು ಚಿತ್ರಣ ಈ ಅಂಶವನ್ನು ತೋರಿಸಿಕೊಡಬಲ್ಲುದು:

'ಜೋರಲಿ ಅರಚುತ ನೀರನು ತುಯ್ಯುತ
ಮುಳುಗಿ ನೀರಿನಲಿ ಕದ್ದಡ್ಡಾಡುತ
ಉಬ್ಬಿಳಿಯುವ ಅಲೆ ಅಲೆಯಲಿ ತೇಲಿ
ದಣಿವರಿಯದೆ ಈಜಿದರೈ ಬಾಲರು ..

'ಅಮ್ಮಾ ಮಕರವು ಕಾಲನು ಹಿಡಿದು
ಭವ ಬಂಧನವನೆ ಕಡಿದಿತ್ತು
ಸಾಯುವ ಕ್ಷಣ ಎಚ್ಚರಿಸಿ ವಿವೇಕವು
ಮುಕ್ತಿಯ ವಸನವ ತೊಡಿಸಿತ್ತು'

ದಿವ್ಯಪುರುಷರ ಬಾಲ್ಯಲೀಲೆಗಳು ನಮಗೆ ಆತ್ಮೀಯವಾಗುವುದು ಅವರ ಅತಿಮಾನುಷ ದೈವೀಗುಣಗಳೊಂದಿಗೆ ಬೆರೆತ ಮಾನವೀಯ, ಸಹಜ-ಸಾಧಾರಣ ಕ್ರಿಯೆಗಳಿಂದ. ಶ್ರೀರಾಮ, ಶ್ರೀಕೃಷ್ಣರ ಕಥೆಗಳಂತೆ ಶ್ರೀಶಂಕರರ ಜೀವನವು ಪಾವನವೂ, ದಿವ್ಯವೂ ಆಗಿದ್ದರೂ ಅವರು ಎಲ್ಲೋ ದೂರದ ವ್ಯಕ್ತಿಗಳಾಗಿರದೆ, ನಮ್ಮ ನಡುವೆಯೇ ಬೆಳೆದ ಒಂದು ಮಗುವಿನಂತೆ ಇಲ್ಲಿ ಚಿತ್ರಿಸಲಾಗಿದೆ ಇದೇ ಈ ಕೃತಿಯ ವಿಶೇಷತೆಯಾಗಿದೆ.

ಅರಣ್ಯಮಾಲಿ ರೈನಾ

ಪ್ರೀತಿಯ ತಾಯಿ

ಸಂಗ್ರಹ: **ಸ್ವರ್ಣಗೌರಿ**



ಅರಣ್ಯಮಾಲಿಯು ಪಂಡಿತ ನಾರಾಯಣದಾಸ ರೈನಾರ ಪತ್ನಿ. ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದು, ಮತ್ತು ಬರೆಯುವುದು, ಪಾಶ್ಚಾತ್ಯ ಉಡುಪು ಧರಿಸುವುದು, ದ್ವಿಚಕ್ರ ವಾಹನ ಉಪಯೋಗಿಸುವುದು, ಇತ್ಯಾದಿ ಸಾಹಸಗಳನ್ನು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಮಾಡಿದ ಪ್ರಥಮ ಕಾಶ್ಮೀರಿ ಪಂಡಿತ ನಾರಾಯಣದಾಸ ರೈನಾ. ಇಂತಹ ಪಂಡಿತರು ಸ್ವಾಮಿ ವಿವೇಕಾನಂದರ ಆರಾಧಕರೂ ಆಗಿದ್ದರು. ಸ್ವಾಮೀಜಿ ಒಮ್ಮೆ ಅವರ ಮನೆಗೆ ಭೇಟಿ ನೀಡಿದಾಗ ಅವರ ಮೇಲೆ ಪುಷ್ಪವೃಷ್ಟಿಗೈದು, ಹೂವಿನ ಮಾಲೆಯಿಂದ ಅವರನ್ನು ಸಿಂಗರಿಸಿದ್ದರು. ನೆರೆದ ಪಂಡಿತರೆಲ್ಲರೂ ಸ್ವಾಮೀಜಿ ಪಾಶ್ಚಾತ್ಯ ದೇಶಗಳಲ್ಲಿ ವೇದಾಂತದ ಸಂದೇಶವನ್ನು ಸಾರಿದ್ದನ್ನು ಕುರಿತು ಮನ ತುಂಬಿ ಶ್ಲಾಘಿಸಿದರು. ಸ್ವಾಮೀಜಿಯವರ ಶ್ರೀಮುಖದಿಂದ ವೇದಾಂತವನ್ನು ಕೇಳಲು ಅವರು ಇಚ್ಛಿಸಿದರು. ಸ್ವಾಮೀಜಿ ಮುಂಡಕೋಪನಿಷತ್ತಿನಿಂದ ಕೆಲವು ಮಂತ್ರಗಳನ್ನು ಪಠಿಸಿ, ಅದನ್ನು ವಿವರಿಸಿದಾಗ ಪಂಡಿತರೆಲ್ಲರೂ ಅವರ ಅಪಾರ ಜ್ಞಾನವನ್ನು ಕಂಡು ಬೆರಗಾದರು!

ಅರಣ್ಯಮಾಲಿಯು ಸ್ವಾಮಿಗಳ ಭೋಜನಕ್ಕೆಂದು ಅತ್ಯಂತ ಭಕ್ತಿ-ಶ್ರದ್ಧೆಗಳಿಂದ ವಿವಿಧ ಭಕ್ಷ್ಯಗಳನ್ನು ತಯಾರಿಸಿದ್ದಳು. ಸ್ವಾದಿಷ್ಟವಾದ ಅಕ್ಕಿ ಪಾಯಸವು ಸ್ವಾಮೀಜಿಗೆ ಮೆಚ್ಚುಗೆಯಾಯಿತು. ಇದಕ್ಕಾಗಿ ಆಕೆಯನ್ನು ಮನಃಪೂರ್ವಕವಾಗಿ ಅಭಿನಂದಿಸಿದರು. ಅರಣ್ಯಮಾಲಿಯ ಸಂಸಾರನೌಕೆಯು ಸುಗಮವಾಗಿ ಸಾಗುವ ಹಾದಿಯಲ್ಲಿ ಒಂದೇ ಒಂದು ಕೊರತೆಯಿದ್ದಿತು. ಯಾವುದೇ ಶುಶ್ರೂಷೆಗೂ ಜಗ್ಗದ ತಲೆನೋವಿನ ಬಾಧೆಯಿಂದ ಆಗಾಗ್ಗೆ ಆಕೆ ನರಳುತ್ತಿದ್ದಳು. ಸ್ವಾಮೀಜಿಯವರ ನಿರ್ಗಮನಕ್ಕೆ ಮುಂಚೆ ನಾರಾಯಣದಾಸರು ಈ ವಿಷಯವನ್ನು ಅವರಿಗೆ ತಿಳಿಸಿ, ಆಕೆಯನ್ನು ಆಶೀರ್ವದಿಸಲು ಅವರ ಬಳಿ ಪ್ರಾರ್ಥಿಸಿದರು. ಕೆಲಹೊತ್ತು ಮೌನವಾಗಿದ್ದ ಸ್ವಾಮೀಜಿ, ನಂತರ ತಮ್ಮ ಹಸ್ತವನ್ನು ಆಕೆಯ ಮಸ್ತಕದ ಮೇಲಿರಿಸಿದರು. ಮುಂದೆಂದೂ ಅರಣ್ಯಮಾಲಿಯು ತಲೆನೋವಿನಿಂದ ನರಳಲಿಲ್ಲ! ಅಷ್ಟೇ ಅಲ್ಲದೆ ಸ್ವಾಮೀಜಿ, ದಿವ್ಯ ಶಿಶು ಶಿವಯೋಗಿ ಲಕ್ಷ್ಮಣ್ ಜೂ ಜನನದ ಕುರಿತಾಗಿಯೂ ಭವಿಷ್ಯ ನುಡಿದರು.

ಆ ದಂಪತಿಗಳ ಶ್ರದ್ಧೆ, ಭಕ್ತಿ, ನಿಷ್ಠೆಗಳಿಂದ ಪ್ರಭಾವಿತರಾದ ಸ್ವಾಮೀಜಿ ಇದ್ದಕ್ಕಿದ್ದಂತೆ, ''ರೈನಾಜಿ, ಭಗವಂತನ ಕೃಪಾಶೀರ್ವಾದವು ನಿಮ್ಮ ಮೇಲೆ ಉಂಟಾಗಿದೆ. ನಿಮ್ಮ ಮನೆಯನ್ನು ದೇಗುಲವನ್ನಾಗಿ ಮಾರ್ಪಡಿಸಿರುವಿರಿ. ಈ ಮನೆಯು ದಿವ್ಯ ಶಿಶುವಿನ ಜನನಕ್ಕೆ ಸೂಕ್ತವಾಗಿದೆ'' ಎಂದು ಉದ್ಗರಿಸಿದರು. ಈ ಘಟನೆಯಾದ ಒಂಬತ್ತು ವರ್ಷಗಳ ನಂತರ, ಮೊದಲ ಮಗುವಿನ ಜನನದ ೧೭ ವರ್ಷಗಳ ನಂತರ, ಸ್ವಾಮಿ ಲಕ್ಷ್ಮಣ್ ಜೂವಿನ ಜನನವಾಯಿತು. ಬಾಲ್ಯದಿಂದಲೇ ಲಕ್ಷ್ಮಣ್‌ಜೂ ಸದಾ ಧ್ಯಾನ, ಸಮಾಧಿಗಳಲ್ಲೇ ಮಗ್ನರಾಗಿರುತ್ತಿದ್ದನು. ಸಂನ್ಯಾಸವನ್ನು ಸ್ವೀಕರಿಸಿದ ಈ ಬಾಲಕ ಮುಂದೆ ಭಾರತ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಅನೇಕರಿಗೆ ಆಧ್ಯಾತ್ಮಿಕ ಜೀವನದಲ್ಲಿ ದಾರಿದೀಪವಾದನು. ಸರಳತೆಯ ಸಾಕಾರವಾದ ಭಕ್ತಿಮತಿ ಅರಣ್ಯಮಾಲಿ ಸಾಧು, ಸಂನ್ಯಾಸಿಗಳ ಸೇವೆಗೆಂದೇ ಜೀವನವನ್ನು ಮುಡಿಪಾಗಿಟ್ಟಿದ್ದಳು. ಸಾಧುಗಳನ್ನು ಮನೆಗೆ ಆಹ್ವಾನಿಸಿರೆಂದು ಪತಿಯನ್ನು ಬೇಡಿಕೊಳ್ಳುತ್ತಿದ್ದಳು. ಅವರುಗಳಿಗೆ ಮೃಷ್ಟಾನ್ನ ಭೋಜನವಿತ್ತು ಅತ್ಯಂತ ಶ್ರದ್ಧಾಭಕ್ತಿಗಳಿಂದ ಅವರ ಸೇವೆ ಮಾಡುತ್ತಿದ್ದಳು. ಬಡಬಗ್ಗರ, ದೀನದುಃಖಿಗಳ ಸೇವೆಯನ್ನು ಉದಾರ ಮನಸ್ಸಿನಿಂದ ಮಾಡುತ್ತಿದ್ದಳು. ಕ್ರಿ.ಶ. ೧೯೦೦ರಲ್ಲಿ ಭೀಕರ ಬಿರುಗಾಳಿಯಿಂದ ಕಾಶ್ಮೀರಿ ಜನರ ಜೀವನದಲ್ಲಿ ಹಾನಿಯುಂಟಾಯಿತು. ಅರಣ್ಯಮಾಲಿ ಆ ಸಮಯದಲ್ಲಿ ನಿರಾಶ್ರಿತರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವ ಮೂಲಕ ಸೇವೆ ಸಲ್ಲಿಸಿದಳು.

''ನಾವು ಭರತಖಂಡದ ಕಾರ್ಯರಂಗಕ್ಕೆ ನಿರ್ಭೀತರಾದ ಮಹಾ ಸ್ತ್ರೀಯರನ್ನು ತರಬೇತು ಮಾಡಬೇಕು... ಮಹಾನಾಯಕರ ತಾಯಂದಿರಾಗುವುದಕ್ಕೆ ಯೋಗ್ಯರಾಗಿರಬೇಕು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೭, ಪು. ೪೫೩)*

ಅನುಭಾವಿ ರವಿದಾಸರು

ಸ್ವಾಮಿ ವೀರೇಶಾನಂದ



ಭಾರತದ ಇತಿಹಾಸದಲ್ಲಿ ೧೫-೧೬ನೆಯ ಶತಮಾನದಲ್ಲಿ ನಡೆದ ಭಕ್ತಿ ಆಂದೋಲನವು ಪ್ರಮುಖವಾದುದು. ಈ ಆಂದೋಲನವು ಇಂದಿನ ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಹಾರಾಷ್ಟ್ರಗಳಲ್ಲಿ ಮುಖ್ಯವಾಗಿ ಜರುಗಿತು. ಅನೇಕ ಸಂತರು, ಮಹಾತ್ಮರು ಇದರ ರೂವಾರಿಗಳಾಗಿದ್ದರು. ಇವರಲ್ಲಿ ರವಿದಾಸರೂ ಒಬ್ಬರು. ಹುಟ್ಟಿನಿಂದ ಚಮ್ಮಾರರಾದರೂ ಭಕ್ತಿಯಿಂದ ಮಹಾನ್ ಸಂತರಾಗಿ ಬೆಳೆದ ಈ ಪುಣ್ಯಪುರುಷನ ಕಥೆ ಮಂಗಳಪ್ರದವಾದುದು, ಮನಸ್ಸನ್ನು ಪರಿಶುದ್ಧ ಮಾಡುವಂಥದ್ದು. ಅಲ್ಲದೆ, ರವಿದಾಸರನ್ನು ಸಿಖ್ ಪಂಗಡದವರೂ ಪೂಜ್ಯಭಾವನೆಯಿಂದ ನೋಡುತ್ತಾರೆ; ಭಗವದ್ಭಕ್ತರೆಂದು ಕೊಂಡಾಡುತ್ತಾರೆ. ಅವರ ಹಲವಾರು ರಚನೆಗಳು ಸಿಖ್ ಧರ್ಮದ ಪುಣ್ಯಗ್ರಂಥವಾದ 'ಗುರು ಗ್ರಂಥ ಸಾಹಿಬ್'ನಲ್ಲಿ ಅಡಕವಾಗಿವೆ.

ಬಾಲ್ಯ ಮತ್ತು ಯೌವನ

ರವಿದಾಸರು ಹುಟ್ಟಿದ್ದು ಕ್ರಿ.ಶ. ೧೩೭೭ ನೆಯ ಇಸವಿಯಲ್ಲಿ. ಅವರ ಜನ್ಮಸ್ಥಾನ ಪವಿತ್ರ ಕಾಶಿ ನಗರದ ಸನಿಹದಲ್ಲಿಯೇ ಇರುವ ಶ್ರೀ ಗೋವರ್ಧನಪುರ ಎಂಬ ಚಿಕ್ಕ ಗ್ರಾಮ. ತಂದೆಯ ಹೆಸರು ಸಂತೋಖ್ ದಾಸ್; ತಾಯಿ ಕಲಸೀ ದೇವಿ.

ರವಿದಾಸರ ತಂದೆ ಚರ್ಮದ ಮಾರಾಟಗಾರರು. ಸ್ಥಿತಿವಂತರು. ರವಿದಾಸ ಕೇವಲ ಐದು ದಿನಗಳ ಮಗುವಾಗಿದ್ದಾಗ, ಭಕ್ತಿ ಆಂದೋಲನದ ಮುಖ್ಯ ಪ್ರವರ್ತಕರಾದ ರಾಮಾನಂದರು ಅವರ ಮನೆಗೆ ಭೇಟಿಕೊಟ್ಟರು. ಮಗುವನ್ನು ಆಶೀರ್ವದಿಸಿದರು. ಮಗನು ಬೆಳೆದು ದೊಡ್ಡವನಾದನು. ಕುಟುಂಬದ ಉದ್ಯೋಗವನ್ನು ಕೈಗೊಳ್ಳುವಂತೆ ತಂದೆ ಪ್ರೇರೇಪಿಸಿದನು. ರವಿದಾಸನದು ವೈರಾಗ್ಯ ಪ್ರವೃತ್ತಿ. ಅವನು ಮಾನವೀಯತೆಯ ಗುಣಗಳಿಂದ ಕೂಡಿದ್ದನು. ವಾಣಿಜ್ಯ ವ್ಯವಹಾರಕ್ಕಾಗಿ ತಂದೆ ಕೊಟ್ಟ ಹಣವನ್ನು ಸಂತರು ಮತ್ತು ಬಡವರಿಗೆ ಹಂಚಿಬಿಟ್ಟನು. ಇದರಿಂದ ಅವನ ತಂದೆಗೆ ಬಹಳ ಕೋಪಬಂತು. ಮಗನನ್ನು ಮನೆಯಿಂದ ಓಡಿಸಿಬಿಟ್ಟನು. ರವಿದಾಸನು ತಂದೆಯ ವಿರುದ್ಧ ಯಾವ ಕೋಪತಾಪವನ್ನೂ ತಾಳದೆ, ಮನೆಯಿಂದ ಹೊರಟುಹೋದನು. ಇಷ್ಟರ ಒಳಗೆ ರವಿದಾಸನಿಗೆ ಮದುವೆಯಾಗಿತ್ತು. ಅವನು ತನ್ನ ಹೆಂಡತಿ ಲೋನಾಳ ಜೊತೆಗೆ ಒಂದು ಸಣ್ಣ ಗುಡಿಸಿಲಿನಲ್ಲಿ ತಂಗಿದನು. ದಾರಿಬದಿಯಲ್ಲಿ, ಚಪ್ಪಲಿಗಳನ್ನು ಹೊಲಿಯುವ ಗೂಡಂಗಡಿಯನ್ನು ಮಾಡಿಕೊಂಡು, ತನ್ನ ಕಾಯಕವನ್ನು ಆರಂಭಿಸಿದನು.

ಕಾಯಕವೇನೇ ಇರಲಿ, ಅವನ ಮನಸ್ಸು ಭಗವಂತನ ಆನಂದದಿಂದ ತುಂಬಿಹೋಗಿತ್ತು. ತನ್ನ ಕಾವ್ಯಧಾರೆಯ ಮೂಲಕ ಅದನ್ನು ಅವನು ವ್ಯಕ್ತಪಡಿಸುತ್ತಿದ್ದನು. ಮಣ್ಣಿನಲ್ಲಿಯೇ ಒಂದು ಮಂದಿರವನ್ನು ಕಟ್ಟಿದನು. ಹುಲ್ಲಿನ ಛಾವಣಿಯನ್ನು ನಿರ್ಮಿಸಿದನು. ಚರ್ಮದ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಿದನು. ಅವನ ಅಪೂರ್ವ ಭಕ್ತಿ ಮತ್ತು ಉದಾರ ಮಾನವೀಯ ಪ್ರೇಮಗಳಿಂದ ನೂರಾರು ಜನರು ಅವನೆಡೆಗೆ ಆಕರ್ಷಿತರಾದರು.

ಆಧ್ಯಾತ್ಮಿಕ ಚೇತನವಾಗಿ ರವಿದಾಸರು

ಇದರಿಂದ ಅಲ್ಲಿನ ಸಂಪ್ರದಾಯಸ್ಥ ಬ್ರಾಹ್ಮಣರು ಕೋಪಗೊಂಡರು. ಹೊಟ್ಟೆಕಿಚ್ಚಿನಿಂದ ಕಾಶಿಯ ರಾಜನಾದ ನಗರಮಲ್‌ನಿಗೆ ದೂರುಕೊಟ್ಟರು. ಕೀಳುಕುಲದಲ್ಲಿ ಹುಟ್ಟಿದ ಶೂದ್ರನೊಬ್ಬನು ವಿಗ್ರಹಾರಾಧನೆ ಮಾಡುವುದು ಮಹಾನ್ ಅಪರಾಧ ಎಂದು ಅವರು ರಾಜನಿಗೆ ಮನವಿ ಸಲ್ಲಿಸಿದರು. ರಾಜ ನ್ಯಾಯಭೀರು. ರವಿದಾಸರಿಗೆ ವಿವರಣೆ ನೀಡುವಂತೆ ಕೇಳಿಕೊಂಡನು. ರವಿದಾಸರು ಬಹಳ ವಿನಯದಿಂದಲೇ ಉತ್ತರಿಸಿದರು: ''ಜಾತಿ-ಮತಗಳು ಮನುಷ್ಯನು ಸೃಷ್ಟಿಸಿದ್ದೇ ಹೊರತು, ಭಗವಂತ ಸೃಜಿಸಿದ್ದಲ್ಲ. ಹೀಗಾಗಿ ಭಗವಂತನನ್ನು ಪೂಜಿಸುವುದಕ್ಕೆ ಯಾವ ನಿರ್ಬಂಧವೂ ಇಲ್ಲ'' ಎಂಬ ವಿವರಣೆಯನ್ನು ನೀಡಿದರು.

ರಾಜನು ಇದರ ನಿರ್ಧಾರವನ್ನು ಭಗವಂತನಿಗೇ ಬಿಟ್ಟು ಬಿಟ್ಟನು. ದೇವರ ವಿಗ್ರಹವನ್ನು ದರ್ಬಾರ್ ಹಾಲಿನ ಮಧ್ಯದಲ್ಲಿ ಇರಿಸಿದನು. ಇಬ್ಬರು ಪಕ್ಷದವರಿಗೂ ತಮ್ಮ ಭಕ್ತಿಯ ಶಕ್ತಿಯ ಮೂಲಕ ಭಗವಂತನನ್ನು ಆಕರ್ಷಿಸುವಂತೆ ಕೇಳಿಕೊಂಡನು. ಬ್ರಾಹ್ಮಣ ಪುರೋಹಿತರು ತಮ್ಮ ಮಂತ್ರೋಚ್ಚಾರಣೆ ಮತ್ತು ವೇದ ಪಾರಾಯಣಗಳ ಮೂಲಕ ಭಗವಂತನನ್ನು ಸೆಳೆಯಲು ಪ್ರಯತ್ನಿಸಿದರು. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಇದಾದ ಮೇಲೆ ರವಿದಾಸರು ಮುಂದೆ ಬಂದರು. ಭಕ್ತಿಭಾವದಿಂದ ಈ ಕೆಳಗಿನ ಗೀತೆಯನ್ನು ಹಾಡಿದರು:

'ಪ್ರಭೂ, ನನ್ನ ಜೀವನವು ತಪ್ಪು ಮಾರ್ಗದಲ್ಲಿ ಸಾಗದಂತೆ ಮಾಡದಿರು. ನೀನೋ, ದೂರದಲ್ಲಿ ನಿಂತು ಸಾಕ್ಷಿಯಾಗಿ ನೋಡುತ್ತಿರುವೆ. ಆದರೆ ಇಲ್ಲಿ, ಕಾಶಿಯಲ್ಲಿ ಜನಗುಂಗುಳಿ ನೆರೆದಿದೆ. ಭಕ್ತರ ಸಭೆ ಕೂಡಿದೆ. ದಯವಿಟ್ಟು ದೀನರಕ್ಷಕ ಮತ್ತು ದರಿದ್ರಪಾಲಕನೆಂಬ ನಿನ್ನ ಕೀರ್ತಿಯನ್ನು ಉಳಿಸಿಕೋ. ಹೀಗೆಂದು ಈ ಬಡ ಚಮ್ಮಾರ ರವಿದಾಸ ಬೇಡಿಕೊಳ್ಳುತ್ತಿದ್ದಾನೆ.

' ಓ ದೇವರ ದೇವ! ನಾನು ನಿನ್ನ ಆಶ್ರಯವನ್ನು ಪಡೆದಿದ್ದೇನೆ. ನನ್ನನ್ನು ನಿನ್ನವನೆಂದೇ ಭಾವಿಸಿ ದಯವಿಟ್ಟು ನನ್ನ ಮೇಲೆ ಕರುಣೆಯನ್ನು ತೋರಿಸು. ನಿನ್ನ ನಾಮದಲ್ಲಿ ನಂಬಿಕೆಯನ್ನು ಇಟ್ಟು, ನಾನು ಬೇರೆಲ್ಲದರಲ್ಲೂ ಆಸೆಯನ್ನು ಬಿಟ್ಟುಬಿಟ್ಟಿದ್ದೇನೆ. ಪ್ರಾಪಂಚಿಕ ಆಚರಣೆಗಳಲ್ಲಿ ನನಗೆ ಯಾವ ಸಮಾಧಾನವೂ ಸಿಗುತ್ತಿಲ್ಲ. ನಿನ್ನ ದಾಸನಾದ ರವಿದಾಸನ ಸೇವೆಯನ್ನು ದಯವಿಟ್ಟು ಸ್ವೀಕರಿಸು, ಪ್ರಭೂ!'

ಹೃದಯಂಗಮವಾದ ಪ್ರಾರ್ಥನೆ ಇದಾಗಿತ್ತು. ಪ್ರಾರ್ಥನೆ ಮುಗಿದೊಡನೆ, ಭಗವಂತನ ವಿಗ್ರಹವು ಗುರು ರವಿದಾಸರ ಹತ್ತಿರ ತಾನೇತಾನಾಗಿ ಬಂದು ತೊಡೆಯ ಮೇಲೆ ಕುಳಿತುಕೊಂಡಿತು. ಇಷ್ಟು ಮಾತ್ರವಲ್ಲ, ರವಿದಾಸರು ತಮ್ಮ ಎದೆಯ ಚರ್ಮವನ್ನು ಹರಿದು, ಹೃದಯಲ್ಲಿರುವ ನಿಜವಾದ ಹೊಳೆಯುವ ಬಂಗಾರದ ಜನಿವಾರವನ್ನು ತೋರಿಸಿದರಂತೆ. ಹೃದಯದಲ್ಲಿರುವ ಜ್ಞಾನದ ಬೆಳಕೇ ನಿಜವಾದ ಯಜ್ಞೋಪವೀತವಾಗಿದೆ; ಹೊರಗಡೆ ಹಾಕಿಕೊಳ್ಳುವ ದಾರದ ಜನಿವಾರವಲ್ಲ ಎಂದು ತೋರಿಸಿಕೊಡುವುದು ರವಿದಾಸರ ಉದ್ದೇಶವಾಗಿತ್ತು.

ರವಿದಾಸರು ತೋರಿಸಿದ ಆಂತರಿಕ ಜ್ಯೋತಿಯ ಬೆಳಕು ಅಲ್ಲಿದ್ದವರ ಕಣ್ಣನ್ನು ಕುಕ್ಕಿತು. ಅವರೆಲ್ಲರೂ ಅವಾಕ್ಕಾದರು. ಈ ಸಂದರ್ಭದಲ್ಲಿ ರಾಜ ನಗರಮಲ್ ದಿವ್ಯಾನಂದಭರಿತನಾದನು. ಭಗವಂತನೇ ಈ ವಿವಾದವನ್ನು ಹೀಗೆ ಪರಿಹರಿಸಿದ್ದಾನೆ ಎಂದು ನಿರ್ಧರಿಸಿದನು. ಸ್ವತಃ ತಾನು ಗುರು ರವಿದಾಸರ ಶಿಷ್ಯನಾದನು. ಅಲ್ಲಿ ನೆರೆದಿದ್ದ ಬ್ರಾಹ್ಮಣರೆಲ್ಲರೂ ಮಹಾತ್ಮರ ಅನುಯಾಯಿಗಳಾದರು. ಇಷ್ಟಲ್ಲದೆ, ಎಲ್ಲರೂ ಸೇರಿ ರವಿದಾಸರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡಿದರು.

ಇದೇ ಬಗೆಯ ಇನ್ನೊಂದು ಘಟನೆಯನ್ನು ನಾವು ರವಿದಾಸರ ಜೀವನದಲ್ಲಿ ನೋಡುತ್ತೇವೆ. ಬ್ರಾಹ್ಮಣರು ಪೂಜೆ ಮಾಡುವಂತೆ, ರವಿದಾಸರೂ ಸಾಲಿಗ್ರಾಮವನ್ನು ಪೂಜಿಸುತ್ತಿದ್ದಾರೆ ಎಂಬ ವದಂತಿ ಹಬ್ಬಿತು. ಇದರ ಬಗ್ಗೆ ಬ್ರಾಹ್ಮಣರು ಕಾಶಿಯ ರಾಜನಿಗೆ ದೂರುಕೊಟ್ಟರು. ನಾನು ಯಾವುದೇ ಸಾಲಿಗ್ರಾಮವನ್ನು ಪೂಜಿಸುತ್ತಿಲ್ಲ. ಚಪ್ಪಲಿಗಳನ್ನು ರಿಪೇರಿ ಮಾಡುವ ಕಲ್ಲೇ ನನಗೆ ಪೂಜ್ಯವಾದ ಕಲ್ಲು ಎಂದು ವಿವರಣೆ ನೀಡಿದರು. ಅದಕ್ಕಾಗಿ ಒಂದು ಪರೀಕ್ಷೆಯನ್ನು ರಾಜನು ನಡೆಸಿದನು. ಮೊದಲು ಬ್ರಾಹ್ಮಣರು ತಾವು ಪೂಜಿಸುತ್ತಿದ್ದ ಸಾಲಿಗ್ರಾಮಗಳನ್ನು ನದಿಯಲ್ಲಿ ಬಿಟ್ಟರು. ಅವೆಲ್ಲ ತೇಲದೆ, ಮುಳುಗಿಹೋದವು. ನಂತರ ರವಿದಾಸರು ತಮ್ಮ ಕೆಲಸದ ಕಲ್ಲನ್ನು ನದಿಯಲ್ಲಿ ಬಿಟ್ಟರು. ಅದು ಮುಳುಗದೆ ತೇಲಲು ಆರಂಭಿಸಿತು. ಬ್ರಾಹ್ಮಣರು ರವಿದಾಸರನ್ನು ಅವಮಾನಪಡಿಸಲು ಹವಣಿಸಿಕೊಂಡಿದ್ದರು. ಆದರೆ ಅದಕ್ಕೆ ಬದಲಾಗಿ ಅವರೇ ಅಪಮಾನಿತರಾದರು.

ರವಿದಾಸರ ಸಾತ್ವಿಕ ಜೀವನ

ಗುರು ರವಿದಾಸರ ಹಲವಾರು ಮಂದಿ ಶಿಷ್ಯರು ಶ್ರೀಮಂತ ಕುಟುಂಬಗಳಿಗೆ ಸೇರಿದವರು. ಅವರು ತಮ್ಮ ಗುರುವಿಗೆ ಬೆಲೆ ಬಾಳುವ ಕೊಡುಗೆಗಳನ್ನು ನೀಡುತ್ತಿದ್ದರು. ಆದರೆ ಗುರೂಜಿ ಅವನ್ನೆಲ್ಲ ತಿರಸ್ಕರಿಸಿಬಿಟ್ಟರು. ತಮ್ಮ ವಂಶಾರ್ಜಿತ ಕಾಯಕವನ್ನು ಮುಂದುವರಿಸಿಕೊಂಡು ಹೋದರು. ಯಾವತ್ತೂ ಸಂತೋಷಚಿತ್ತರಾಗಿರುತ್ತಿದ್ದರು. ತಮ್ಮ ಕಾಯಕದಿಂದ ತಾವು ಸಂಪಾದಿಸಿದ್ದರಲ್ಲೇ ತೃಪ್ತಿಯಿಂದ ಜೀವನ ನಡೆಸುತ್ತಿದ್ದರು. ಹೀಗೆ **'ಯದೃಚ್ಛಾ ಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ'** ಎಂಬ ಭಗವದ್ಗೀತೆಯ ಆದರ್ಶವನ್ನು ರವಿದಾಸರು ಪರಿಪೂರ್ಣವಾಗಿ ಪರಿಪಾಲಿಸುತ್ತಿದ್ದರು.

ಒಮ್ಮೆ ಒಬ್ಬ ಶ್ರೀಮಂತನು ರವಿದಾಸರಿಗೆ ಒಂದು ಸ್ಪರ್ಶಮಣಿಯನ್ನು ಕೊಟ್ಟನು. ಇದರ ಸ್ಪರ್ಶದಿಂದ ಯಾವ ಲೋಹ ಬೇಕಾದರೂ ಚಿನ್ನವಾಗಿ ಪರಿವರ್ತನೆಗೊಳ್ಳುತ್ತಿತ್ತು. ರವಿದಾಸರು ಅದನ್ನು ತಿರಸ್ಕರಿಸಿದರು. ಶ್ರೀಮಂತನು ಅದನ್ನು ಮನೆಯ ಮಾಳಿಗೆಗೆ ನೇತುಹಾಕಿ ಹೊರಟುಹೋದನು. ಒಂದು ವರ್ಷದ ನಂತರ ತಿರುಗಿ ಬಂದನು. ರವಿದಾಸರು ಇನ್ನೂ ತಮ್ಮ ಬಡ ಗುಡಿಸಲಿನಲ್ಲಿಯೇ ವಾಸವಾಗಿದ್ದರು. ತಮ್ಮ ಕಾಯಕವನ್ನು ಮಾಡುತ್ತ ಭಗವದಾನಂದದಲ್ಲಿ ಮುಳುಗಿಹೋಗಿದ್ದರು. ಸ್ಪರ್ಶಮಣಿ ಎಲ್ಲಿ ಹೋಯಿತು ಎಂದು ಶ್ರೀಮಂತನು ಅತ್ತಿತ್ತ ನೋಡಿದನು. ಅವನು ಒಂದು ವರ್ಷದ ಹಿಂದೆ ಎಲ್ಲಿ ನೇತುಹಾಕಿದ್ದನೋ, ಅಲ್ಲಿಯೇ ಅದು ನೇತಾಡುತ್ತಿತ್ತು. ಸಂತ ರವಿದಾಸರು ನಿಜಕ್ಕೂ ಮಹಾತ್ಮರು, ದೈವೀಪುರುಷರು ಎಂದು ಆ ಶ್ರೀಮಂತನು ಎಲ್ಲೆಡೆ ಘೋಷಿಸಿದನು.

ಚಿತ್ತೋರಿನಲ್ಲಿ ರವಿದಾಸರು

ರವಿದಾಸರ ನಿಃಸ್ವಾರ್ಥ ಭಕ್ತಿ ಮತ್ತು ಮಾನವತೆಯ ಮೇಲಿನ ಅವ್ಯಾಜ ಪ್ರೀತಿ – ಇವು ಎಲ್ಲೆಡೆ ಪ್ರಸಿದ್ಧಿಗೆ ಬಂದಿತು. ಇದನ್ನು ಕೇಳಿ ಚಿತ್ತೋರಿನ ಮಹಾರಾಣಿ ಜಾಲಿ ಅವರ ದರ್ಶನವನ್ನು ಮಾಡಲು ಬಂದಳು. ಅವಳು ಒಬ್ಬ ದೊಡ್ಡ ಭಕ್ತೆ. ಕಾಶಿಯ ಇನ್ನಿತರ ದೇಗುಲಗಳಿಗಿಂತ ರವಿದಾಸರ ಬಡ ಗುಡಿಸಲೇ ಅವಳಿಗೆ ಪ್ರಮುಖ ತೀರ್ಥಕ್ಷೇತ್ರವಾಯಿತು. ರವಿದಾಸರು ಆಶೀರ್ವಾದ ಪೂರ್ವಕವಾಗಿ ಹಲವಾರು ಭಕ್ತಿಗೀತೆಗಳನ್ನು ಹಾಡಿ ಅವಳನ್ನು ಸಂತೋಷಪಡಿಸಿದರು. ರವಿದಾಸರ ಭಕ್ತಿಭಾವವನ್ನು ಕಂಡು ಅವಳು ಬಹಳ ಆಕರ್ಷಿತಳಾದಳು. ಅವರನ್ನು ಚಿತ್ತೋರಿಗೆ ಆಹ್ವಾನಿಸಿದಳು. ಅವರ ಶಿಷ್ಯೆಯಾದಳು. ಸರಳ ಜೀವನವನ್ನು ನಡೆಸಲಾರಂಭಿಸಿದಳು. ಇದನ್ನು ಕಂಡು ಅವಳ ಪತಿ ಮಹಾರಾಣ ಕೋಪಗೊಂಡನು. ರವಿದಾಸರ ಭಕ್ತಿಗೀತೆಗಳನ್ನು ಹಾಡಿ, ಮಹಾರಾಣಿಯು ತನ್ನ ಪತಿಯನ್ನು ಸಮಾಧಾನ ಮಾಡಿದಳು. ಅಲ್ಲಿನ ಬ್ರಾಹ್ಮಣರು ಕೂಡ ರವಿದಾಸರನ್ನು ವಿರೋಧಿಸಿದರು. ಒಮ್ಮೆ ರವಿದಾಸರು ಭೋಜನದಲ್ಲಿ ಪಾಲ್ಗೊಳ್ಳುವುದನ್ನು ಅವರೆಲ್ಲ ಖಂಡಿಸಿದರು. ರವಿದಾಸರು ತಾವಾಗಿಯೇ ಭೋಜನಕೂಟದಿಂದ ಹಿಂದುಳಿದರು. ಆಶ್ಚರ್ಯವೆಂದರೆ, ಬಡಿಸುವವರೆಲ್ಲರೂ ರವಿದಾಸರ ರೂಪದಲ್ಲಿಯೇ ಬ್ರಾಹ್ಮಣರಿಗೆ ಕಂಡುಬಂದರಂತೆ! ಇಷ್ಟೇ ಅಲ್ಲ, ತಮ್ಮ ಅಕ್ಕಪಕ್ಕದಲ್ಲಿ ಕುಳಿತಿರುವವರೆಲ್ಲರೂ ರವಿದಾಸರಂತೆಯೇ ಅವರಿಗೆ ಕಾಣಿಸಿದರಂತೆ! ಇದು ಮಹಾರಾಣನಿಗೆ ತಿಳಿದುಬಂತು. ಅವನು ಕೂಡ ರವಿದಾಸರ ಶ್ರದ್ಧಾವಂತ ಭಕ್ತನಾದನು. ರವಿದಾಸರು ಚಿತ್ತೋರಿನಲ್ಲಿ ಬಹಳ ದಿವಸಗಳ ಕಾಲ ಉಳಿದುಕೊಂಡರು. ಅದೇ ಸಮಯದಲ್ಲಿ ಭಕ್ತೆ ಮೀರಾಬಾಯಿ ಕೂಡ ಅವರ ಶಿಷ್ಯೆಯಾದಳು.

ಕವಿಯಾಗಿ ರವಿದಾಸರು

ರವಿದಾಸರ ರಚನೆಗಳ ಎರಡು ಮೂಲಕ ಆಕರಗಳೆಂದರೆ, ಸಿಖ್ ಜನಾಂಗದವರ **'ಗುರುಗ್ರಂಥ ಸಾಹಿಬ್'** ಮತ್ತು ದಾದು ಪಂಥಿಗಳು ಎಂಬ ಹಿಂದೂ ಸಂನ್ಯಾಸಿ ಪಂಗಡದ **'ಪಂಚವಾಣಿ'** ಎಂಬ ಗ್ರಂಥ. ಗುರುಗ್ರಂಥ ಸಾಹಿಬ್‌ನಲ್ಲಿ ರವಿದಾಸರ ನಲುವತ್ತು ರಚನೆಗಳನ್ನು ಸೇರಿಸಲಾಗಿದೆ. ರವಿದಾಸರ ಈ ರಚನೆಗಳಲ್ಲಿ ಹಲವಾರು ವಿಷಯಗಳನ್ನು ಕಾಣಬಹುದು. ಸಂಘರ್ಷ ಮತ್ತು ದುರಾಡಳಿತಗಳನ್ನು ಮೆಟ್ಟಿ ನಿಲ್ಲುವುದು, ಯುದ್ಧ ಮತ್ತು ಅದಕ್ಕಾಗಿ ಪರಿಹಾರ, ಒಳ್ಳೆಯ ಉದ್ದೇಶಕ್ಕೆ ಜೀವನವನ್ನು ಮುಡಿಪಾಗಿಡುವ ಭಾವನೆ – ಇವೆಲ್ಲ ವಿಷಯಗಳನ್ನು ಅವರ ರಚನೆಗಳಲ್ಲಿ ಕಾಣಬಹುದು. ಇದಲ್ಲದೆ, ಎಲ್ಲರನ್ನೂ ಸಮಾನವಾಗಿ ಕಾಣುವ ಆದರ್ಶರಾಜ್ಯದ ಕಲ್ಪನೆಯೂ ಅವರ ರಚನೆಗಳಲ್ಲಿ ಬಿಂಬಿತವಾಗಿದೆ. ಯೋಗಿಯ ಲಕ್ಷಣಗಳು, ವೈರಾಗ್ಯದ ಮಹತ್ವ – ಇಂಥ ಆಧ್ಯಾತ್ಮಿಕ ಸಂಗತಿಗಳನ್ನು ಕೂಡ ರವಿದಾಸರು ತಮ್ಮ ರಚನೆಗಳಲ್ಲಿ ವಿವರಿಸುತ್ತಾರೆ.

ಹಲವು ಪಾಶ್ಚಾತ್ಯ ವಿದ್ವಾಂಸರು ರವಿದಾಸರ ಜೀವನದ ಸಾಂಕೇತಿಕತೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಪೀಟರ್ ಫ್ರೈಡ್ ಲ್ಯಾಂಡ್‌ಲರ್ ಅವರು ಕೂಡ ಒಬ್ಬರು. ಅವರ ಪ್ರಕಾರ, ರವಿದಾಸರ ಜೀವನಚರಿತ್ರೆಗಳು ಭಾರತೀಯ ಸಮಾಜದಲ್ಲಿನ ಜಾತೀಯ ಸಂಘರ್ಷದ ಸಂಕೇತವಾಗಿವೆ. ಅಲ್ಲದೆ ಹಲವಾರು ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಅವು ವ್ಯಕ್ತಪಡಿಸುತ್ತವೆ. ರವಿದಾಸರ ಜೀವನವು ಆಗಿನ ಕಾಲದ ಜಾತೀಯ ಕಲಹ ಮತ್ತು ಸಾಮಾಜಿಕ ಐಕಮತ್ಯದ ಆಕಾಂಕ್ಷೆಯ ದ್ಯೋತಕವಾಗಿದೆ. ಇನ್ನೊಂದು ನೆಲೆಯಲ್ಲಿ ನೋಡುವುದಾದರೆ, ರವಿದಾಸರ ಬಗೆಗಿನ ಅನೇಕ ಕತೆಗಳು ವ್ಯಕ್ತಿಯೊಬ್ಬನು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ನಡೆಸುವ ಆಧ್ಯಾತ್ಮಿಕ ಸಂಘರ್ಷವನ್ನು ಪ್ರತಿನಿಧಿಸುತ್ತವೆ ಎಂದು ಈ ಪಂಡಿತರು ಅಭಿಪ್ರಾಯಪಡುತ್ತಾರೆ.

ರವಿದಾಸರು ಒಬ್ಬ ಅನುಭಾವಿ. ಭಗವಂತನ ರಾಜ್ಯದಲ್ಲಿ ಆನಂದವಾಗಿ ವಿಹರಿಸುತ್ತಿತ್ತು ಅವರ ಮನಸ್ಸು. ಭಗವಂತನ ಸೌಂದರ್ಯಕ್ಕೆ ಮಾರುಹೋದ ಅವರು, ಪ್ರಾಪಂಚಿಕ ವಿಷಯಗಳಲ್ಲಿ ಸಂಪೂರ್ಣ ನಿರ್ಲಿಪ್ತರಾಗಿದ್ದರು. ಅವರ ಹೃದಯದ ಮಧುರ ಭಾವನೆಗಳು ಕಾವ್ಯಧಾರೆಯ ರೂಪದಲ್ಲಿ ಸೊಗಸಾಗಿ ಹೊರಹೊಮ್ಮಿದವು. ಅವುಗಳಲ್ಲಿ ಕೆಲವೊಂದನ್ನು ನೋಡೋಣ:

'ಭಗವನ್ನಾಮವೊಂದೇ ಸತ್ಯ, ಓ ರವಿದಾಸ, ಆದಿಯಲ್ಲಿ ಇದೊಂದೇ ಸತ್ಯವಾಗಿತ್ತು. ಕಡೆಯ ತನಕ ಇದೊಂದೇ ಸತ್ಯವಾಗಿ ಉಳಿದಿರುತ್ತದೆ. ಇದು ಎಲ್ಲ ಪಾಪಗಳನ್ನೂ ಸಂಕಷ್ಟಗಳನ್ನೂ ನಾಶ ಮಾಡಿಬಿಡುತ್ತದೆ. ಹಾಗೆಂದೇ ಇದು ಅಪಾರ ಆನಂದದ ಗಣಿಯಾಗಿದೆ. ಓ ರವಿದಾಸ, ಈ ಭಗವನ್ನಾಮದ ಧ್ಯಾನದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿ ಭಕ್ತಿಭಾವವನ್ನು ಬೆಳೆಸಿಕೋ. ಭಗವಂತನ ನಾಮದ ಪುನರುಚ್ಚಾರವು ತಾನೇತಾನಾಗಿ ನಿನ್ನ ಮನಸ್ಸಿನಲ್ಲಿ ನಿರಂತರವಾಗಿ ನಡೆಯುತ್ತಿರಲಿ. ಯಾವಾಗ ಏಕಾಗ್ರತೆಯು ಭಗವನ್ನಾಮದಲ್ಲಿ ನಮ್ಮನ್ನು ವಿಲೀನಗೊಳ್ಳುವಂತೆ ಮಾಡುತ್ತದೆಯೋ ಆಗ ಮಾತ್ರ ನಾವು ಪರಮಾನಂದವನ್ನು ಪಡೆಯಬಹುದು. ಆಗ ಮಾತ್ರ ದಿವ್ಯತೆಯ ಬೆಳಕು ಅಂತರಂಗದಲ್ಲಿ ಮೂಡುತ್ತದೆ. ಓ ರವಿದಾಸ, ಆಗ ಮಾತ್ರ ಆನಂದದ ಲಹರಿ ಎಲ್ಲೆಡೆ ಹರಿಯುತ್ತದೆ.'

ಇನ್ನೊಂದು ಕಾವ್ಯದಲ್ಲಿ ಭಗವಂತ ಮತ್ತು ಭಕ್ತನ ಅಪೂರ್ವ ಮಿಲನ ಮತ್ತು ಅಭೇದದ ಕಲ್ಪನೆಯನ್ನು ರವಿದಾಸರು ಬಹು ಸುಂದರವಾಗಿ ಬಿಂಬಿಸುತ್ತಾರೆ:

'ನೀನೇ ನಾನು; ನಾನೇ ನೀನು – ನಮ್ಮಿಬ್ಬರಲ್ಲಿ ಇರುವ ವ್ಯತ್ಯಾಸವಾದರೂ ಏನು? ನೀನು ಚಿನ್ನದಂತೆ, ನಾನು ಅದರಿಂದ ಮಾಡಿದ ಬಳೆಯಂತೆ; ನೀನು ನೀರಿನಂತೆ, ನಾನು ಅದರ ಅಲೆಯಂತೆ. ಓ ಪ್ರಭೂ, ನಾನು ಪಾಪಗಳನ್ನೇ ಮಾಡಿಲ್ಲವಾದರೆ, ನೀನು 'ಪಾಪ-ಹರಣ' ಎಂಬ ಹೆಸರನ್ನು ಹೇಗೆ ತಾನೇ ಪಡೆ

ಯುವೆ? ನೀನು ನನ್ನ ಒಡೆಯ, ನನ್ನಂತರಂಗವನ್ನು ತಿಳಿದವನು, ನನ್ನ ಹೃದಯವನ್ನು ಅನ್ವೇಷಿಸುವವನು. ದಾಸನನ್ನು ಅವನ ಒಡೆಯನಿಂದ ಗುರುತಿಸುತ್ತಾರೆ. ಒಡೆಯನನ್ನು ಅವನ ದಾಸನಿಂದ ಗುರುತಿಸುತ್ತಾರೆ. ಓ ಪ್ರಭೂ, ನನ್ನ ಕಾಯವನ್ನು ನಿನ್ನ ಸೇವೆಗೆ ಮುಡಿಪಾಗಿಡುವ ಹಾಗೆ ಜ್ಞಾನವನ್ನು ನನಗೆ ದಯಪಾಲಿಸು. ಓ ರವಿದಾಸ, ಪರಮಾತ್ಮನು ಎಲ್ಲರಲ್ಲಿಯೂ ಸಮಾನವಾಗಿಯೇ ಇದ್ದಾನೆ ಎಂದು ಅರಿತವರು ನಿಜಕ್ಕೂ ವಿರಳ.'

'ಭಗವಂತನ ಊರು' ಎಂದು ಹೆಸರು ಕೊಟ್ಟಿರುವ ಇನ್ನೊಂದು ಪದ್ಯವಂತೂ ಬಹಳ ಹೃದಯಸ್ಪರ್ಶಿಯಾಗಿದೆ:

'ನನ್ನ ಊರಿನ ಹೆಸರು 'ದುಃಖಿಸದಿರು' ಎಂದು. ನೋವು ಭಯಗಳು ಎಂದಿಗೂ ಪ್ರವೇಶಿಸುವುದಿಲ್ಲ ಇಲ್ಲಿ. ಯಾವ ಸಂಪತ್ತೂ ಇಲ್ಲದೆ, ಜೀವನವು ತೆರಬೇಕಾದ ಯಾವ ತೆರಿಗೆಗಳೂ ಇಲ್ಲದ ಊರು ಇದು. ವ್ಯಾಧಿ ಮರಣಗಳ ಕಾಟ ಇಲ್ಲಿಲ್ಲ. ಇದು ನನ್ನ ಮನೆ. ಸುತ್ತಿ ಸುತ್ತಿ ನಾನಿಲ್ಲಿಗೆ ಬಂದಿರುವೆ. ಕಾಲಚಕ್ರ ಇಲ್ಲಿಲ್ಲ, ಸ್ಥಿತಿಗತಿಗಳ ಏರುಪೇರಿಲ್ಲ. ಇಲ್ಲಿ ನನ್ನ ಚಕ್ರವರ್ತಿ ಆಳುತ್ತಿದ್ದಾನೆ. ಅವನಿಗೆ ಎರಡನೆಯವರಾರೂ ಇಲ್ಲ, ಮೂರನೆಯವರೂ ಇಲ್ಲ. ಇಲ್ಲಿ ಎಲ್ಲರೂ ಪ್ರೀತಿ ಮತ್ತು ಅರಿವಿನಿಂದ ತುಂಬಿ ತುಳುಕಾಡುತ್ತಿದ್ದಾರೆ. ಇಲ್ಲಿನ ಜನರು ಹೃದಯದ ಸಂಪತ್ತಿನಿಂದ ಬಹು ಧನಿಕರಾಗಿದ್ದಾರೆ. ಇದು ಭಗವಂತನ ಪಟ್ಟಣ. ಇಲ್ಲಿನ ಜನರೆಲ್ಲರೂ ಮುಕ್ತರು. ಬಡ ಚಮ್ಮಾರನಾದ ಓ ರವಿದಾಸ, ಕೇಳಿಸಿಕೋ. ಇಲ್ಲಿ ಎಲ್ಲರೂ ನಿನ್ನ ಸ್ನೇಹಿತರೇ, ಬಂಧುಗಳೇ.'

ಹೀಗೆ ತಮ್ಮ ಅದ್ಭುತ ಸುಂದರ ಭಗವದನುಭವದ ಸ್ಥಿತಿಯನ್ನು ರವಿದಾಸರು ಸಾಂಕೇತಿಕವಾಗಿ ತಮ್ಮ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕಾವ್ಯಗಳನ್ನು ಓದುವಾಗಲೇ ನಮಗೆ ಅದೆಷ್ಟು ಆನಂದವಾಗುತ್ತದೆ! ಇನ್ನು ಈ ಭಾವನೆಗಳು ಹೊರಹೊಮ್ಮಿದ ರವಿದಾಸರ ಆ ಭಕ್ತ ಹೃದಯವು ಅದೆಷ್ಟು ಪರಿಶುದ್ಧವಾಗಿರಬೇಕು! ಭಗವದಾನಂದದಿಂದ ತುಂಬಿತುಳುಕಾಡುತ್ತಿದ್ದಿರಬೇಕು!

ರವಿದಾಸರ ತತ್ತ್ವಜ್ಞಾನ

ರವಿದಾಸರ ಗೀತೆಗಳಲ್ಲಿ ಸಗುಣ ಮತ್ತು ನಿರ್ಗುಣ – ಹೀಗೆ ಎರಡು ಪ್ರಕಾರದ ದೇವರ ಪ್ರಸ್ತಾಪವೂ ಬರುತ್ತದೆ. ಇದಲ್ಲದೆ ನಾಥ ಸಂಪ್ರದಾಯದ ಯೋಗಸಾಧನೆಯ ತತ್ತ್ವಗಳೂ ಅವರ ಗೀತೆಗಳಲ್ಲಿ ಅಡಕವಾಗಿವೆ. ಅವರು 'ಸಹಜ' ಎಂಬ ಅನುಭಾವಿಕ ಸ್ಥಿತಿಯನ್ನು ಮತ್ತೆ ಮತ್ತೆ ತಮ್ಮ ಗೀತೆಗಳಲ್ಲಿ ಉಲ್ಲೇಖಿಸುತ್ತಾರೆ. ಇದೊಂದು ಭಗವಂತನ ಮಿಲನದ ಸ್ಥಿತಿ. ಬಹುತ್ವ ಮತ್ತು ಏಕತ್ವಗಳ ಅಪೂರ್ವ ಸಂಯೋಗದ ಅನುಭವ ಇಲ್ಲಾಗುತ್ತದೆ. ಇದರ ವಿವರಣೆಯನ್ನು ತಮ್ಮ ಒಂದು ಪದ್ಯದಲ್ಲಿ ರವಿದಾಸರು ಹೀಗೆ ನೀಡುತ್ತಾರೆ: 'ಈ ಅನುಭವ ಹೇಗಿದೆಯೆಂದರೆ, ಅದನ್ನು ಮಾತುಗಳಲ್ಲಿ ಹೇಳಲು ಆಗುವುದಿಲ್ಲ. ನಾನು ಭಗವಂತನನ್ನು ದರ್ಶಿಸಿದ್ದೇನೆ. ಇಷ್ಟನ್ನು ಮಾತ್ರ ಹೇಳಬಲ್ಲೆ. ಇನ್ನೇತರ ಭಯ ನನಗೆ? ಹರಿಯೇ ಎಲ್ಲೆಡೆ ಇದ್ದಾನೆ. ಎಲ್ಲವೂ ಹರಿಯೇ ಆಗಿದ್ದಾನೆ. ಹರಿಯನ್ನು ಮತ್ತು ಹರಿಯೇ ತನ್ನ ಆತ್ಮ ಎನ್ನುವುದನ್ನೂ ತಿಳಿದವನಿಗೆ ಬೇರೆ ಯಾವ ಪುರಾವೆಯೂ ಬೇಡ. ಏಕೆಂದರೆ ಅದನ್ನು ತಿಳಿದುಕೊಳ್ಳಲು ಇಚ್ಛಿಸುವವನೇ ಅದರಲ್ಲಿ ವಿಲೀನವಾಗಿರುತ್ತಾನೆ.'

ನಿರ್ಗುಣ ತತ್ತ್ವವನ್ನೇ ಭಗವಂತನೆಂದು ರವಿದಾಸರು ಎಣಿಸಿದ್ದರೂ, ಅಂಥ ಭಗವದ್ರೂಪದ ಮೇಲೆ ಎಣೆಯಿಲ್ಲದ ಪ್ರೇಮ ಪ್ರವಾಹವನ್ನು ಅವರು ಹರಿಸಿರುವುದನ್ನು ಅವರ ಕವನಗಳಲ್ಲಿ ಕಾಣಬಹುದು. ಇಂಥ ಭಕ್ತಿಯನ್ನು 'ನಿರ್ಗುಣ ಭಕ್ತಿ' ಎಂದು ಕರೆಯಬಹುದು. ಸಿಖ್ ಸಂಪ್ರದಾಯದವರು ಉದಾಹರಿಸುವ ರವಿದಾಸರ ಗೀತೆಗಳಲ್ಲಿ ಈ ಅಂಶವೇ ಮುಖ್ಯವಾಗಿ ಕಂಡುಬರುತ್ತದೆ. ಹಾಗೆಂದು ಈ ನಿರ್ಗುಣ ತತ್ತ್ವವು ಅದ್ವೈತ ತತ್ತ್ವವಲ್ಲ; ಅದು ವಿಶಿಷ್ಟ ಈಶ್ವರ ತತ್ತ್ವ. ಅಂಥ ಈಶ್ವರನು ಕರುಣಾಳು, ಸರ್ವವ್ಯಾಪಿ, ಹಲವಾರು ಅವತಾರಗಳನ್ನು ತಳೆಯುವಂಥವನು. ಅವನ ಸಾನ್ನಿಧ್ಯವನ್ನು ಎಲ್ಲೆಡೆ ಕಾಣಬಹುದು. ಎಲ್ಲರಲ್ಲಿಯೂ ಅನುಭವಿಸಬಹುದು. ಹೀಗೆ ನಿರ್ಗುಣ ಹಾಗೂ ಸಗುಣ ತತ್ತ್ವಗಳ ಅಪೂರ್ವ ಸಂಗಮವನ್ನು ರವಿದಾಸರ ಗೀತೆಗಳಲ್ಲಿ ನಾವು ಕಾಣಬಹುದು. ಆದರೆ ಈ ವಿಷಯದಲ್ಲಿ ವಿದ್ವಾಂಸರುಗಳ ಮಧ್ಯೆ ಭಿನ್ನಾಭಿಪ್ರಾಯವಿದೆ.

ಇತ್ತೀಚೆಗೆ, ಅಂದರೆ ೨೧ನೆಯ ಶತಮಾನದಲ್ಲಿ (೨೦೦೯) ರವಿದಾಸರ ಅನುಯಾಯಿಗಳೆಂದು ಹೇಳಿಕೊಳ್ಳುವ ಕೆಲವರು 'ರವಿದಾಸ ಧಾರ್ಮಿಕ ಪಂಗಡ' ವನ್ನು ಹುಟ್ಟುಹಾಕಿಕೊಂಡಿದ್ದಾರೆ. ಇದು ಮುಖ್ಯವಾಗಿ ದಲಿತರ ಪಂಗಡವಾಗಿದ್ದು, ತಮಗೆ ಪ್ರತ್ಯೇಕ ಸಾಮಾಜಿಕ ಹಾಗೂ ಧಾರ್ಮಿಕ ಅಸ್ತಿತ್ವವಿದೆ ಎಂದು ಅವರು ಪ್ರತಿಪಾದಿಸುತ್ತಾರೆ.

ರವಿದಾಸರ ಅಂತ್ಯ

ರವಿದಾಸರು ಅಂತ್ಯಕಾಲದಲ್ಲಿ ತಮ್ಮ ಪಾದಚಿಹ್ನೆಗಳನ್ನು ಮಾತ್ರ ಬಿಟ್ಟು ಅಂತರ್ಧಾನರಾದರು ಎಂಬ ನಂಬಿಕೆ ಇದೆ. ಈ ಪಾದಚಿಹ್ನೆಗಳನ್ನು ಇಂದಿಗೂ ಚಿತ್ತೋರಿನ ಅವರ ಸ್ಮಾರಕ ಮಂದಿರದಲ್ಲಿ ರಕ್ಷಿಸಿಡಲಾಗಿದೆ. ಕೆಲವರು ರವಿದಾಸರು ತಮ್ಮ ಅಂತಿಮ ದಿನಗಳನ್ನು ಕಾಶಿಯಲ್ಲಿಯೇ ಕಳೆದರು ಎಂದು ಹೇಳುತ್ತಾರೆ. ಏನೇ ಇರಲಿ, ಅವರು ಸುಮಾರು ೧೫೨ ವರ್ಷಗಳ ಕಾಲ ಸುದೀರ್ಘ ಜೀವನವನ್ನು ನಡೆಸಿ ೧೫೨೮ ರಲ್ಲಿ ದೇಹತ್ಯಾಗ ಮಾಡಿದರು ಎಂಬ ಐತಿಹ್ಯ ಇದೆ. ಇದು ನಂಬಲು ಕಷ್ಟ. ದೇಶದಾದ್ಯಂತ ಅವರ ಸ್ಮಾರಕ ಮಂದಿರಗಳಿವೆ. ಅವುಗಳಲ್ಲಿ ಒಂದು ತಿರುಪತಿಯ ಬೆಟ್ಟದ ಬುಡದಲ್ಲಿದೆ. ಇನ್ನೊಂದು ಕಾಶಿಯ ಮಂದೂರ್ ಪ್ರದೇಶದಲ್ಲಿದೆ. ಎಲ್ಲೋರಾದ ಬಳಿ ರವಿದಾಸರ ಕೊಳವಿದೆ. ಇಂಥದ್ದೇ ಒಂದು ಕೊಳ ಗುಜರಾತಿನ ಜುನಾಗಢದಲ್ಲಿಯೂ ಇದೆ.

ಶಿವಶರಣ ದೇವರ ದಾಸಿಮಯ್ಯ


ಕಥೆ : ಟಿ.ಎಂ.ಎಸ್ **ಚಿತ್ರ : ಶಂಕರ್**

1 11ನೇ ಶತಮಾನದಲ್ಲಿ ಯಾದಗಿರಿ ಜಿಲ್ಲೆಯ ಮುದನೂರಿನಲ್ಲಿ ಜೀವಿಸಿದ್ದ ಶಿವಶರಣ ಸಂತನೇ ದೇವರ ದಾಸಿಮಯ್ಯ. ನೇಕಾರ ವೃತ್ತಿಯನ್ನು ಮಾಡುತ್ತಿದ್ದ ಅವನು ದೊಡ್ಡ ಶಿವಭಕ್ತನಾಗಿದ್ದ. ಮುಂದೆ ಅವನು ಅನೇಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಮಾಡಿದ. ಒಂದು ದಿನ ಅವನು ತನ್ನ ಪತ್ನಿ ದುಗ್ಗಳೆಯೊಂದಿಗೆ ಇದ್ದಾಗ..



ದಾಸಿಮಯ್ಯನು ಆ ದಾರದಿಂದ ಶಿವನ ದಿವ್ಯಕಥೆ ಹಾಗೂ ಶಿವಭಕ್ತರ ಚರಿತೆಗಳನ್ನು ಚಿತ್ರಿಸುವ ಸುಂದರವಾದ ವಸ್ತ್ರವನ್ನು ನೇಯ್ದನು.







ಬಸವಳಿದು ಕುಳಿತುಬಿಟ್ಟಿದ್ದ ದಾಸಿಮಯ್ಯನ ಬಳಿಗೆ ಜಂಗಮನೊಬ್ಬ ಬಂದ.



5 ಆ ಜಂಗಮನ ಸ್ವಭಾವದಿಂದ ಆಕರ್ಷಿತನಾದ ದಾಸಿಮಯ್ಯ ಒಂದು ಕ್ಷಣ ಯೋಚಿಸಿ ಹೇಳಿದ..




6 ಆ ಶಿವಭಕ್ತನು ಬಟ್ಟೆಯನ್ನು ಸ್ವೀಕರಿಸಿ, ಅದನ್ನು ಹಲವು ಚೂರುಗಳನ್ನಾಗಿ ಮಾಡಿ, ಕೆಲವನ್ನು ತನ್ನ ಜಡೆಗೆ ಸುತ್ತಿಕೊಂಡ, ಇನ್ನು ಕೆಲವನ್ನು ತನ್ನ ಯೋಗದಂಡಕ್ಕೆ, ಇನ್ನು ಕೆಲವನ್ನು ಕಮಂಡಲುವಿಗೆ ಸುತ್ತಿಕೊಂಡ. ಆಗ..




ದಾಸಿಮಯ್ಯ ಈ ಕಥೆಯನ್ನೆಲ್ಲ ತನ್ನ ಪತ್ನಿಗೆ ತಿಳಿಸಿದ. ಆಕೆ ಅವನು ತಂದ ಧಾನ್ಯ ಇತ್ಯಾದಿಗಳನ್ನು ಮನೆಯಲ್ಲಿದ್ದ ಹಲವು ಮಡಕೆಗಳಲ್ಲಿ ತುಂಬಿ ಇಟ್ಟಳು.

7 ಮರುದಿನ.. ಶಿವಭಕ್ತ ಕೊಟ್ಟಿದ್ದ ಧಾನ್ಯ ಪಾತ್ರೆಗಳನ್ನೆಲ್ಲ ತುಂಬಿಕೊಂಡಿದ್ದವು! ತೆಗೆದಷ್ಟು ಅವು ಮತ್ತೆ ತುಂಬುತ್ತಿದ್ದವು.



8 ದಾಸಿಮಯ್ಯನು ಶಿವನ ಮಹಿಮೆಯನ್ನು ಎಲ್ಲೆಡೆ ಸಾರತೊಡಗಿದ. ಇತರ ಮತಗಳಿಗೆ ಸೇರಿದ ಕೆಲವರಿಗೆ ಇದನ್ನು ಸಹಿಸಲಾಗದೆ, ಅವನನ್ನು ಪರೀಕ್ಷಿಸಲು ಹೊರಟರು. ಒಂದು ಮಡಕೆಯೊಳಗೆ ವಿಷಪೂರಿತ ಹಾವನ್ನು ಇಟ್ಟು, ಅದಕ್ಕೆ ಬಟ್ಟೆಯನ್ನು ಕಟ್ಟಿ ಅವನ ಬಳಿಗೆ ತಂದರು.




ದಾಸಿಮಯ್ಯನು ಆ ಮಡಕೆಯೊಳಗಿನಿಂದ ಸ್ಫಟಿಕಲಿಂಗವನ್ನು ಹೊರತೆಗೆದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿದ. ಹಾವನ್ನು ನಿರೀಕ್ಷಿಸಿದ್ದ ಎಲ್ಲರೂ ಲಿಂಗವನ್ನು ನೋಡಿ, ಶಿವನ ಮಹಿಮೆಗೆ ಬೆರಗಾದರು.

9

ದಾಸಿಮಯ್ಯನೇನೋ ದೊಡ್ಡ ಶಿವಭಕ್ತನಾಗಿದ್ದ; ಆದರೆ ದಿನ ಕಳೆದಂತೆ ಅವನಲ್ಲಿ ಜಂಬ ಬೆಳೆಯಿತು. ''ಶಿವನಂತೆ ನೀಡುವವರಿಲ್ಲ; ನನ್ನಂತೆ ಅವನಿಂದ ಪಡೆಯುವವರಿಲ್ಲ'' ಎಂದು ಅವನು ಭಾವಿಸಿದ.

ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿದ ಶಿವ. ಬಿಜಾಪುರ ಜಿಲ್ಲೆಯ ಸ್ಕಂಧಶಿಲೆ ಎಂಬ ಊರಿನಲ್ಲಿ ಶಂಕರ ದಾಸಿಮಯ್ಯನೆಂಬ ದೊಡ್ಡ ಶಿವಶರಣನಿದ್ದ. ಅವನ ಕನಸಿನಲ್ಲಿ ಶಿವ ಕಾಣಿಸಿಕೊಂಡ.

10




ಅಂತೆಯೇ ಶಂಕರ ದಾಸಿಮಯ್ಯನು ತನ್ನ ಮಡದಿ ಹಾಗೂ ಶಿಷ್ಯಂದಿರೊಡನೆ ಎಲ್ಲ ಪುಣ್ಯಕ್ಷೇತ್ರಗಳನ್ನೂ ಸಂದರ್ಶಿಸಿದ. ಅನಂತರ ಅವನು ದೇವರ ದಾಸಿಮಯ್ಯನ ಊರಾದ ಮುದನೂರಿಗೆ ಬಂದ. ಅಲ್ಲಿನ ದೇವಾಲಯದಲ್ಲಿ ಅವನು ಪ್ರವಚನ ನೀಡಿದ. ದಾಸಿಮಯ್ಯನೂ ಅವನ ಪ್ರವಚನ ಕೇಳಲು ಪತ್ನಿಯೊಂದಿಗೆ ಬಂದಿದ್ದ.

11


ಶಿವನ ಇಚ್ಛೆಯಂತೆ ದಾಸಿಮಯ್ಯನ ಜಂಬ ಪುಡಿಪುಡಿಯಾಗುವ ಸಮಯ ಹತ್ತಿರವಾಯಿತು. ಅವನು ಶಂಕರ ದಾಸಿಮಯ್ಯನ ಭಕ್ತಿಯನ್ನು ನೋಡಿ ತುಂಬಾ ಪ್ರಭಾವಿತನಾದ. ಮರುದಿನ ಅವನು ಶಂಕರ ದಾಸಿಮಯ್ಯನ ಬಳಿಗೆ ಹೋದ. ಆಗ ಶಂಕರ ದಾಸಿಮಯ್ಯನ ಪತ್ನಿ ಶಿಷ್ಯನೊಬ್ಬನಿಗೆ ಹೇಳಿದಳು..




11




13 ‘ದೇವರ ಅನುಗ್ರಹಕ್ಕೆ ಪಾತ್ರನಾದವನಿಗೆ ಜಂಬವಿರುವುದು ಯೋಗ್ಯವೆ? ಅವನು ಒಳ್ಳೆಯ ದಾರಿಗೆ ಬರುವಂತಾಗಬೇಕು’ ಎಂದು ಯೋಚಿಸುತ್ತ ಶಂಕರ ದಾಸಿಮಯ್ಯನು ಒಂದಿಷ್ಟು ಕಸವನ್ನು ಆಕಾಶಕ್ಕೆ ಎಸೆದ. ಅದೆಲ್ಲವೂ ಬಂಗಾರವಾಗಿ ಮಾರ್ಪಟ್ಟಿತು!





15 ಏನು ಮಾಡಿದರೂ ಶಂಕರ ದಾಸಿಮಯ್ಯನು ಅವನ ಪ್ರಾರ್ಥನೆಗೆ ಕರಗಲಿಲ್ಲ. ದೇವರ ದಾಸಿಮಯ್ಯ ಬೇಸರದಿಂದ ಮನೆಗೆ ಮರಳಿದ..



16 ಅವರಿಬ್ಬರೂ ಶಂಕರ ದಾಸಿಮಯ್ಯನ ಬಳಿಗೆ ಹೋಗಿ, ಮತ್ತೊಮ್ಮೆ ಅವನ ಬಳಿ ಕ್ಷಮೆ ಕೋರಿದರು. ದಾಸಿಮಯ್ಯನು ತನ್ನಲ್ಲಿದ್ದ ತಪ್ಪನ್ನು ಅರಿತುಕೊಂಡದ್ದರಿಂದ ಅವನ ಜಂಭವೆಲ್ಲ ಹೊರಟುಹೋಯಿತು ಎಂಬುದನ್ನರಿತ ಶಂಕರ ದಾಸಿಮಯ್ಯ ಅವನನ್ನು ಕ್ಷಮಿಸಿದ.



‘‘ದೇವರೇ ಎಲ್ಲವನ್ನೂ ಮಾಡುವನು, ನಿಜ. ಆದರೆ ಅದು ಯಾವಾಗಲೂ ಅರಿವಿಗೆ ಬರುವುದೆ? ಅಹಂಕಾರದಿಂದ ಕಣ್ಣು ಕಾಣದ ಜನರು ತಾವೇ



ಎಲ್ಲವನ್ನೂ ಮಾಡುತ್ತಿರುವುದಾಗಿ ತಿಳಿಯುತ್ತಾರೆ. ಅವರು ದೇವರಲ್ಲಿ ಶರಣಾಗುವುದಿಲ್ಲ. ಯಾರು ಭಗವಂತನನ್ನೇ ಆಶ್ರಯಿಸುವರೋ, ಅವರನ್ನು ಅವನು ರಕ್ಷಿಸುವನು.’’

–ಶ್ರೀಮಾತೆ ಶಾರದಾದೇವಿ

ಸುದ್ದಿ ಸಂಚಯ





ತಿರುಪತಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ೨ನೇ ವಾರ್ಷಿಕೋತ್ಸವ

೨೦೧೭ರ ಆಗಸ್ಟ್ ೫ ರಿಂದ ೮ರ ವರೆಗೆ ತಿರುಪತಿ ರಾಮಕೃಷ್ಣ ಮಿಷನ್ ಆಶ್ರಮವು ೨ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಕಾರ್ಯಕ್ರಮದ ಅಂಗವಾಗಿ ಅಧ್ಯಾಪಕರ ಸಮ್ಮೇಳನ, ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರ, ಯುವಕರಿಗಾಗಿ ಹಾಗೂ ಯುವತಿಯರಿಗಾಗಿ ಪ್ರತ್ಯೇಕ ಯುವ ಸಮ್ಮೇಳನ, ಸಾರ್ವಜನಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಆಗಸ್ಟ್ ೫ - ಅಧ್ಯಾಪಕರ ಸಮ್ಮೇಳನ: ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧.೩೦ರ ವರೆಗೆ ನಡೆದ ಈ ಸಮ್ಮೇಳನದಲ್ಲಿ ಪ್ರೊ. ಪಿ. ವೆಂಕಟರಾಮ ರೆಡ್ಡಿ, ಸ್ವಾಮಿ ಗುಣೇಶಾನಂದಜಿ ಮಹರಾಜ್ ಹಾಗೂ ಪ್ರೊ. ರಮೇಶ್ ಘಂಟಾ ಭಾಷಣ ಮಾಡಿದರು. ಸುಮಾರು ೨೦೦ ಮಂದಿ ಅಧ್ಯಾಪಕರು ಹಾಗೂ ಅಧ್ಯಾಪಕ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ಸಾಯಂಕಾಲ ತಿರುಮಲ ತಿರುಪತಿ ದೇವಸ್ಥಾನದ ವತಿಯಿಂದ ಶ್ರೀ ಸರಸ್ವತಿ ಪ್ರಸಾದ್ ಹಾಗೂ ವೃಂದದವರಿಂದ ''**ಅನ್ನಮಾಚಾರ್ಯ ಕೀರ್ತನೆಗಳ**'' **ಗಾಯನ** ಕಾರ್ಯಕ್ರಮ ನಡೆಯಿತು.

ಆಗಸ್ಟ್ ೬ - ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರ: ಬೆಳಿಗ್ಗೆ ೦೯.೩೦ ರಿಂದ ೦೧.೩೦ರ ವರೆಗೆ ಭಕ್ತರಿಗಾಗಿ ನಡೆದ ಆಧ್ಯಾತ್ಮಿಕ ಶಿಬಿರದಲ್ಲಿ ನಿರ್ದೇಶಿತ ಧ್ಯಾನ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ ನಡೆದ ಬಳಿಕ ಸ್ವಾಮಿ ಗುಣೇಶಾನಂದಂಜಿ ಹಾಗೂ ಸ್ವಾಮಿ ಸುಕೃತಾನಂದಜಿಯವರಿಂದ ಪ್ರವಚನ ನಡೆಯಿತು. ಶ್ರೀ ಗೋಪಿ ಹಾಗೂ ಸಂಗಡಿಗರಿಂದ **ವಿಶೇಷ ಭಜನೆ** ಕಾರ್ಯಕ್ರಮ ನಡೆಯಿತು.

ಸಾಯಂಕಾಲ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ವಾಮಿ ಸುಕೃತಾನಂದಜಿ ಮಹಾರಾಜ್ ಅಧ್ಯಕ್ಷತೆ ವಹಿಸಿದ್ದರು. ಸ್ವಾಮಿ ಅಚಿಂತ್ಯಾನಂದಜಿ, ಸ್ವಾಮಿ ಗುಣೇಶಾನಂದಜಿ, ಸ್ವಾಮಿ ವಿನಿಶ್ಚಿಲಾನಂದಜಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ತಿರುಪತಿ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಅನುಪಮಾನಂದಜಿಯವರು ವಾರ್ಷಿಕ ವರದಿಯನ್ನು ಮಂಡಿಸಿದರು. ಈ ಕಾರ್ಯಕ್ರಮದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಕ್ತರು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

ಆಗಸ್ಟ್ ೭ - ಯುವತಿಯರಿಗಾಗಿ ಯುವಸಮ್ಮೇಳನ: ಈ ಕಾರ್ಯಕ್ರಮ ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧ರ ವರೆಗೆ ನಡೆಯಿತು. ಇದರಲ್ಲಿ ಗುಂಟೂರು ಶ್ರೀಶಾರದಾ ಮಠದ ಪ್ರವ್ರಾಜಿಕಾ ಭವಾನಿ ಪ್ರಾಣಾ ಮಾತಾಜಿ ಹಾಗೂ ಪ್ರವ್ರಾಜಿಕಾ ಬೋಧಮಯ ಪ್ರಾಣಾ ಮಾತಾಜಿ ಪ್ರವಚನ ನೀಡಿದರು. ಕಡಪಾ ರಾಮಕೃಷ್ಣ ಮಿಷನ್ನಿನ ಸ್ವಾಮಿ ಸೇವ್ಯಾನಂದಜಿ, ಶ್ರೀ ವೈ. ಭಾಸ್ಕರ ವರ್ಮಾ ಅವರು ಈ ಕಾರ್ಯಕ್ರಮದಲ್ಲಿ ಭಾಷಣ ಮಾಡಿದರು. ಸುಮಾರು ೨೪೦ ಮಂದಿ ಬಾಲಕಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆಗಸ್ಟ್ ೮ - ಯುವಕರಿಗಾಗಿ ಯುವಸಮ್ಮೇಳನ: ಈ ಕಾರ್ಯಕ್ರಮದಲ್ಲಿ ಸ್ವಾಮಿ ಸೇವ್ಯಾನಂದಜಿ, ಡಾ. ಮುರಳೀಕೃಷ್ಣ ಹಾಗೂ ಶ್ರೀ ವೈ. ಭಾಸ್ಕರ್ ವರ್ಮಾ ಮಾತನಾಡಿದರು. ಅನಂತರ ಶಿಬಿರಾರ್ಥಿಗಳೊಡನೆ ಪ್ರಶ್ನೋತ್ತರ ನಡೆಯಿತು. ಸುಮಾರು ೨೦೦ ಮಂದಿ ಯುವಕರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.





Managing Editor : Swami Atmajnananda

Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020



೨ನೇ ಪುಟದಿಂದ...

ಆ ತುಡಿತ ಈಗ ತೀವ್ರವಾಯಿತು. ಇದರೊಂದಿಗೆ 'ಶ್ರೀರಾಮ' ನಾಮ ಜಪವೂ ಸತತ ನಡೆಯುತ್ತಿತ್ತು. ಒಂದು ದಿನ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ವೋರ್ಲಿ ಬೀಚಿನಲ್ಲಿ ಆದಂತೆ, ಇದ್ದಕ್ಕಿದ್ದಂತೆ ಅವರ ಎದೆಯಾಳದಿಂದ ಉತ್ತರ ಮೇಲೆದ್ದು ಬಂತು: ''ನಾನು ಸಂನ್ಯಾಸಿಯಾಗಬೇಕು.''

ಅಷ್ಟರ ಹೊತ್ತಿಗಾಗಲೇ ಅವರು ಮುಂಬೈ ಆಶ್ರಮದ ಸ್ವಾಮಿ ಅಪರ್ಣಾನಂದಜಿ ಮಹಾರಾಜ್ ಅವರಿಗೆ ಆತ್ಮೀಯರಾಗಿದ್ದರು. ಜೀವನದಲ್ಲಿ ಮುಂದೆ ಏನು ಮಾಡಬೇಕೆಂದು ಸಾಕಷ್ಟು ಚಿಂತನೆ ನಡೆಸಿದ ನಂತರ, ೧೯೫೨ರಲ್ಲಿ ಅವರು ಮುಂಬೈ ಆಶ್ರಮದಲ್ಲಿ ಬ್ರಹ್ಮಚಾರಿಯಾಗಿ ಸೇರಿಕೊಂಡರು. ಅದು ಶ್ರೀರಾಮಕೃಷ್ಣರ ಪವಿತ್ರ ಜನ್ಮದಿನವಾಗಿತ್ತು. ಆಗ ಅವರಿಗೆ ೨೨ ವರ್ಷ ವಯಸ್ಸು. ಅದೇ ವರ್ಷದ ಕೊನೆಯ ಭಾಗದಲ್ಲಿ ಅವರು ಮುಂಬೈ ಆಶ್ರಮಕ್ಕೆ ಭೇಟಿಯಿತ್ತ ರಾಮಕೃಷ್ಣ ಮಹಾಸಂಘದ ಏಳನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆ ಪಡೆದರು. ಅವರಿಂದಲೇ ೧೯೫೬ರಲ್ಲಿ ಬ್ರಹ್ಮಚರ್ಯ ದೀಕ್ಷೆಯನ್ನೂ, ೧೯೬೦ರಲ್ಲಿ ಸಂನ್ಯಾಸದೀಕ್ಷೆಯನ್ನೂ ಪಡೆದರು.

ಮುಂಬೈ ಆಶ್ರಮದಲ್ಲಿ ಅವರು ಬ್ರಹ್ಮಚಾರಿಯಾಗಿದ್ದಾಗ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತ ಸೇವೆ ಸಲ್ಲಿಸಿದರು. ಔರಂಗಬಾದ್ ಜಿಲ್ಲೆಯಲ್ಲಿ ನಡೆದ ಬರ ಪರಿಹಾರ ಕಾರ್ಯದ ಶಿಬಿರದಲ್ಲಿ ಅವರು ಭಾಗವಹಿಸಿ, ಉಳಿದ ಸಂನ್ಯಾಸಿಗಳೊಂದಿಗೆ ಅಲ್ಲಿನ ಕೆಲಸಗಳನ್ನು ಸಮರ್ಥವಾಗಿ ನೆರವೇರಿಸಿದರು.



೧೯೫೪ರಲ್ಲಿ ಅವರು ಮೊದಲ ಬಾರಿಗೆ ಬೇಲೂರು ಮಠಕ್ಕೆ ಭೇಟಿಯಿತ್ತರು. ಆಗ ಮುಂಬೈ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಂಬುದ್ಧಾನಂದಜಿಯವರೊಂದಿಗೆ ಅಲ್ಲಿಗೆ ಹೋಗಿದ್ದರು. ಈ ಸಂದರ್ಭದಲ್ಲಿ ಅವರು ಶ್ರೀಮಾತೆ ಶಾರದಾದೇವಿಯವರ ಜನ್ಮ ಶತಮಾನೋತ್ಸವ ಹಾಗೂ ಅವರ ಹುಟ್ಟೂರಾದ ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಮಂದಿರದ ಉದ್ಘಾಟನಾ ಸಮಾರಂಭಗಳಲ್ಲಿ ಭಾಗವಹಿಸಿದರು.

೧೯೫೮ರಲ್ಲಿ ಪೂಜ್ಯ ಸ್ವಾಮೀಜಿಯವರಿಗೆ ಅದ್ವೈತ ಆಶ್ರಮದ ಕೊಲ್ಕತ್ತಾ ಶಾಖೆಗೆ ವರ್ಗವಾಯಿತು. ೧೯೬೧ರಲ್ಲಿ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಉಪಸಂಪಾದಕರಾಗಿ ನಿಯೋಜಿತರಾದ ಅವರು, ಉತ್ತರಾಖಂಡದ ಮಾಯಾವತಿಯಲ್ಲಿರುವ ಅದ್ವೈತ ಆಶ್ರಮದ ಮೂಲ ಕೇಂದ್ರಕ್ಕೆ ಹೋದರು. ಪತ್ರಿಕೆಯ ಕೆಲಸವಲ್ಲದೆ ಮಾಯಾವತಿ ಆಶ್ರಮದ ಗೋಶಾಲೆ, ತೋಟಗಾರಿಕೆ ಹಾಗೂ ಅಲ್ಲಿನ ಇತರ ಚಟುವಟಿಕೆಗಳಲ್ಲೂ ಅವರು ಆಸಕ್ತಿಯಿಂದ ತಮ್ಮನ್ನು ತೊಡಗಿಸಿಕೊಂಡರು. ಅವರು ತಮ್ಮ ಹೆಚ್ಚಿನ ದಿನಗಳನ್ನು ಅದ್ವೈತ ಆಶ್ರಮದ ಕೋಲ್ಕತ್ತಾ ಶಾಖೆಯಲ್ಲೇ ಕಳೆದರೂ, ಹಲವು ಬಾರಿ ಮಾಯಾವತಿಗೂ ಭೇಟಿ ನೀಡಿ, ಅಲ್ಲೂ ಅನೇಕ ದಿನಗಳನ್ನು ಕಳೆದರು. ಅದ್ವೈತ ಆಶ್ರಮವು ಪ್ರಧಾನವಾಗಿ ಪ್ರಕಟಣಾ ಸಂಸ್ಥೆಯಾಗಿರುವುದರಿಂದ, ಅಲ್ಲಿನ ಪ್ರಕಟಣೆಗಳ ಗುಣಮಟ್ಟವನ್ನು ಹೆಚ್ಚಿಸಲು ಸ್ವಾಮೀಜಿ ವಿಶೇಷ ಕಾಳಜಿ ವಹಿಸಿದರು. ಅದಕ್ಕಾಗಿ ಅವರಿಗೆ ಅಪಾರ ಮೆಚ್ಚುಗೆ ಪ್ರಾಪ್ತವಾಯಿತು.

೧೯೭೬ರಲ್ಲಿ ಅವರು ಬೇಲೂರು ಮಠದ ಪಕ್ಕದಲ್ಲೇ ಇರುವ ವಿದ್ಯಾಕೇಂದ್ರವಾದ 'ರಾಮಕೃಷ್ಣ ಮಿಷನ್ ಶಾರದಾಪೀಠ'ದ ಕಾರ್ಯದರ್ಶಿ

ಯಾಗಿ ನಿಯುಕ್ತರಾದರು. ೧೫ ವರ್ಷಗಳ ದೀರ್ಘಕಾಲ ಅವರು ಅಲ್ಲಿನ ಮುಖ್ಯಸ್ಥರಾಗಿದ್ದರು. ಈ ಅವಧಿಯಲ್ಲಿ ಅಲ್ಲಿನ ವಿದ್ಯಾ ಭ್ಯಾಸ ಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳು ಗಮನಾರ್ಹ ಬೆಳವಣಿಗೆಯನ್ನು ಕಂಡವು. ೧೯೮೩ರಲ್ಲಿ ಸ್ವಾಮೀಜಿಯವರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ವಿಶ್ವಸ್ತ (trustee)ರಾಗಿ ಆಯ್ಕೆಯಾದರು. ೧೯೯೧ರಲ್ಲಿ ಸ್ವಾಮೀಜಿ ಶಾರದಾಪೀಠದಿಂದ ವರ್ಗವಾಗಿ, ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ನೇಮಕ ಹೊಂದಿದರು. ಅವರ ಈ ಅವಧಿಯಲ್ಲೇ ಚೆನ್ನೈ ಆಶ್ರಮದ 'ರಾಮಕೃಷ್ಣ ವಿಶ್ವ ಭಾವೈಕ್ಯ ಮಂದಿರ'ದ ನಿರ್ಮಾಣ ಕಾರ್ಯವು ಆರಂಭಗೊಂಡಿತು.



೧೯೯೫ರ ಏಪ್ರಿಲ್‌ನಲ್ಲಿ ಅವರು ಸಹಕಾರ್ಯದರ್ಶಿಯಾಗಿ ನಿಯಮಿತರಾಗಿ, ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಹಾ ಸಂಘದ ಪ್ರಧಾನ ಕೇಂದ್ರ ಕಛೇರಿಗೆ ಬಂದರು. ಎರಡು ವರ್ಷಗಳ ನಂತರ ಅವರು ಮಹಾಸಂಘದ ಪ್ರಧಾನ ಕಾರ್ಯ ದರ್ಶಿಯಾಗಿ ನಿಯೋಜಿತರಾದರು; ೨೦೦೭ರ ನವೆಂಬರ್ ವರೆಗಿನ ಹತ್ತು ವರ್ಷಗಳ ದೀರ್ಘ ಅವಧಿ ಅವರು ಈ ಉನ್ನತ ಸ್ಥಾನದಲ್ಲಿ ಕಾರ್ಯ ನಿರ್ವಹಿಸಿದರು. ಈ ಮೂಲಕ ಅವರು ಪ್ರಪಂಚದಾದ್ಯಂತ ಹರಡಿರುವ ರಾಮಕೃಷ್ಣ ಭಾವಧಾರೆಯ ಮುನ್ನಡೆಗೆ ಕಾರಣರಾದರು. ಅವರು ೨೦೦೭ ರಲ್ಲಿ ಸಂಘದ ಉಪಾಧ್ಯಕ್ಷರಾಗಿ ಆಯ್ಕೆಯಾದರು.



ಅವರು ಪ್ರಧಾನಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ದ್ದಾಗ ಭಾರತ ಹಾಗೂ ವಿದೇಶಗಳಲ್ಲಿರುವ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಹಲವು ಶಾಖಾ ಕೇಂದ್ರಗಳಿಗೂ, ಅಲ್ಲಿನ ಹಲವು ಖಾಸಗಿ ಸಂಸ್ಥೆ ಗಳಿಗೂ ಭೇಟಿ ಕೊಟ್ಟರು. ಈ ಮೂಲಕ ಅವರು ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾ ದೇವಿ, ಸ್ವಾಮಿ ವಿವೇಕಾನಂದರ ಹಾಗೂ ವೇದಾಂತದ ಸಂದೇಶವನ್ನು ವ್ಯಾಪಕ ಜನಸಮುದಾಯಕ್ಕೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಇದರೊಂದಿಗೆ, ಹಲವು ಪತ್ರಿಕೆಗಳಲ್ಲಿ ಅವರ ಅನೇಕ ಲೇಖನಗಳು ಪ್ರಕಟವಾಗಿವೆ.



ಸುಮಾರು ಒಂದು ದಶಕದವರೆಗೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಬಳಿಕ ಪೂಜ್ಯ ಸ್ವಾಮೀಜಿಯವರು ಈಗ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿ ಆಯ್ಕೆ ಯಾಗಿದ್ದಾರೆ.



ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid
Travel & Tours

10 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ,
ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ,
ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

ಸಿಂಗಾಪುರ್



8 ದಿನಗಳ ಥೈಲ್ಯಾಂಡ್ - ಕಾಂಬೋಡಿಯ ಪ್ರವಾಸ

ಕಾಂಬೋಡಿಯ - ಸಿಯಾಮ್‌ರಿಪ್, ಅಂಕೊರ್‌ವಾಟ್,
ತೋಂಲ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

ಕಾಂಬೋಡಿಯಾ



18 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ

ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್, ಮೆಲ್ಬೋರ್ನ್ (ಆಸ್ಟ್ರೇಲಿಯಾ)
ಆಕ್ಲೆಂಡ್, ರೊಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್ (ನ್ಯೂಜಿಲ್ಯಾಂಡ್)

ಆಸ್ಟ್ರೇಲಿಯಾ



7 ದಿನಗಳ ಜಪಾನ್ ಪ್ರವಾಸ

ಹೈ ಸ್ಪೀಡ್ ಬುಲೆಟ್ ರೈಲಿನಲ್ಲಿ ಪ್ರಯಾಣದ ಅನುಭವ ಹಾಗೂ ಜಪಾನ್ ರಾಜಧಾನಿ ಟೋಕಿಯೋ
ಪ್ರವಾಸ ಸ್ಥಳ : ಒಸಾಕಾ, ಹಿರೋಷಿಮಾ, ಕ್ಯೋಟೋ, ಮೌಂಟ್‌ಫುಜಿ ನಾರ ನಗರ ವೀಕ್ಷಣೆ ಹಾಗೂ ಇತರೆ

ಜಪಾನ್



5 ದಿನಗಳ ದುಬೈ, ಅಬುಧಾಬಿ, ಶಾರ್ಜ ಪ್ರವಾಸ

ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ
ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್

ದುಬೈ




ಪ್ರಧಾನ ಕಛೇರಿ : ಬಸವನಗುಡಿ
ನಂ. 98, 1ನೇ ಮಹಡಿ, ಡಿವಿಜಿ ರಸ್ತೆ
ಬಸವನಗುಡಿ, ಬೆಂಗಳೂರು - 560004.
ಫೋನ್: 080-26670646, 26621983
ಮೊಬೈಲ್ : 9900080793, 9900080799

ಶಾಖಾ ಕಛೇರಿ : ಮಲ್ಲೇಶ್ವರಂ
ನಂ.198, 1ನೇ ಮಹಡಿ, 11ನೇ ಕ್ರಾಸ್, ಯತಿರಾಜಮಠ
ಬಿಲ್ಡಿಂಗ್, ಮಲ್ಲೇಶ್ವರಂ, ಬೆಂಗಳೂರು - 560003.
ಫೋನ್: 080-41204155, 23445559
ಮೊಬೈಲ್ : 9900080792

www.orchidtours.net

VIVEKA PRABHA (KANNADA MONTHLY)
September 2017, Vol.18, No. 9, No. of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2015-17. LICENCED TO POST W.P.P.AT YADAVAGIRI
MYSORE 570 020, VIDE LICENCE NO.SK/WPP/MYS/155/2015-17



Printed at mayur graphics,Bangalore